ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪದವಿಯ ಸಂಪ್ರಬಂಧ

ಕುವೆಂಪುರವರ ಪಕ್ಷಿಕಾಶಿ ಕವನ ಸಂಕಲನ
ಒಂದು ಅಧ್ಯಯನ

ಸಂಶೋಧನ ವಿದ್ಯಾರ್ಥಿ
ಅಮರನಾಥ್.ಎನ್

ಮಾರ್ಗದರ್ಶಕರು
ಡಾ|| ಪಿ.ವಿ.ನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಬೆಂಗಳೂರು

265

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪದವಿಯ ಸಂಪ್ರಬಂಧ

ಕುವೆಂಪುರವರ ಪಕ್ಷಿಕಾಶಿ ಕವನ ಸಂಕಲನ ಒಂದು ಅಧ್ಯಯನ

ಸಂಶೋಧನ ವಿದ್ಯಾರ್ಥಿ

ಅಮರನಾಥ್.ಎನ್

ಮಾರ್ಗದರ್ಶಕರು

ಡಾ॥ ಪಿ.ವಿ.ನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೭–೨೦೦೮ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಕುವೆಂಪುರವರ ಪಕ್ಷಿಕಾಶಿ ಕವನ ಸಂಕಲನ – ಒಂದು ಅಧ್ಯಯನ"** ಎಂಬ ಸಂಪ್ರಬಂಧವನ್ನು ಡಾ॥ ಪಿ.ವಿ.ನಾರಾಯಣ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈ ವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 13-10-2008

ಸ್ಥಳ: ಬೆಂಗಳೂರು

ಸಹಿ

(ಅಮರನಾಥ್.ಎನ್)

ಮಾರ್ಗದರ್ಶಕರ ಪ್ರಮಾಣಪತ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೭–೨೦೦೮ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಕುವೆಂಪುರವರ ಪಕ್ಷಿಕಾಶಿ ಕವನ ಸಂಕಲನ – ಒಂದು ಅಧ್ಯಯನ"** ಎಂಬ ಸಂಪ್ರಬಂಧವನ್ನು ಅಮರನಾಥ್.ಎನ್ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: ೧೪.೧೦.೨೦೦೮

ಸ್ಥಳ: ಬೆಂಗಳೂರು

ಸಹಿ

(ಪಿ.ವಿ.ನಾರಾಯಣ)

ಪರಿವಿಡಿ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ

ಕುವೆಂಪುರವರು ೧೯೦೪ ಡಿಸೆಂಬರ್ ೨೯ ರಂದು ಹಿರೇಕೊಡಿಗೆಯಲ್ಲಿ ಅಂದರೆ ತಾಯಿಯ ತೌರೂರಿನಲ್ಲಿ ಜನಿಸಿದರು. ಇವರ ತಂದೆ ವೆಂಕಟಪ್ಪ ಗೌಡರು ಹಾಗೂ ತಾಯಿ ಸೀತಮ್ಮನವರು. ಕುವೆಂಪುರವರು ತಮ್ಮ ಎಂ.ಎ ಪದವಿಯನ್ನು ಮೈಸೂರಿನಲ್ಲಿ ಮುಗಿಸಿದ ಇವರು ಮೈಸೂರು ಯುವರಾಜ ಕಾಲೇಜಿನಲ್ಲಿ ಉಪನ್ಯಾಸಕರಾಗಿ ವಿವಿಧ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಕೆಲವು ಕಾಲ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಕುವೆಂಪುರವರು ಹಲವಾರು ಸಾಹಿತ್ಯ ಪ್ರಕಾರಗಳಲ್ಲಿಯೂ ಅಂದರೆ ಕಾವ್ಯ, ನಾಟಕ, ಕಥೆ, ಕಾದಂಬರಿ, ವಿಮರ್ಶೆ, ಪ್ರಬಂಧ ಹೀಗೆ ಹಲವು ಕ್ಷೇತ್ರಗಳಲ್ಲಿ ನಮ್ಮ ಛಾಪನ್ನು ಉಂಟುಮಾಡಿದರು.

ಕುವೆಂಪುರವರನ್ನು ಕನ್ನಡದ ವರ್ಡ್ಸ್‌ವರ್ತ್ ಎಂದೇ ಕರೆಯಲಾಗುತ್ತದೆ. ನಿಸರ್ಗವನ್ನು ಕುರಿತ ವ್ಯಾಮೋಹ ಬಹುಷಃ ಇದಕ್ಕೆ ಕಾರಣವಿರಬಹುದು. ಮಲೆನಾಡಿನ ಮಡಿಲಲ್ಲಿ ಹುಟ್ಟಿ ಬೆಳೆದ ಚೇತನಕ್ಕೆ ಪ್ರಕೃತಿಯನ್ನು ಕುರಿತು ಎಷ್ಟು ಹಾಡಿದರೂ ಸಾಲದು ಅವರೇ ಹೇಳುವಂತೆ ಕೈ ಮುಗಿದು ಒಳಗೆ ಬಾ ಇದು ಸಸ್ಯಕಾಶಿ ಎಂಬುದು ಒಂದು ಹೊಸ ಅನುಭವದ ಹೂರಣವನ್ನೇ ಕಲ್ಪಿಸುತ್ತಾರೆ. ವರ್ಡ್ಸ್‌ವರ್ತ್ ಪ್ರಭಾವದ ಜೊತೆಗೆ ಕಾವ್ಯ ಹುಟ್ಟಿ ಬೆಳೆದ ಪರಿಸರ ಈ ಎರಡೂ ಮಿಳಿತಗೊಂಡಂತಹ ಪರಿಣಾಮದಲ್ಲಿ ಕವಿ ಕುವೆಂಪು ನಿಸರ್ಗವನ್ನು ಕುರಿತಂತಹ ಅಭಿವ್ಯಕ್ತಿಯೇ ಒಂದು ರೀತಿಯಲ್ಲಿ ವಿಶಿಷ್ಟವಾದುದಾಗಿದೆ.

ಈ ಹಿನ್ನೆಲೆಯಲ್ಲಿ ಕುವೆಂಪುರವರ ಬದುಕು ಬರಹಗಳು ಅತ್ಯಂತ ಉನ್ನತವಾದವು. ಕುವೆಂಪು ಕವಿಯಾಗಿ ವೈವಿಧ್ಯಮಯವೂ, ವಿಸ್ತಾರವೂ ಆದ ಕಾವ್ಯ ರಚನೆಯನ್ನು ಮಾಡಿದ್ದಾರೆ. ಅಷ್ಟೆ ಅಲ್ಲದೆ ವಸ್ತು, ಶೈಲಿ, ಛಂದಸ್ಸುಗಳಲ್ಲಿ ವಿವಿಧ ಪ್ರಯೋಗಗಳನ್ನು ನಡೆಸಿದ್ದಾರೆ. ಈ ನಡುವೆ 'ಬೊಮ್ಮನ ಹಳ್ಳಿ ಕಿಂದರ ಜೋಗಿ' ಕವನದಿಂದ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯದವರೆಗೂ ಅವರ ಸಾಹಿತ್ಯ ಕೃಷಿ ಸುದೀರ್ಘವಾದದ್ದು. ಅದಲ್ಲದೆ ಅವರ ಕಾವ್ಯ ಬೆಳೆದು ಬಂದ ಬಗೆ ಕುತೂಹಲಕರವಾಗಿದ್ದು ಮತ್ತು ವಿಸ್ಮಯವನ್ನು ಮೂಡಿಸುತ್ತದೆ. ಕುವೆಂಪುರವರು ಪ್ರಾರಂಭದಲ್ಲಿ ಇಂಗ್ಲಿಷ್

ಸಾಹಿತ್ಯದಲ್ಲಿ ತಮ್ಮ ಸಾಹಿತ್ಯ ರಚನೆಯನ್ನು ಮಾಡತೊಡಗಿದರು. ಆದರೆ ಅವರು ಬರೆದ ಕವನಗಳನ್ನು ಓದಿದ ಕಸಿನ್ಸ್‌ರವರು ಕುವೆಂಪುರವರಿಗೆ ಮಾತೃಭಾಷೆಯಲ್ಲಿ ಬರೆಯಲು ಹೇಳಿದರು. ಇದೇ ಕಸಿನ್ಸ್ ಪರಿಣಾಮದಿಂದ ಕುವೆಂಪುರವರು ಕನ್ನಡಕ್ಕೆ ಒಲಿದರು.

ಸಾಹಿತ್ಯ ಸಾಗರದಲ್ಲಿ ಅವರ 'ಪಕ್ಷಿಕಾಶಿ' ಕವನ ಸಂಕಲವು ಸಹ ಒಂದು. ಈ ಒಂದು ಸಂಕಲನ ಪ್ರಕೃತಿ ಗೀತೆಗಳಿಗೆ ಪ್ರಸಿದ್ಧವಾಗಿದ್ದರೂ ಸಹ ಒಂದು ವಿಶೇಷ ರೀತಿಯ ಕುತೂಹಲವನ್ನು ಉಳಿಸಿಕೊಂಡಿದೆ. ಈ ದೃಷ್ಟಿಯಿಂದ ಅಧ್ಯಯನ ಮುಖ್ಯವಾಗುತ್ತದೆ. ಪ್ರಕೃತಿ ಕವನಗಳಲ್ಲಿ ವರ್ಡ್ಸ್‌ವರ್ತ್ ಕವಿಯ ಪ್ರಭಾವವಿದ್ದರೂ ಸಹ ವರ್ಡ್ಸ್‌ವರ್ತ್ ಕವಿಯಂತೆ ಪ್ರಕೃತಿಯಲ್ಲಿ ರೌದ್ರತೆ, ಜನ ಸಂದಣಿಯನ್ನು ಕಾಣುವುದಿಲ್ಲ. ಇದಕ್ಕೆ ಕುವೆಂಪು ತಮ್ಮ ಒಂದು ಲೇಖನದಲ್ಲಿ "ಕವಿಗಳೆಲ್ಲ ಒಂದೆ ತೆರನಲ್ಲ, ಒಬ್ಬೊಬ್ಬ ಕವಿಯೂ ವಿಶಿಷ್ಟ ವ್ಯಕ್ತಿ. ಒಬ್ಬೊಬ್ಬನದೂ ಸಂಸ್ಕಾರ ಬೇರೆ, ಬದುಕು ಬೇರೆ, ಜೀವಿತೋದ್ದೇಶ ಬೇರೆ, ಸ್ವಭಾವ ಸ್ವಧರ್ಮಗಳೂ ಬೇರೆ ಬೇರೆ. ಆಶೆ, ರುಚಿ, ಅಭಿರುಚಿ, ವಿದ್ಯೆ, ಸಂಸ್ಕೃತಿ ಎಲ್ಲ ಬೇರೆ ಬೇರೆ. ಊರಿಂದೂರಿಗೆ ನಾಡಿಂದ ನಾಡಿಗೆ ದೇಶದಿಂದ ದೇಶಕ್ಕೆ ಈ ವ್ಯಕ್ತಿತ್ವದ ವ್ಯತ್ಯಾಸಗಳು ಹೆಚ್ಚುತ್ತಾ ಹೋಗುತ್ತದೆ. ಅದರಂತೆ ಪ್ರಕೃತಿಯೂ ವ್ಯತ್ಯಾಸವಾಗುತ್ತದೆ. ಮರುಭೂಮಿಗೂ ಮಲೆನಾಡಿಗೂ ಎಷ್ಟು ವ್ಯತ್ಯಾಸ! ಮೈಸೂರಿನ ಚೆಲುವಿನ ಬೃಂದಾವನಕ್ಕೂ ಅಸ್ಸಾಮಿನ ಭೂಕಂಪದ ಪ್ರದೇಶಕ್ಕೂ ಎಷ್ಟು ವ್ಯತ್ಯಾಸ! ಉತ್ತರ ಧ್ರುವದ ಕಟುಶೈತ್ಯಕ್ಕೂ ಅರೇಬಿಯಾದ ಉಗ್ರೋಷ್ಣಕ್ಕೂ ಎಷ್ಟು ವ್ಯತ್ಯಾಸ! ಪ್ರಕೃತಿ ಒಂದೆಡೆ ರಮಣೀಯವಾದರೆ ಮತ್ತೊಂದೆಡೆ ರುದ್ರ. ಒಮ್ಮೆ ಇಂದುವದನೆ ಕುಂದರದನೆ ಪ್ರಕೃತಿ ರೂಪಸಿ; ಇನ್ನೊಮ್ಮೆ ರಕ್ತಮುಖಿ ರಕ್ತನಖಿ ಪ್ರಕೃತಿ ರಾಕ್ಷಕಿ. ನೆಮ್ಮದಿಯಾಗಿರುವ ಸುಂದರ ಪ್ರದೇಶದಲ್ಲಿ ಹುಟ್ಟಿ ಬೆಳೆದು ಬಾಳು ಸಾಗಿಸುವ ಕವಿಗೆ ಪ್ರಕೃತಿ ರೂಪಸಿಯಾಗುತ್ತಾಳೆ. ಸರ್ವದಾ ಕಷ್ಟ ಕ್ಲೇಶ ಕಂಟಕಮಯವಾದ ಕ್ರೂರ ಪ್ರದೇಶದಲ್ಲಿ ಕಡಿದು ಬದುಕುವ ಕವಿಗೆ ಪ್ರಕೃತಿ ರಾಕ್ಷಸಿಯಾಗುತ್ತಾಳೆ." ಈ ಹಿನ್ನೆಲೆಯಲ್ಲಿ ಪ್ರಕೃತಿ ಸುಂದರವಾಗಿ ಕಂಡ ಕುವೆಂಪುರವರಲ್ಲಿ ಪ್ರಕೃತಿಯ ಭಾವ ಬೆಡಗು, ರಮಣೀಯ, ಲಲಿತ, ಭವ್ಯ ಸೌಂದರ್ಯದಿಂದ ಅದ್ಭುತವಾಗಿ ಕಾಣುತ್ತದೆ.

ಇದೇ ಅಲ್ಲದೇ ಕುವೆಂಪು ಕಾವ್ಯದಲ್ಲಿ ನಿಸರ್ಗ ಮೈದೋರಿದ ಬಗೆ ಗರಿಕೆಯಿಂದ ಗಗನದವರೆಗೆ ಅಣುವಿನಿಂದ ಬ್ರಹ್ಮಾಂಡದವರೆಗೆ ಅವರ ಪ್ರಕೃತಿ ಪ್ರೇಮ ಆವರಿಸಿದೆ ಹಾಗೂ

ಭಾವಗೀತೆಗಳಲ್ಲಿ ಕಂಡು ಬರುವ ನಿಸ್ಸಿಮ ಪ್ರಕೃತಿ ಪ್ರೇಮ ಮಲೆನಾಡಿನ ವಿಶಿಷ್ಟತೆ ಹಿನ್ನೆಲೆಯಲ್ಲಿ ಮೂಡಿಬಂದಿದೆ.

ಒಟ್ಟಾರೆಯಾಗಿ ಕುವೆಂಪುರವರ ಪ್ರಕೃತಿ ಪ್ರೇಮ ಅದು ಕಾವ್ಯದಲ್ಲಿ ಮೂಡಿದ ಬಗೆ ಎಂದರೆ ಪ್ರಭುಶಂಕರರು ತಮ್ಮ 'ಕನ್ನಡ ಭಾವಗೀತೆ' ಕೃತಿಯಲ್ಲಿ ಗುರುತಿಸಿದಂತೆ

ಯಾರೂ ತುಳಿಯದ ಹಾದಿಯ ಬದಿಯಲಿ
ಮೌನದೊಳಿರುವಳು ಈ ಚೆಲುವೆ
ಪ್ರಕೃತಿಯ ಸುಂದರ ಹಂದರದಲ್ಲಿ
ವಧುವಾಗಿರುವಳು ಈ ಮುಗುದೆ[3]

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ಕುವೆಂಪು ಪ್ರಕೃತಿಯನ್ನು ವರ್ಣಿಸಿದ ರೀತಿಯಲ್ಲಿ ಯಾರು ವರ್ಣಿಸಲಾರರು. ಆದ್ದರಿಂದ ನಿಸರ್ಗ ಸೌಂದರ್ಯವನ್ನು ಕವನಗಳಲ್ಲಿ ಸೆರೆ ಹಿಡಿದ ಕುವೆಂಪುರವರಿಗೆ ಪ್ರಕೃತಿ ವಧುವಿನ ಶೃಂಗರವೇ ಆಗಿದೆ.

ಈ ರೀತಿಯಲ್ಲಿ ಕುವೆಂಪುರವರ ಕವನಗಳು ಪ್ರಕೃತಿ ವೈವಿಧ್ಯತೆ ಮತ್ತು ವೈಶಿಷ್ಟತೆಯಲ್ಲಿ ಮೂಡಿಬಂದಿರುವ ಬಗೆ ಹಾಗೂ ಪ್ರಕೃತಿಯನ್ನು ಮತ್ತು ಅದರಲ್ಲಿ ಅಡಗಿರುವ ಇತರ ಅಂಶವನ್ನು ಸಹ ಗುರುತಿಸುವುದು ಅಧ್ಯಯನದ ಉದ್ದೇಶವಾಗಿದೆ. ನಂತರ ಇದರ ಜೊತೆಯಲ್ಲೇ ಕುವೆಂಪುರವರ ಪ್ರಥಮ ಸಂಕಲನವಾದ 'ಕೊಳಲು' ಕವನ ಸಂಕಲನವನ್ನು ಸಹ ಸಾಂದರ್ಭಿಕವಾಗಿ ಅನ್ವಯಿಸುತ್ತಾ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇಲ್ಲಿ ಕುವೆಂಪುರವರು ಕವಿಯಾಗಿ ಪ್ರಾರಂಭದಲ್ಲಿದ್ದ ಮನೋಧರ್ಮದ ಜೊತೆಗೆ 'ಪಕ್ಷಿಕಾಶಿ' ಸಂಕಲನದಲ್ಲಿ ಮೂಡಿಬಂದಿರುವ ಭಾವಪೂರ್ಣತೆಯ ಕೆಲವು ಅಂಶಗಳನ್ನು ಸಹ ಚರ್ಚೆಗೆ ತರಬಹುದಾಗಿದೆ. ಆದ್ದರಿಂದ 'ಕೊಳಲು' ಸಂಕಲನವನ್ನು ಸಹ ಬಳಸಿಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿಯೇ ಎರಡನೇ ಅಧ್ಯಾಯದಲ್ಲಿ 'ಪಕ್ಷಿಕಾಶಿ' ಕವನ ಸಂಕಲನವನ್ನು ಅಧ್ಯಯನಕ್ಕೆ ಒಳಗುಮಾಡುತ್ತಾ ಅದರಲ್ಲಿ ಪ್ರಕೃತಿ ಕವನಗಳ ವಸ್ತುವನ್ನು ಕೇಂದ್ರವಾಗಿಟ್ಟು ಕೊಂಡು ಈ ಕವನ ಸಂಕಲನದಲ್ಲಿ ಕಾಣುವ ಪ್ರಕೃತಿ ಸೌಂದರ್ಯ ಮತ್ತು ವಸ್ತು

ವಿಶಿಷ್ಟತೆಯನ್ನು ಅಭ್ಯಸಿಸುವುದಾಗಿದೆ. ಇಲ್ಲಿ ಕಾಣುವ ಸೂರ್ಯೋದಯ ಗೀತೆಗಳು, ಚಂದ್ರೋದಯ ಗೀತೆಗಳು, ಚೈತನ್ಯ ಪೂರ್ಣವಾದ ಮಲೆನಾಡಿನ ಸೌಂದರ್ಯ ಗೀತೆಗಳು ಸಹ ಒಳಗೊಳ್ಳುತ್ತದೆ. ಹಾಗೂ ಪ್ರಕೃತಿಯನ್ನು ಪ್ರವೇಶ ಮಾಡುವ ಸಂದರ್ಭದಲ್ಲಿ ಕುವೆಂಪುರವರು 'ಕೊಲ್ವ ಬತ್ತಳಿಕೆ ಬಿಲ್ಲು ಬಾಣವನು ಅಲ್ಲೆ ಇಟ್ಟು ಬಾ' ಎಂಬಂತಹ ಭಾವಪೂರ್ಣ ತನ್ಮಯತೆಯಲ್ಲಿ ಕುವೆಂಪುರವರ ಕವನಗಳು ಸಜೀವವೆನ್ನುವಂತೆ ಮೂಡುತ್ತದೆ. ಜೊತೆಗೆ ಕವಿ, ಕವಿ ಕಾಣುವ ನಿಸರ್ಗ ವಸ್ತು, ಕವಿಗೂ ನಿಸರ್ಗಕ್ಕೂ ಏರ್ಪಡುವ ಸೌಂದರ್ಯವನ್ನು ಗುರುತಿಸುವುದಾಗಿದೆ. ಒಟ್ಟಾರೆಯಾಗಿ ಕುವೆಂಪುರವರು ಕವನಗಳಲ್ಲಿ ಮೂಡಿಸಿದ ಪ್ರಕೃತಿ ಸೌಂದರ್ಯದ ವಿವಿಧ ಮುಖಗಳನ್ನು ಅಧ್ಯಯನದ ಮೂಲಕ ತಿಳಿಯುವ ಪ್ರಯತ್ನ ಇದಾಗಿದೆ.

ಎರಡನೆಯ ಅಧ್ಯಾಯದಲ್ಲಿ 'ಪಕ್ಷಿಕಾಶಿ' ಸಂಕಲನದಲ್ಲಿ ಅಭಿವ್ಯಕ್ತವಾದ ಪರಿಸರದ ಚಿತ್ರಣವನ್ನು ಮತ್ತು ವಸ್ತುಗಳನ್ನು ಗುರುತಿಸಿದಂತೆ ಮೂರನೆಯ ಅಧ್ಯಾಯದಲ್ಲಿ ಕುವೆಂಪುರವರು ಪ್ರಕೃತಿಯನ್ನು ಕುರಿತಂತೆ ಪರಿಭಾವಿಸಿರುವ ವೈಶಿಷ್ಟತೆಯನ್ನು ಅಧ್ಯಯನ ಮಾಡುವುದಾಗಿದೆ. ಆದರೆ ಈ ಅಧ್ಯಾಯದ ಪ್ರಾರಂಭದಲ್ಲೇ ಮುಖಾಮುಖಿಯಾಗುವ ಅಂಶವೆಂದರೆ ಕುವೆಂಪುರವರ ಕವನಗಳು ಅಧ್ಯಾತ್ಮದಿಂದ ಕೂಡಿರುವಂತಹ ಕವನಗಳೇ? ಎಂಬ ಪ್ರಶ್ನೆ ಎದುರಾಗುತ್ತದೆ. ಆದರೆ ಕುವೆಂಪುರವರು ಇಲ್ಲಿಯೂ ಸಹ ದೇವರನ್ನು ಆರಾಧಿಸಿಲ್ಲ ಮತ್ತು ಸಾಕ್ಷಿಕರಿಸಿಲ್ಲ. ಆದ್ದರಿಂದ ಕುವೆಂಪುರವರು ಪ್ರಕೃತಿಯ ಸೌಂದರ್ಯದಲ್ಲಿ ಅಂತರ್ಮುಖಿಯಾದಂತೆ ಅಪೂರ್ವಶಾಂತಿಯ ಕಡೆ ಚಲಿಸಿದಂತೆಲ್ಲಾ ಅವು ಆಧ್ಯಾತ್ಮ ರೀತಿಯ ಕವನಗಳಂತೆ ಕಾಣುತ್ತದೆ. ಈ ಅಂಶವನ್ನು ಅಧ್ಯಯನದಲ್ಲಿ ವಿಷದಪಡಿಸಬಹುದಾಗಿದೆ.

ನಂತರದಲ್ಲಿ ಪ್ರಕೃತಿಯ ಕವನಗಳಲ್ಲಿ ಸತ್ಯ-ಶಿವ-ಸುಂದರ ಸಮೀಕರಣವಾಗುವ ಹಂತವನ್ನು ಗುರುತಿಸಬಹುದಾಗಿದೆ. ಅಂದರೆ ತಮ್ಮ ಕವನಗಳಲ್ಲಿ ಪ್ರಕೃತಿಯ ಮೂಲಕ ಶಿವನನ್ನು ಕಾಣುವ ಕುವೆಂಪು ಕವನದಲ್ಲಿ ಶಿವನ ಸಾಕ್ಷಾತ್ಕಾರಕ್ಕೆ ಸೌಂದರ್ಯವನ್ನು ಮಾಧ್ಯಮವನ್ನಾಗಿ ಮಾಡಿಕೊಂಡಿದ್ದಾರೆ ಎಂಬುದು ಮುಖ್ಯವಾಗುತ್ತದೆ. ಹೀಗೆ ಅಧ್ಯಯನದಲ್ಲಿ ಮುಂದುವರಿದಂತೆ ಕುವೆಂಪುರವರು ಪ್ರಕೃತಿಯಲ್ಲಿ ಪ್ರಜ್ಞೆ ಮತ್ತು ಸೌಂದರ್ಯದ ಮೂಲಕ ದರ್ಶನ ದೀಪ್ತಿಯನ್ನು ಪಡೆಯುತ್ತಾರೆ ಎಂಬುದು

ಗೋಚರವಾಗುತ್ತದೆ. ಅದಕ್ಕೆ ಕಾರಣ ಭಾವಪೂರ್ಣತೆಯೊಂದಿಗೆ ಪ್ರಕೃತಿಯ ಸೌಂದರ್ಯದಲ್ಲಿ ಅಂತರ್ಮುಖಿಯಾಗುವ ಒಂದು ಸ್ಥಿತಿ ಎಂದು ತಿಳಿಯುತ್ತದೆ. ಈ ತನ್ಮಯತೆಯಲ್ಲಿನ ಕವಿಯ ಅನುಭವವನ್ನು ಎರಡು ರೀತಿಯಲ್ಲಿ ವಿಭಾಗಿಸಿ ಅಧ್ಯಯನ ಮಾಡಲಾಗಿದೆ. ಇಂತಹ ಎಲ್ಲಾ ಅಂಶಗಳಿಂದ ಕುವೆಂಪುರವರಿಗೆ ಅನುಭವ ಮತ್ತು ಚೈತನ್ಯದ ಸೆಲೆಯಾಗಿ ಕಂಡ ಪ್ರಕೃತಿಯ ಕವನಗಳ ಅಭಿವ್ಯಕ್ತಿಯನ್ನು ಗ್ರಹಿಸುವುದಾಗಿದೆ.

ಇನ್ನು ನಾಲ್ಕನೆಯ ಅಧ್ಯಾಯದಲ್ಲಿ ಕುವೆಂಪುರವರ ಪ್ರಕೃತಿ ಕವನಗಳಲ್ಲಿ ಅಂತರ್ಗತವಾದ ವೈಚಾರಿಕತೆಯನ್ನು ತಿಳಿಯುವುದಾಗಿದೆ. ಯಾವುದೇ ಒಂದು ಹಂತದಲ್ಲಿ ಕವಿಯಿಂದ ರಚಿತವಾದ ಸಾಹಿತ್ಯವು ಅಂದಿನ ಸಮಾಜದ ದಾಖಲೆಗಳಾಗಿರುವುದರಲ್ಲಿ ಸಂದೇಹವಿಲ್ಲ. ಆದರೆ ಕುವೆಂಪುರವರು ನಿಸರ್ಗದ ಸೌಂದರ್ಯವನ್ನು ಮೈದುಂಬಿ ವರ್ಣಿಸುವುದರಿಂದ 'ನಿಸರ್ಗ ಕವಿ' ಎಂದೇ ಕರೆಸಿಕೊಂಡವರು. ಆದರೂ ಈ ನಿಸರ್ಗದ ಅನುಭಾವದ ಮೂಲಕವಾಗಿಯೇ ವೈಚಾರಿಕತೆಯನ್ನು ಹಿಡಿದಿಟ್ಟಿದ್ದಾರೆ. ಅವುಗಳಲ್ಲಿ ಸಾಮಾಜಿಕವಾದ ನ್ಯಾಯ, ರಾಜಕೀಯ ನ್ಯಾಯ, ಧಾರ್ಮಿಕವಾದ ಸ್ವತಂತ್ರ, ಸಮಾನತೆ ಮತ್ತು ಮಾನವಿಯ ಕಾಳಜಿಗಳನ್ನು ಅಭಿವ್ಯಕ್ತಿಸಿದ್ದಾರೆ. ಈ ಒಂದು ಹಂತದಲ್ಲಿ ಕುವೆಂಪುರವರು ಸಮಾಜದಲ್ಲಿ ನೆಲೆಯೂರಿರುವ ಮೌಢ್ಯತೆ, ನಂಬಿಕೆಗಳನ್ನು ತಿರಸ್ಕರಿಸುತ್ತಾರೆ. ಅದೇ ದಾರಿಯಲ್ಲಿ ಲೌಕಿಕವಾಗಿ ನಿರ್ಮಿತವಾದ ದೇವಾಲಯಗಳನ್ನು ಮತ್ತು ದೇವರನ್ನು ನಿರಾಕರಿಸುವ ಕುವೆಂಪು ಅದಕ್ಕೆ ಬದಲಾಗಿ ನಿಸರ್ಗದ ಸೌಂದರ್ಯ, ನಿಸರ್ಗ ಪ್ರೀತಿ ಮತ್ತು ನಿಸರ್ಗದ ಆರಾಧನೆಯನ್ನು ಸೂಚಿಸುವ ಅಂಶವನ್ನು ಅಧ್ಯಯನದಲ್ಲಿ ಚರ್ಚಿಸಬಹುದಾಗಿದೆ.

ಒಂದು ಹಂತದವರೆಗೂ ನಿಸರ್ಗದಲ್ಲಿ ಮೈಮರೆತ ಕುವೆಂಪುರವರು ನಿಸರ್ಗ ಸೌಂದರ್ಯವನ್ನು ವರ್ಣಿಸುತ್ತಾರಾದರೂ ಸಹ ಸಾಮಾಜಿಕ ಕಳಕಳಿ ಇರುವ ಕವಿಯೂ ಸಹ ಎಂಬುದನ್ನು ಮನಮುಟ್ಟಿಸುತ್ತಾರೆ. ಈ 'ಪಕ್ಷಿಕಾಶಿ' ಸಂಕಲನದ ಹಿನ್ನೆಲೆಯಲ್ಲಿ ಕುವೆಂಪುರವರು ಸಾಮಾಜಿಕ ಜವಬ್ದಾರಿಯನ್ನು ಅರಿಯುವ ರೀತಿಯಲ್ಲಿ ಯುವ ಪೀಳಿಗೆಯನ್ನು ಎಚ್ಚರಿಸುವ ಕಾರ್ಯವನ್ನು ಮಾಡುತ್ತಾರೆ. ಈ ದೃಷ್ಟಿಕೋನದಲ್ಲಿ ಅವರ ಸಮಾಜಿಕ ಕಳಕಳಿ ಯಾವ ರೀತಿಯಲ್ಲಿ ಅವರ ಕವನಗಳು ತೆರೆದಿಡುತ್ತದೆ ಎಂಬುದನ್ನು ಅಧ್ಯಯನ ಮಾಡಬಹುದಾಗಿದೆ. ಇದೇ ರೀತಿಯಲ್ಲಿ ನಗರ ನಾಗರೀಕತೆ

ಉಂಟುಮಾಡುತ್ತಿರುವ ಭೀತಿ, ಕಟ್ಟು ಕಟ್ಟಳೆಯಿಂದ ಬೇಸರಗೊಂಡ ಕುವೆಂಪುರವರು ನಿಸರ್ಗವನ್ನೇ ಆಶ್ರಯಿಸುವುದನ್ನು ಕಾಣಬಹುದು. ಈ ಮೂಲಕವಾಗಿ ನಾಗರೀಕತೆ ಎಂಬುದು ಯಾವ ಮಟ್ಟದಲ್ಲಿ ಬೆಳೆಯುತ್ತಿದೆ ಎಂಬ ವಿಷಯವನ್ನು ಸಹ ಕವನಗಳ ಮೂಲಕ ಮೂಡಿಸಿದ್ದಾರೆ. ಈ ಎಲ್ಲಾ ಅಂಶಗಳನ್ನು ಈ ಅಧ್ಯಾಯದ ಭಾಗದಲ್ಲಿ ತಿಳಿಯಬಹುದಾಗಿದೆ.

ನಾಲ್ಕನೆಯ ಅಧ್ಯಾಯದ ನಂತರದಲ್ಲಿ 'ಪಕ್ಷಿಕಾಶಿ' ಕವನ ಸಂಕಲದ ಹಿನ್ನೆಲೆಯಲ್ಲಿ ಕುವೆಂಪುರವರ ತಾತ್ವಿಕ ನಿಲುವನ್ನು ಗುರುತಿಸಲಾಗಿದೆ. ಅಂದರೆ ಒಟ್ಟಾರೆಯಾಗಿ ಕುವೆಂಪುರವರಲ್ಲಿ ಕಾಣುವುದು ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿ. ಹೀಗೆ ಕುವೆಂಪುರವರು ಪ್ರಕೃತಿಯಲ್ಲಿ ಕಂಡ ಸೌಂದರ್ಯ ಮತ್ತು ಅದೇ ಬಗ್ಗೆಯಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಬಿಂಬಿಸಿದ್ದಾರೆ. ಅವುಗಳನ್ನು ಅಂಶಿಕವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಇನ್ನು ಉಪಸಂಹಾರ ಭಾಗದಲ್ಲಿ ಎಲ್ಲ ಅಧ್ಯಾಯಗಳಲ್ಲಿ ಒಟ್ಟಾರೆಯಾಗಿ ವ್ಯಕ್ತವಾಗುವ ಕವಿಯ ನಿಲುವನ್ನು ಮತ್ತು ಕಾಣಿಕೆಯನ್ನು ವಿವೇಚಿಸುವುದಾಗಿದೆ. ಜೊತೆಗೆ ಪ್ರಕೃತಿ ಕವಿಯಾಗಿ ಕುವೆಂಪುರವರು ಪಡೆದ ದರ್ಶನವನ್ನು ಮತ್ತು ಅಭಿವ್ಯಕ್ತಿಯನ್ನು ಮಂಡಿಸಲಾಗಿದೆ.

****

ಅಡಿಟಿಪ್ಪಣಿ

೧. ಕುವೆಂಪು ಸಮಗ್ರ ಗದ್ಯ: ಸಂಪುಟ ೧ ಸಂ. ಕೆ.ಸಿ ಶಿವಾರೆಡ್ಡಿ
ಪುಟ. ೨೮೬, ಪ್ರ. ೨೦೦೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

೨. ಕನ್ನಡದಲ್ಲಿ ಭಾವಗೀತೆ ಲೇ. ಪ್ರಭುಶಂಕರ
ಪುಟ. ೦೬, ಪ್ರ. ೨೦೦೦, ಡಿ. ವಿ. ಕೆ ಮೂರ್ತಿ

ಅಧ್ಯಾಯ: ಎರಡು

ಪ್ರಕೃತಿ ಕವನಗಳ ವಸ್ತು

ಕನ್ನಡದಲ್ಲಿ ಭಾವಗೀತೆಯ ವಿಚಾರ ಚರ್ಚೆಗೆ ಬಂದಾಗಲೆಲ್ಲಾ ಕುವೆಂಪುರವರ ಕವನಗಳು ಚರ್ಚೆಗೆ ಬಾರದೆ ಇರಲು ಸಾಧ್ಯವಿಲ್ಲ. ನಮ್ಮ ಭೂಮಿ ಎಷ್ಟು ವಿಶಾಲವಾಗಿದೆಯೋ ಹಾಗೂ ಇಲ್ಲಿರುವ ಎಲ್ಲಾ ವಸ್ತುರೂಪಗಳು ಸಹ ಭಾವಗೀತೆಯ ವಸ್ತುವಾಗಿರುವುದರಲ್ಲಿ ಯಾವ ಸಂದೇಹವು ಉಳಿಯುವುದಿಲ್ಲ. ಅಂದರೆ ಭಾವಗೀತೆಗಳು ಜನ, ಜನಸಮುದಾಯ, ಭಾವನೆ, ಪ್ರೇಮ, ಸಮಾಜದ ವಿಷವರ್ತುಲಗಳ ವಿಚಾರಗಳು ಒಳಗೊಂಡಿರುವಂತೆಯೇ ಬೆಟ್ಟಗುಡ್ಡಗಳು, ಮಳೆ, ಮೋಡ, ನದಿ, ವನರಾಶಿ, ಇಬ್ಬನಿ, ಕಗ್ಗತ್ತಲು, ಬೆಳದಿಂಗಳು, ಶೃಂಗಾರ, ಸೂರ್ಯೋದಯಗಳನ್ನು ಒಳಗೊಂಡಿದೆ. ಇದೇ ಅಂಶಗಳನ್ನು ಕುವೆಂಪುರವರ ಕವನಗಳಲ್ಲಿ ಕಾಣಬಹುದು. ಅದರಲ್ಲಿ ಹೆಚ್ಚಿನ ಅಂಶವನ್ನು ಪ್ರಕೃತಿಯ ಭಾಗವಾಗಿ ಗುರುತಿಸಬಹುದಾಗಿದೆ. ಇದಕ್ಕೆ ಕಾರಣ ಅವರಿಗೆ ಬಾಲ್ಯದಲ್ಲಿ ಪ್ರಭಾವಿತವಾಗಿರುವ ಮಲೆನಾಡು ಮುಖ್ಯವಾಗಿರಬಹುದು. ಆದ್ದರಿಂದಲೇ ಅವರ ಭಾವಗೀತೆಗಳಲ್ಲಿ ಪ್ರಕೃತಿ ವಿಶಿಷ್ಟವಾಗಿ ಮೂಡಿಬರುತ್ತದೆ. ಅಂತಹ ಸಂಕಲನಗಳೆಂದರೆ 'ಕೊಳಲು', 'ನವಿಲು', 'ಕಲಾಸುಂದರಿ', 'ಪಕ್ಷಿಕಾಶಿ' ಮುಂತಾದವು. ಇವುಗಳಲ್ಲಿ ಕುವೆಂಪುರವರು ಪ್ರಕೃತಿಯನ್ನು ಮುಖ್ಯವಾದ ವಸ್ತುವಾಗಿ ತೆಗೆದುಕೊಂಡರೂ ಅಲ್ಲಿನ ಸೌಂದರ್ಯದ ವರ್ಣನೆಯನ್ನೇ ವೊದಲು, ಕೊನೆಮಾಡದೇ ಕಣ್ಣಿಗೆ ಮತ್ತು ಮನಸ್ಸಿಗಾದ ಅನುಭವವನ್ನು ಚೈತನ್ಯಾನುಭವವಾಗಿ ಮೂಡಿಸಿರುವುದನ್ನು ಕಾಣಬಹುದು. ಈ ಭಾವನಾತ್ಮಕ ಸಂಬಂಧದಿಂದಲೇ ಕುವೆಂಪುರವರು "ಮಲೆಯನಾಡೆನಗೆ ತಾಯಿಮನೆ" ಎಂದು ಕರೆದಿದ್ದಾರೆ. ಇದನ್ನು ಜಿ.ಎಸ್. ಶಿವರುದ್ರಪ್ಪನವರು "ತೆರೆ ತೆರೆಯೆದ್ದರಣ್ಯ ಶ್ರೇಣಿ ಸಹ್ಯಾದ್ರಿಯ ಮಲೆನಾಡು ಕುವೆಂಪು ಅವರ ಜನ್ಮಭೂಮಿ; ಅವರ ಕರ್ಮಭೂಮಿ; ಅವರ ತಪೋಭೂಮಿ. ಕುವೆಂಪು ಬರುವ ಮುನ್ನ ಕೇವಲ ಕಾಡು ಬೆಟ್ಟಗಳೆಂಬ ಭೌಗೋಲಿಕ ವಾಸ್ತವ ಮಾತ್ರವಾಗಿ ಮಳೆ, ಸೊಳ್ಳೆ, ಮಲೇರಿಯಾ, ಹುಲಿ, ಹಾವು, ರೋಗ, ಸಾವು, ಭೂತ, ಬೆಂತರಗಳ ಬೀಡಾಗಿ ಭೂಮಿಯಲ್ಲಿ ಹುಟ್ಟಿದ್ದಕ್ಕೆ ಹೇಗಾದರೂ ಮಾಡಿ ನಿವಾರಿಸಿಕೊಳ್ಳಬೇಕಾದ ಒಂದು ದುರ್ಗಮ ದುರಂತ ಭೂಭಾಗವಾಗಿದ್ದ ಮಲೆನಾಡು, ಕುವೆಂಪು ಅದರೊಳಗಿನ ಸಂಕಲ್ಪ ಶಕ್ತಿಯಂತೆ ಸಂಭವಿಸಿದ ಮೇಲೆ ಹಠಾತ್ತನೆ ಅವರ ಕವಿ ಪ್ರತಿಭೆಯ ಮೂಲಕ ತನ್ನ ಅಸಂಖ್ಯ ವೈಭವಗಳ ಸಹಿತ ಪ್ರತ್ಯಕ್ಷವಾದ ಪರಿ

ಆಶ್ಚರ್ಯಕರವಾಗಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಸಹ್ಯಾದ್ರಿಯ ಪರ್ವತಾರಣ್ಯ ಪ್ರಪಂಚವೇ ತನ್ನ ಅಭಿವ್ಯಕ್ತಿಗಾಗಿ ಕುವೆಂಪು ಅವರಂಥ ಕವಿಯನ್ನು ಸೃಷ್ಟಿಸಿತೋ ಏನೋ! ಈ ಅರ್ಥದಲ್ಲಿ ಕುವೆಂಪು 'ಕಾಡಿನ ಕವಿ'.[೧]

ಕುವೆಂಪು ತಮ್ಮ ಕವಿತಾ ರಚನೆಯಲ್ಲಿ ಮಲೆನಾಡಿನ ಸಮಸ್ತ ಸೌಂದರ್ಯವನ್ನು ಸೆರೆಹಿಡಿದು ಅದರ ಮೋಹಕತೆಯನ್ನು ಸಹೃದಯರಿಗೆ ನೀಡಿದ್ದಾರೆ. ಆ ಸೌಂದರ್ಯ ಮತ್ತು ವಸ್ತು ವಿಶಿಷ್ಟತೆಯನ್ನು ತಿಳಿಯಲು ಕುವೆಂಪುರವರ ಕಾವ್ಯರಂಗ ಪ್ರವೇಶ ಮಾಡಿದರೆ:

ಸಿರಿ ಬನದೇವಿಯ ಬೊಕ್ಕಸದಿಂದ
ಕದ್ದವು ಕೆಲವಿವು ಹಾಡುಗಳು;
ಸುಂದರ ಋತುಗಳ ಸಿರಿಗೈಯಿಂದ
ಸುಲಿದವು ಕೆಲವಿವು ಹಾಡುಗಳು
ಸುಗ್ಗಿಯ ಬನದಲಿ ಹಸುರಿನ ಮೇಲೆ
ಹೂವುಗಳಂದದಿ ಕೆಲವನು ಆಯ್ದೆ;
ಮಂಜಿನ ಮಣಿಗಳ ಮಾಗಿಯ ಲೀಲೆ
ಶೋಭಿಸಲದರಿಂದಿನಿತನು ಕೊಯ್ದೆ;
ವಿಪಿನ ವಿಹಂಗಮ ಕಂಠವ ಸೇರಿ
ನುಣ್ಚರಗಳ ಗೆದ್ದೆನು ಬಲು ಹೋರಿ.
ಕಾಮನಬಿಲ್ಲನು ದಾರವ ಮಾಡಿ
ಮೊಳಗನು, ಮಿಂಚನು, ಹನಿಗಳ ಬೇಡಿ
ಹಾಡುಗಳಿನಿತನು ಕೋದಿಹೆನು!
ತುಂಗೆಯ ತೆರೆಗಳ ಚುಂಬನದಿಂದ
ಸಿರಿ ಮಲೆನಾಡಿನ ಸಿರಿ ಮಡಿಲಿಂದ
ಕವನಗಳಿನಿತನು ನೆಯ್ದಿಹೆನು!

(ಗೊಲ್ಲನ ಬಿನ್ನಹ, ಕೊಳಲು)

ಹೀಗೆ ಮಲೆನಾಡಿನ ದುರ್ಗಮ ವನರಾಶಿಯಲ್ಲಿ ದಟ್ಟವಾದ ಅನುಭವಗಳ ಮೂಲಕ ಕವಿ ಕುವೆಂಪು ಪ್ರಕೃತಿಯ ರಮ್ಯತೆ ಮತ್ತು ಭವ್ಯತೆಯ ಮೂಲಕ ಸೇರಿ ತಮ್ಮ ಕಾವ್ಯ ರಚನೆಗೆ ತೊಡಗಿರುವ ವೈಖರಿಯನ್ನು ಈ ಕವನದಲ್ಲಿ ಕಾಣಬಹುದು. ಇಲ್ಲಿ ಸೂಚಿತವಾಗುವ ಋತು, ಸುಗ್ಗಿಯಕಾಲ, ಹೂವು, ಮಂಜು, ಮಾಗಿಯಕಾಲ, ಕಾಮನಬಿಲ್ಲು, ಮಿಂಚುಗಳಿಂದ ಕೂಡಿದ ಮಲೆನಾಡು ಎಷ್ಟು ಶ್ರೀಮಂತ ಎನ್ನುವ ಭಾವನೆ ಮೂಡದೆ ಇರಲು ಸಾಧ್ಯವೇ. ಕೇವಲ ಕಾವ್ಯದಲ್ಲಿನ ಶಬ್ಧಗಳಿಂದಲೇ ಪ್ರಸಕ್ತ ಸಂದರ್ಭದಲ್ಲಿ ಸೌಂದರ್ಯವನ್ನು ಕಣ್‌ತುಂಬಿಸಿಕೊಳ್ಳುವ ನಮಗೆ ನೇರವಾಗಿ ಕಂಡ ಕುವೆಂಪು ಕವಿಯಾಗಿ ವರ್ಣ ವಿಲಾಸಿ ಮಲೆನಾಡಿನ ಪ್ರಕೃತಿಯನ್ನು ಅನುಭವಿಸಿದ ಸ್ಥಿತಿಗೆ 'ಕಾಡು ದೇವರ ಬೀಡೆ ಸರಿ'.

ಪ್ರಕೃತಿಯ ಸೌಂದರ್ಯದ ಗಣಿಯಾದ ಮಲೆನಾಡಿನ ಸೌಂದರ್ಯವನ್ನು ತಮ್ಮ ಭಾವನೆಗಳ ಮೂಸೆಯಲ್ಲಿ ಹಿಡಿದ ಕುವೆಂಪುರವರು ಪ್ರಾರಂಭದ ಕವನಗಳಲ್ಲಿ "ಹೇಳಿದರೆ ಹಾಳಾಗುವುದೋ ಈ ಅನುಭವದ ಸವಿಯು ಹೇಳದಿರೆ ತಾಳಲಾರನೋ ಕವಿಯು" ಎಂಬ ತಮ್ಮ ಉಭಯ ಸಂಕಟವನ್ನು ತಮ್ಮ 'ಉಭಯ ಸಂಕಟ' ಕವನದಲ್ಲಿ ಹೇಳಿದ್ದಾರೆ. ಅನುಭವದ ನೆಲೆಯಲ್ಲೇ ಪ್ರಕೃತಿಯನ್ನು ಕುರಿತ ಕವನಗಳ ರಚನೆಯಲ್ಲಿ ತೊಡಗುವ ಕವಿ ಏಕಕಾಲದಲ್ಲಿ ಕವಿ ಪ್ರಕೃತಿಯೊಳಗೆ ಪ್ರವೇಶಿಸುವ ಮತ್ತು ಸಮಾಜವನ್ನು ಸಹ ಪ್ರವೇಶ ಮಾಡುವಂತೆ ಕರೆಯುತ್ತಾರೆ. ಅದು

ಕೊಲ್ವ ಬತ್ತಳಿಕೆ ಬಿಲ್ಲು ಬಾಣವನು
ಅಲ್ಲೆ ಇಟ್ಟು ಬಾ;
ಬಿಂಕದುಕುತಿಯನು ಕೊಂಕು ಯುಕುತಿಯನು
ಎಲ್ಲ ಬಿಟ್ಟು ಬಾ;
ಮೆಯ್ಯ ತೊಳೆದು ಬಾ, ಕಯ್ಯ ಮುಗಿದು ಬಾ,
ಹಮ್ಮನುಳಿದು ಬಾ:
ಇಕ್ಷು ಮಧುರಮೆನೆ ಮೋಕ್ಷ ಪಕ್ಷಿಯುಲಿ
ನಾಡಿನಾಡಿಯಲಿ ಹಾಡಿ ಹರಿದು ನಲಿ
ದಾಡಬಹುದು ಬಾ!

(ಪಕ್ಷಿಕಾಶಿ)

ಈ ಪದ್ಯವನ್ನು ಗಮನಿಸಿದರೆ ಒಂದು ಹಂತದಲ್ಲಿ ಪ್ರಕೃತಿ ಕುವೆಂಪುರವರನ್ನು ಕುರಿತು, ಪ್ರಕೃತಿಯನ್ನು ಪ್ರವೇಶಿಸುವ ಸಂದರ್ಭದಲ್ಲಿ ಅಂತರ್ಮುಖಿಯಾದ ಮನಸ್ಸಿಗೆ ಹೇಳುವ ಬಗೆ ಒಂದಾದರೆ, ಕವಿಯಾಗಿ ಪ್ರಕೃತಿಯನ್ನು ಕವನಗಳ ಮೂಲಕ ಸೆರೆಹಿಡಿದ ಸಂದರ್ಭಕ್ಕೆ ಜನಸಮುದಾಯವನ್ನು ಕರೆ ತರುವ ಪ್ರಯತ್ನವಾಗಿರಬಹುದು. ನಂತರದಲ್ಲಿ ಪ್ರಕೃತಿಯನ್ನು ಪೂರ್ಣವಾಗಿ ಪ್ರವೇಶಿಸುವ ಕುವೆಂಪುರವರು ಅಲ್ಲಿನ ಸೌಂದರ್ಯವನ್ನು ಕುರಿತು ಆನಂದಮಯ ಈ ಜಗಹೃದಯ ಎಂದು ಹಾಡಿದ್ದಾರೆ. ಈ ನಿಸರ್ಗಪ್ರಿಯತೆಯಿಂದ ಆರಂಭವಾಗುವ ಕವನ ಸಂಕಲನಗಳಲ್ಲಿ ಒಂದಾದ 'ಪಕ್ಷಿಕಾಶಿ'ಯನ್ನು ಕುರಿತು ಜಿ.ಎಸ್.ಶಿವರುದ್ರಪ್ಪನವರು ತಮ್ಮ ಲೇಖನದಲ್ಲಿ ಈ ರೀತಿ ಉಲ್ಲೇಖಿಸುತ್ತಾರೆ.

೧) ಕವಿ

೨) ಕವಿ ಕಾಣುವ ನಿಸರ್ಗದ ವಸ್ತು

೩) ಕವಿಗೂ ನಿಸರ್ಗಕ್ಕೂ ಏರ್ಪಡುವ ಸೌಂದರ್ಯಾನುಭವ

೪) ಈ ಸೌಂದರ್ಯಾನುಭವದಿಂದ ನಿಷ್ಪನ್ನವಾಗುವ ಒಂದು ತತ್ವ ಅಥವಾ ಕವಿಯ ತಾತ್ವಿಕ ನಿಲುವು.[೨]

ಇಂತಹ ಹಂತಗಳನ್ನು ಒಳಗೊಂಡಿರುವ ಮತ್ತು ವೈವಿಧ್ಯಮಯವು ಆದ ಕವನಗಳಲ್ಲಿ ಸೂರ್ಯೋದಯದ ಕವನಗಳು ಪ್ರಮುಖವಾಗಿ ನಿಲ್ಲುತ್ತವೆ. ಅಂತಹ ಕವನಗಳನ್ನು ಗಮನಿಸುವುದಾದರೆ ಕುವೆಂಪು ಅವರ ಪ್ರಕೃತಿ ಗೀತೆಗಳಲ್ಲಿ ಸೂರ್ಯೋದಯ ಗೀತೆಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಸೂರ್ಯೋದಯ ಜನರಿಗೆ ಕೇವಲ ದೈನಂದಿನ ವಿದ್ಯಮಾನವಾಗಿ ಉಳಿದರೆ ಅದೇ ಸೂರ್ಯೋದಯ ಕುವೆಂಪುರವರಿಗೆ ನಿಸರ್ಗ ಸಹಜ ಘಟನೆಯಾಗಿರದೇ ಅದೊಂದು ದಿವ್ಯಾನುಭವದಿಂದ ಕೂಡಿದ ಅನುಭೂತಿಯೇ ಆಗಿದೆ. ಆದ್ದರಿಂದ ಕುವೆಂಪುರವರಿಗೆ ಪ್ರತಿದಿನದ ಸೂರ್ಯೋದಯದ ಪ್ರತಿ ಕ್ಷಣ ಕ್ಷಣವೂ ಸಹ ಹೊಸ ಅನುಭವವನ್ನು ಮತ್ತು ಚೈತನ್ಯವನ್ನು ತುಂಬುವ ನಿಸರ್ಗಾನುಭೂತಿ. ಈ ಸೂರ್ಯೋದಯದ ಅನುಭೂತಿಯನ್ನು ಅವರ ಮಾತಿನಲ್ಲೇ ಹೇಳುವುದಾದರೆ ಅವರ ಗೆಳೆಯರೊಂದಿಗೆ ಹೋದ ಕುವೆಂಪುರವರು "ನಾವು ನಿಂತ ಸ್ಥಳ ಎತ್ತರವಾಗಿತ್ತು. ಸುಮಾರು ಮೂವತ್ತು ಮೈಲಿಗಳ ದೃಶ್ಯ ನಮ್ಮೆದುರಿಗಿತ್ತು. ದಿಂಗತವಿಶ್ರಾಂತವಾದ ಸಹ್ಯಾದ್ರಿ ಪರ್ವತ ಶ್ರೇಣಿಗಳು ತರಂಗತರಂಗಗಳಾಗಿ ಸ್ಪರ್ಧೆಯಿಂದ ಹಬ್ಬಿದ್ದುವು. ದೂರಸರಿದಂತೆಲ್ಲಾ

ಅಸ್ಫುಟವಾಗಿ ತೋರುತ್ತಿದ್ದವು. ಕಣಿವೆಗಳಲ್ಲಿ ಇಬ್ಬನಿಯ ಒಲ್ಗಡಲು ತುಂಬಿತ್ತು. ವೀಚಿವಿಕ್ಷೋಭಿತ ಶ್ವೇತಫೇನಾಮೃತ ಮಹಾವಾರಿಧಿಯಂತೆ ಪಸರಿಸಿದ್ದ ತುಷಾರ ಸಮುದ್ರದಲ್ಲಿ ಶ್ಯಾಮಲಗಿರಿಶೃಂಗಗಳು ದ್ವೀಪಗಳಂತೆ ತಲೆಯೆತ್ತಿಕೊಂಡಿದ್ದುವು. ಕಂದರ ಪ್ರಾಂತಗಳಲಿದ್ದ ಗದ್ದೆ ತೋಟ ಹಳ್ಳಿ ಕಾಡು ಎಲ್ಲವೂ ಹೆಸರಿಲ್ಲದಂತೆ ಅಳಿಸಿಹೋಗಿದ್ದವು. ದೃಷ್ಟಿಸೀಮೆಯನ್ನೆಲ್ಲ ಆವರಿಸಿದ್ದ ತುಷಾರಜಲನಿಧಿಯಲ್ಲಿ ಹಡಗುಗಳಲ್ಲಿ ಕುಳಿತು ಸಂಚರಿಸಬಹುದೆಂಬಂತಿತ್ತು! ನಾವು ಮೂವರೂ ಅವಾಕ್ಕಾಗಿ ನಿಂತು ನೋಡಿದೆವು. ಇಬ್ಬನಿಯ ಕಡಲಿನಿಂದ ತಲೆಯೆತ್ತಿ ನಿಂತಿದ್ದ ಗಿರಿಶೃಂಗಗಳು ಮುಂಬೆಳಕಿನ ಹೊಂಬಣ್ಣವನ್ನು ಹೊದೆದಿದ್ದುವು. ಬಾಲಸೂರ್ಯನ ಸ್ನಿಗ್ಧಕೋಮಲ ಸುವರ್ಣಜ್ಯೋತಿಯಿಂದ ವೃಕ್ಷರಾಜಿಗಳ ಶ್ಯಾಮಲಪರ್ಣವಿತಾನಗಳಲ್ಲಿ ಖಚಿತವಾಗಿದ್ದ ಸಹಸ್ರ ಸಹಸ್ರ ಹಿಮಮಣಿಗಳು ಅನರ್ಘ್ಯರತ್ನ ಸಮೂಹಗಳಂತೆ ವಿರಾಜಿಸುತ್ತಿದ್ದುವು. ಬೆಳ್ನೊರೆಯಂತೆ ಹಬ್ಬಿದ ಇಬ್ಬನಿಯ ಕಡಲಿನಲ್ಲಿ ಮುಳುಗಿಹೋಗಿದ್ದ ಕಣಿವೆಯ ಕಾಡುಗಳಿಂದ ಕೇಳಿಬರುತ್ತಿದ್ದ ವಿವಿಧವಿಹಂಗಮಗಳ ಮಧುರವಾಣಿ ಅದೃಶ್ಯರಾಗಿ ಉಲಿಯುವ ಗಂಧರ್ವಕಿನ್ನರರ ಗಾಯನದಂತೆ ಸುಮನೋಹರವಾಗಿತ್ತು. ನಾವು ಮೂವರೂ ಅವಾಕ್ಕಾಗಿ ನಿಂತು ನೋಡಿದೆವು!"[1] ಇಂತಹ ಅಪೂರ್ವ ಅನುಭವದಿಂದ ಸೌಂದರ್ಯವನ್ನು ನೋಡುತ್ತಾ ಆ ಆನಂದದಲ್ಲಿ ತಲ್ಲೀನರಾಗಿ ರಚಿಸಿದ ಸೂರ್ಯೋದಯದ ಗೀತೆಗಳು ಅಪೂರ್ವ ದಾಖಲೆಗಳೇ ಸರಿ.

ಅದು 'ಒಂದು ಪ್ರಾತಃಕಾಲ' ಎಂಬ ಕವನದಲ್ಲಿ ಕವಿಯು ಸೂರ್ಯನ ಸೌಂದರ್ಯವನ್ನು ಕಂಡು

ಓಡು ಹೊರಗೆ ಓಡು ನೋಡು
ಮೂಡುತಿಹನು ದಿನಮಣಿ
ಹಚ್ಚನೆ ಹಸುರು ಬಯಲಮೇಲೆ
ಮಿರುಗುತಿಹವು ಹಿಮಮಣಿ

(ಒಂದು ಪ್ರಾತಃಕಾಲ)

ಇಂಥ ಮೋಹಕ ಸೌಂದರ್ಯದಲ್ಲಿ ಕವಿಯು ಎಚ್ಚರಗೊಳ್ಳುವ ಸ್ಥಿತಿಯನ್ನು ಕಾಣಬಹುದು. ಆದ್ದರಿಂದ ಕವಿ ಓಡು ಹೊರಗೆ, ಓಡು ನೋಡು ಮೂಡುತಿಹನು

ದಿನಮಣಿ ಎಂಬ ರಸಭಾವವನ್ನು ತೋರುತ್ತಾರೆ. ಈ ರೀತಿಯಲ್ಲಿ ಕವಿಯ ಭಾವನೆಗಳಿಗೆ ರಸಪೂರ್ಣತೆಯನ್ನು ಕಲ್ಪಿಸುವ ಅನುಭವ ಮುಂದೆ ಕವಿಗೆ ಕವಿಯನ್ನೇ ತೋರುವ ಹಂತವನ್ನು ದಾಟುತ್ತದೆ.

ಜೇನುತುಪ್ಪದಲ್ಲಿ ತೊಯ್ದ
ಹಣ್ಣಿನಂತೆ
ಪೊಸ ಚೆಲ್ವಿನ ಬಲೆಯ ನೆಯ್ದ
ಹೆಣ್ಣಿನಂತೆ
ಸವಿಗೆ ಸವಿಯ ಪೇರಿಸಿತ್ತು
ಭದ್ರಮಾಸಂ;
ಕವಿಗೆ ಕವಿಯ ತೋರಿಸಿತ್ತು
ಸುಪ್ರಭಾತಂ!

(ಭಾದ್ರಪದದ ಸುಪ್ರಭಾತ)

ಸೂರ್ಯನ ಚೆಲುವು ಕವಿಯನ್ನು ಆವರಿಸಿದಂತೆಲ್ಲಾ ಪ್ರಾತಃಕಾಲವನ್ನು ನೋಡಿದ ಕವಿ 'ಪ್ರಾತಃಕಾಲದಿ ಜೀವಿಸುವುದಕ್ಕಿಂತಲು ಬೇರೆಯ ಗುರಿ ಜೀವಕೆ ಬೇಕಿಲ್ಲ'. ಎಂಬ ಸೃಷ್ಟಿಯ ರಹಸ್ಯವನ್ನು ಭೇದಿಸುವ ಬೌದ್ಧಿಕತೆಗೂ ಮಿಗಿಲಾದ ಬದುಕುವ ಸಾರ್ಥಕತೆಯನ್ನು ನೀಡಿದ್ದಾರೆ. ಆದ್ದರಿಂದ ಜಿ.ಎಸ್.ಶಿವರುದ್ರಪ್ಪನವರು "ಬೇಂದ್ರೆಯವರನ್ನು ಶ್ರಾವಣದ ಕವಿ ಎಂದಂತೆ ಕುವೆಂಪು ಅವರನ್ನು ಸೂರ್ಯೋದಯದ ಕವಿ"[೪] ಎಂದು ಕರೆಯಬಹುದು ಎಂಬ ನಿರ್ವಿವಾದದ ಮಾತನ್ನು ಉಲ್ಲೇಖಿಸಿದ್ದಾರೆ. ಹಿಂದೆ ಗುರುತಿಸಿದ ಕವನಗಳ ಭಾಗದಲ್ಲಿ ಕುವೆಂಪು ಕೆಲವು ಕಡೆ ಪ್ರಕೃತಿಯನ್ನು ಮತ್ತು ಸೂರ್ಯೋದಯವನ್ನು ಮೌನದಿಂದಲೇ ನೋಡುತ್ತಿರುವಂತೆ ಕಾಣುವುದನ್ನು ಗಮನಿಸಬಹುದು. ಅನಂತರದಲ್ಲಿ ಕವಿ ಪ್ರಕೃತಿಯ ಮಡಿಲಿನಲ್ಲಿ ನಿಂತು ಭಾವನೆಯನ್ನು ಚೈತನ್ಯತೆಯ ಮೂಲಕ ಪರಿಭಾವಿಸುವುದರಲ್ಲಿ ಸೂರ್ಯೋದಯದ ಗೀತೆ ತನ್ನ ಚಹರೆಯನ್ನೇ ಬದಲಾಯಿಸುತ್ತದೆ. ಅಂತಹ ಪದ್ಯಗಳನ್ನು ಗಮನಿಸಿದರೆ

ಭಾವವೇಶದಿ ನೋಡುತ ನಿಂತೆ,
ಹೃದಯದೊಳುರಿಯಿತು ರಸಮಯಚಿಂತೆ:
'ಉರಿ–ಕಿಡಿ'ದೆನು ಹಿಮಮಣಿಯಂತೆ!
ಕಲ್ಲಿನ ಯುಗಯುಗದಿರವೂ ಶೂನ್ಯ,
ಹುಲ್ಲಿನ ಅರೆನಿಮಿಷದ ಹನಿ ಧನ್ಯ:
ತಳತಳಿಪುದೆ ಸಾರ್ಥಕ ಪುಣ್ಯ:

(ಶರತ್ಕಾಲದ ಸೂರ್ಯೋದಯದಲಿ)

ಇದೇ ಸಮಯದಲ್ಲಿ ಶರತ್ಕಾಲದ ಸೂರ್ಯೋದಯದಲ್ಲಿ ಕವಿ ಕುವೆಂಪುರವರು ಸೂರ್ಯನನ್ನು ಕಂಡು

ಶರತ್ಕಾಲದ ಸೂರ್ಯೋದಯದಲಿ
ಸ್ವರ್ಗವು ಹೊಮ್ಮಿರೆ ಮರ್ತ್ಯಹೃದಯದಲಿ,
ಹೊರ ಹೊರಟೆನು ನಾ ಸಂಚರಿಸೆ.
ಹೊಂಗದಿರ್ಗಳ ಮಳೆ ಸುರಿಸುರಿದಿತ್ತು:
ಬಂಗಾರದ ಹೊಳೆ ಹರಿದಾಡಿತ್ತು,
ತಿರೆ ಸಗ್ಗವದಾಯಿತೊ ಎನಿಸೆ!

(ಶರತ್ಕಾಲದ ಸೂರ್ಯೋದಯದಲಿ)

ಎಂಬುದರಲ್ಲೇ ಕುವೆಂಪು ಅಂತರ್ಮುಖಿಯಾಗುವುದನ್ನು ಕಾಣಬಹುದು. ಅದನ್ನು 'ಬಾ ಪಲ್ಗುಣ ರವಿ ದರ್ಶನಕ್ಕೆ' ಎಂಬ ಕವನದಲ್ಲಿ 'ಶಿವಮಂದಿರ ಸಮ ವನಸುಂದರ ಸುಮಶೃಂಗಾರದ ಗಿರಿಶೃಂಗಕೆ ಬಾ, ಬಾ ಪಾಲ್ಗುಣ ರವಿ ದರ್ಶನಕೆ' ಎಂಬುದರಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಬಹಿರ್ಮುಖವಾದ ಬಹಿರಂಗ ಸೌಂದರ್ಯದ ಮೋಹಾಕರ್ಷಣೆ ಅಂತರ್ಮುಖವಾದ ಅಂತರಂಗ ಸೌಂದರ್ಯದ ಕಡೆಗೂ ತಿರುಗಿ ಉಪಾಸನಾರೂಪವನ್ನು ತಾಳುತ್ತದೆ. ಅಂದರೆ ಪ್ರಕೃತಿಯ ಅದ್ಭುತ ಶಕ್ತಿ ಧ್ಯಾನಗೋಚರವಾದಂತೆ ವೈಜ್ಞಾನಿಕ ರೂಪವನ್ನು ತಾಳದೆ ಕವಿಪ್ರಜ್ಞೆಯಲ್ಲಿ ಚಿನ್ಮಯೀ ಶಕ್ತಿಯಾಗಿ ತೋರುತ್ತದೆ.

ಮುಂದೆ "ನವಿಲು ಕಲ್ಲಿನಲ್ಲಿ ಸೂರ್ಯೋದಯ" ಎಂಬ ಕವನದಲ್ಲಿ ಸ್ವರ್ಗಕ್ಕೂ ಕಿಚ್ಚಿಕ್ಕುವ ಸೌಂದರ್ಯವನ್ನು ಕವಿ ವರ್ಣಿಸಿದ್ದಾರೆ. ಅಂದರೆ ಈ ಕವನ ಕವಿಯ ತನ್ಮಯತೆಯನ್ನು ಪ್ರಕೃತಿಯ ಚೆಲುವಿನಲ್ಲಿ ಪರಮಾತ್ಮನನ್ನು ದರ್ಶಿಸುವ ಶಿವಸೌಂದರ್ಯಗಳು ಸಮನ್ವಿತಗೊಂಡ ವಿಶಿಷ್ಟವಾದ ದೃಷ್ಟಿಯನ್ನು ಬಹಳ ಸೊಗಸಾಗಿ ಅಭಿವ್ಯಕ್ತಿಸಿದೆ. ಈ ಕವನಕ್ಕೆ ಪೂರಕವಾದ ವಿಷಯವನ್ನು ಸಂಗ್ರಹಿಸುವುದಾದರೆ ಮಲೆನಾಡಿನ ಚಿತ್ರಗಳಲ್ಲಿ ಕುವೆಂಪು ನೀಡಿರುವ ವಿವರಣೆಯನ್ನು ಗಮನಿಸಬಹುದು. "ಕವಿ ಶೈಲದಂತೆಯೇ ಅಥವಾ ಅದಕ್ಕಿಂತಲೂ ಒಂದು ಕೈ ಮೇಲಾಗಿದೆ ನವಿಲುಕಲ್ಲು ಸುತ್ತಮುತ್ತಣ ಕಾಡುಗಳಲ್ಲಿರುವ ನವಿಲುಗಳು ಬಂದು ಆ ಶಿಲಾಶಿಖರದಲ್ಲಿ ವಿಹರಿಸುವುದರಿಂದ ಅದಕ್ಕೆ ಆ ಹೆಸರು ಬಂದಿದೆ. ಆ ಶಿಖರ ಸಮಸ್ತವೂ ಒಂದು ಅಖಂಡವಾದ ಬಂಡೆಯಾಗಿದೆ. ಅದರ ಮೇಲೆ ನಿಂತು ನೋಡಿದರೆ ಸುತ್ತಲೂ ನಾಲ್ದೆಸೆಯಲ್ಲಿಯೂ ತರಂಗ ತರಂಗವಾಗಿ ಒಂದರೊಡನೊಂದು ಸ್ಪರ್ಧಿಸುತ್ತಿವೆಯೋ ಎಂಬಂತೆ ದಿಗಂತ ವಿಶ್ರಾಂತವಾಗಿ ಗಗನಚುಂಬಿಗಳಾಗಿ ಹಬ್ಬಿರುವ ವನಪರ್ವತ ಶ್ರೇಣಿಗಳ ಚಕ್ರಾಕಾರವಾದ ಭವ್ಯದೃಶ್ಯ ಹೃದಯಂಗಮವಾಗಿ ಮನೋಹರವಾಗಿ ದೃಗ್ಗೋಚರವಾಗುತ್ತದೆ. ದೂರದ ಗಿರಿ ಪಂಕ್ತಿಗಳಂತೂ ಮಾಸಲು ಮಾಸಲಾಗಿ ನೀಲಮೇಘಗಳಂತೆ ಆಕಾಶದ ವಸ್ತುಗಳಾಗಿ ತೋರುತ್ತದೆ. ಹತ್ತಿರದಲ್ಲಿ ಬಹುದೂರ ಕೆಳಗಡೆ ಅಲ್ಲಲ್ಲಿ ಕಣಿವೆಗಳೂ ಗದ್ದೆ, ತೋಟಗಳೂ, ಮನೆಗಳೂ ಕಾಣುತ್ತವೆ. ಪೂರ್ವ ದಿಕ್ಕಿನಲ್ಲಿ ಹಸುರುಕಾಡುಗಳ ನಡುವೆ ಕೊಂತಿ ಹರಿವ ತುಂಗಾನದಿಯ ಸಲಿಲ ಸೈಕತ ಶ್ವೇತ ರೇಖಾವಿನ್ಯಾಸ ಸುಮನೋಹರವಾಗಿ ಕಂಗೊಳಿಸುತ್ತದೆ. ಮೇಲಿನ ವರ್ಣನೆ ನವಿಲುಕಲ್ಲಿನಲ್ಲಿ ಸದಾ ಸಾಮಾನ್ಯವಾಗಿ ತೋರುವ ದೃಶ್ಯದ್ದಾಯಿತು. ಆದರೆ ವಸಂತ ಪ್ರಭಾತದ ನವಿಲುಕಲ್ಲೇ ಬೇರೆ! ಅದನ್ನು ನೋಡಿ ಅನುಭವಿಸಿದಲ್ಲದೆ ಅದರ ಸೌಂದರ್ಯ ಮಹಿಮೆಗಳು ತಿಳಿಯುವುದಿಲ್ಲ. ನಾನಂತೂ ಅದನ್ನು ನೋಡಿ ಸೋತು ಶರಣಾಗಿದ್ದೇನೆ. ಆ ಸ್ವರ್ಗೀಯ ದೃಶ್ಯದ ಮಹಾ ವಿಗ್ರಹ ನನ್ನ ಮನೋಮಂದಿರದಲ್ಲಿ ಚಿರವಾಗಿ ಸ್ಥಾಪಿತವಾಗಿದೆ. ಅದಕ್ಕಲ್ಲಿ ದಿನ ದಿನವೂ ಆರಾಧನೆ ನಡೆಯುತ್ತಿದೆ."[೫] ಇಂತಹ ಅನುಭವದಲ್ಲಿ ಮೂಡಿಬಂದಂತಹ ಕವನವಾದ 'ನವಿಲು ಕಲ್ಲಿನಲ್ಲಿ ಸೂರ್ಯೋದಯ' ದಲ್ಲಿ ನಿಸರ್ಗದ ಕೆಲವು ವರ್ಣರಂಜಿತ ಚಿತ್ರಗಳೇ ಸಜೀವವೆನ್ನುವಂತೆ ಮೂಡಿದೆ.

ಅದೊ ನೋಡು, ಬಣ್ಣಗಳ ದಿಬ್ಬಣಂ! ಗಗನದಾ
ಶೈಲ ಶೈಲಿಯ ದಂತುರ ದಿಗಂತ ರಂಗದಲಿ
ದೇವತೆಗಳೆಲ್ಲರೂ ಅಪ್ಸರಿಯರೊಡಗೂಡಿ
ಇಂದ್ರನೈರಾವತದ ಹಿಂದುಗಡೆ ಮೆರವಣಿಗೆ
ಹೊರಟಿಹರೊ ಎನೆ ಶೋಭಿಸುತ್ತಿದೆ ಮನವನೊಲಿಸಿ!
ಶಿವನ ಮುಖಚಂದ್ರಿದೆಯೆ ಸೌಂದರ್ಯ ರೂಪದಿಂ
ಪ್ರತ್ಯಕ್ಷವಾಗುತಿರೆ ಶಿವನೆ ಮೈದೋರ್ದಂತೆ
ಅಹ ನೋಡದೊ, ಮಲೆಗಳಾಚೆಯ ಸುದೂರದಲಿ
ಒಯ್ಯನಾವಿರ್ಭವಿಪನಮರ ತೇಜಸ್ವಿ ರವಿ!

ಹೃದಯಪ್ರಪಾತಕ್ಕೆ ಧುಮುಕುತಿದೆ ರಸದ ಧುನಿ
ಭಾವ ಜಲಪಾತದಿಂ! ಮೌನವೆ ಮಹಾ ಸ್ತೋತ್ರಂ

(ನವಿಲು ಕಲ್ಲಿನಲ್ಲಿ ಸೂರ್ಯೋದಯ)

ಎಂಬ ಸಾಲುಗಳನ್ನು ಗಮನಿಸಬಹುದು.

ಈ ಕವನದ ಸಾಲುಗಳಲ್ಲಿ ಕಂಡುಬರುವ ಇಂದ್ರನ ಐರಾವತ, ಅಪ್ಸರ ಸ್ತ್ರೀಯರು, ದೇವತೆಗಳು ಆ ಮಲೆನಾಡಿನ ಸೂರ್ಯನು ಉದಯಿಸುವ ಸೌಂದರ್ಯದಲ್ಲಿ ಮರೆಯಾಗುತ್ತಾ ಆ ಸೌಂದರ್ಯವನ್ನು ನೋಡಲು ಸಾಲುಗಟ್ಟಿರುವರೋ ಎಂಬ ದೃಶ್ಯವನ್ನು ನೀಡುತ್ತಾರೆ. ಅಂದರೆ ಕಲ್ಪನೆಯಲ್ಲಿರುವ ಸ್ವರ್ಗದ ಸೌಂದರ್ಯಕ್ಕಿಂತ ಪ್ರಕೃತಿಯ ಸೌಂದರ್ಯವೇ ಹೆಚ್ಚು ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಮುಂದೆ ಸಾಂಪ್ರದಾಯಿಕ ನಿಸರ್ಗ ಸೌಂದರ್ಯವನ್ನು ನಿರಾಕರಿಸುತ್ತಾ ಅದಕ್ಕೆ ಬದಲಾಗಿ ಪ್ರಕೃತಿಯನ್ನು ದೈವತ್ವಕ್ಕೆ ಕೊಂಡೊಯ್ಯುವುದನ್ನು ಗಮನಿಸಬಹುದು. ಅಂದರೆ ಪ್ರಕೃತಿ ಕುವೆಂಪು ಅವರಿಗೆ ಅಂತರ್ಮುಖಿಯಾಗುತ್ತದೆ. ಅದು

ಭುವನವೇ ------> ದೇವಾಲಯ
ಸೌಂದರ್ಯವೇ ------> ದೇವರು
ಸೌಂದರ್ಯಾನುಭವವೇ ------> ಆರಾಧನೆ

ಈ ಒಂದು ರೀತಿಯ ಪರಿವರ್ತನೆಯನ್ನು ಕಾಣಬಹುದಾಗಿದೆ. ಅಂದರೆ ಕುವೆಂಪುರವರು ಕವನಗಳ ಮೂಲಕ ಪ್ರಕೃತಿಯನ್ನು ದೇವಾಲಯವನ್ನಾಗಿ ಮಾಡಿದ್ದಾರೆ. ಅನಂತರ ಪ್ರಕೃತಿಯ ಸೌಂದರ್ಯವೇ ದೇವರಾಗಿ, ಅದರ ಅನುಭವವೇ ಆರಾಧನೆಯ ಸ್ವರೂಪ ಪಡೆದಿದೆ ಎಂದು ಗುರುತಿಸಬಹುದು.

ಕುವೆಂಪು ಅವರಿಗೆ ಪ್ರಕೃತಿಯ ಪ್ರೇಮ ಎಂತಹ ದಾಹವನ್ನು ಉಂಟುಮಾಡಿದೆ ಎಂದರೆ ಯಾರಿಗೂ ಬೇಡದ, ಯಾರೂ ನೋಡದ ಹೂವನ್ನು ಸಹ ಗಮನಿಸುತ್ತಾರೆ. ಕೇವಲ ಅದನ್ನು ಗಮನಿಸಿ ಮುಂದೆ ಹೋಗದೇ ಅದರ ಸೌಂದರ್ಯಾರಾಧನೆ ಮಾಡುವುದು ಉತ್ತಮ ನಿದರ್ಶನವಾಗಿದೆ. ಅದನ್ನು ಗುಲಾಬಿ ಕವನ ಉತ್ತಮವಾಗಿ ಸಾಕ್ಷಿಕರಿಸುತ್ತದೆ.

ಯಾರೂ ನೋಡದ ಯಾರಿಗೂ ಬೇಡದ
ಹೂದೋಟದ ಈ ಮೂಲೆಯಲಿ
ನೋಡಿದೋ ಒಂದೆ ಗುಲಾಬಿಯ ಹೂವಿದೆ
ಸ್ವರ್ಗಸುಂದರಿಯ ಲೀಲೆಯಲಿ!
ಹೂವಿನ ಚೆಲುವಿಂದೀ ಮರುಭೂಮಿ
ನಂದನವಾದಂತಿರೆ, ಕವಿ ಕಾಮಿ!

(ಗುಲಾಬಿ)

ಇಂತಹ ಹೂ ಯಾರ ಕಣ್ಣಿಗೂ ಬೀಳದೇ ಅಥವಾ ತಿರಸ್ಕೃತವಾಗಿ ಇದ್ದರೂ ಅದು ಕವಿಯ ಕಣ್ಣಿಗೆ ಸೌಂದರ್ಯದ ಗಣಿಗಾಗಿ ಆಕರ್ಷಿಸುತ್ತದೆ.

ಮನ್ಮಥ ಚುಂಬನ ದಂತಕ್ಷತದಿಂ
ಬೆಚ್ಚನೆ ಕೆನ್ನೆತ್ತರು ಸೋರಿ
ರತಿಚೆಂದುಟಿಯಿಂದಿಳೆಗುರುಳುತೆ ತಾಂ
ಮತ್ತೆ ಗುಲಾಬಿಯವೊಲು ತೋರಿ,
ನೋಳ್ಪ ಕಂಗಳಿಗೆ ಕೊಡುತಿದೆ ಮುತ್ತು:
ಬಾ, ನೀನೂ ಮುದ್ದಿಸಿ ತುಟಿಯೊತ್ತು!

(ಗುಲಾಬಿ)

ಕೆಂಪು ರಕ್ತ ಮತ್ತು ಗುಲಾಬಿ ವರ್ಣದ ಚೆಲುವು ಎಂತಹುದು ಎಂಬುದನ್ನು 'ಮನ್ಮಥ ಚುಂಬನ ದಂತಕ್ಷತದಿಂದ ರತಿಯ ಚೆಂದುಟಿಯಿಂದ ಧರೆಗೆ ಬಿದ್ದ ಕೆನ್ನೆತ್ತರೆ ಈ ಹೂವು' ಎಂಬ ವರ್ಣನೆಯನ್ನು ನೀಡುತ್ತಾರೆ. ಸಾಮಾನ್ಯವಾಗಿ ಹೂವನ್ನು ಆನಂದದ ದೃಷ್ಟಿಯಿಂದ ದೈವತ್ವದ ಅಂಶವನ್ನು ನೀಡುವ ಕವಿ ಈ ಕವನದಲ್ಲಿ ಶೃಂಗಾರ ಮತ್ತು ಸೌಂದರ್ಯದ ಉನ್ಮತ್ತತೆಯನ್ನು ಹೊಂದಿರುವುದು ಕಂಡುಬರುತ್ತದೆ.

ಸೌಂದರ್ಯದ ಮಧುಪಾನದಲ್ಲಿ ವಿಶ್ವವನ್ನೇ ಉನ್ಮತ್ತಗೊಳಿಸುವ ಚಂದ್ರನನ್ನು ಸಹ ಕುವೆಂಪು ತಮ್ಮ ಕಾವ್ಯದಲ್ಲಿ ಹಿಡಿದಿದ್ದಾರೆ. ಅದನ್ನು ಗುರುತಿಸುವುದಾದರೆ 'ಲಲಿತಾದ್ರಿ' ಕವನ ಮುಂದೆ ಬರುತ್ತದೆ.

ಹುಣ್ಣಿಮೆಯ ದಿನದಲ್ಲಿ,
ಪೂರ್ವ ದಿಗ್ದೇಶದಲಿ,
ದೂರ, ಬಹು ದೂರದಲಿ,
ಮಬ್ಬಿನ ದಿಗಂತದಲಿ,
ದುಂಡಾಗಿ, ಕೆಂಪಾಗಿ.
ಸುಂದರ ಸುಧಾಕರನು
ಮೂಡಿ ಮೇಲೇಳುತಿರೆ.
ನಿಂತಿಲ್ಲಿ, ನೇಹಿಗನೆ,
ಚೆಲುವ ನೋಡು!

(ಲಲಿತಾದ್ರಿ)

ಈ ಪದ್ಯದಲ್ಲಿ ಹುಣ್ಣಿಮೆಯ ಚಂದ್ರವನ್ನು ಮೈದುಂಬಿ ವರ್ಣಿಸುವ ಕುವೆಂಪುರವರು ನಿಂತಿಲ್ಲಿ ನೇಹಿಗನೆ ಚೆಲುವ ನೋಡು ಎಂದು ದುಂಡಾದ, ಕೆಂಪಾದ, ಸುಂದರ ಸುಧಾಕರವನ್ನು ನೋಡಿ ಕರೆಯುತ್ತಾರೆ. ಈ ಹಿನ್ನೆಲೆಯಲ್ಲಿ ಕುವೆಂಪು ಪ್ರಕೃತಿಯಲ್ಲಿ ಕಾಣುವ ಕತ್ತಲೆಯನ್ನು ವರ್ಣಿಸುವುದಿಲ್ಲ. ಅದಕ್ಕೆ ಬದಲಾಗಿ ಬೆಳಕನ್ನೇ ತೋರಿಸುವ ಕುವೆಂಪುರವರು ಉದಯಿಸುವ ಸೂರ್ಯ, ಚಂದ್ರ, ಹಕ್ಕಿಯ ದನಿ, ಸೂರ್ಯನ ಕಿರಣಗಳಿಂದ

ಹೊಳೆಯುವ ನೀರಿನ ಹನಿ ಮತ್ತು ಹಚ್ಚ ಹಸಿರನ್ನೇ ಹೆಚ್ಚಾಗಿ ತಮ್ಮ ಕವನಗಳ ವಸ್ತುವಾಗಿಸಿ ಕೊಂಡಿರುವುದನ್ನು ಗಮನಿಸಬಹುದು. ಈ ನಡುವೆ ಆಕಾಶದಲ್ಲಿ ತೇಲಿಬರುತ್ತಿರುವ ಚಂದ್ರನನ್ನು ಸಹ ಕಂಡು ಸೌಂದರ್ಯದಲ್ಲಿ ಮೈಮರೆತು ವಾಸ್ತವತೆಯನ್ನು ಕಡೆಗಣಿಸಿ ಧ್ಯಾನದ ರಸದಾನಂದ ಸ್ಥಿತಿಯನ್ನು ಮುಟ್ಟುತ್ತಾರೆ.

ಓ ನೋಡದೊ ರಂಜಿಸುತಿದೆ
ರಜನಿಯ ಕೈದೀಪ,
ನೀಲಧಿಯಲಿ ತೇಲಿತ್ತಿಹ
ಜ್ಯೋತಿಯ ಸ್ವರ್ದ್ವೀಪ!
ತೆಳುತೆಳ್ಳನೆ ಬೆಳುಬೆಳ್ಳನೆ
ಮುಗಿಲುಣ್ಣೆಯ ರಾಶಿ
ಹೊಂಜೊನ್ನದೆ ಮಿಂದಂತಿದೆ
ಜೇನ್ಮಳೆಯನೆ ಸೂಸಿ!

ಓ ರಾತ್ರಿಯೆ, ಸಹ್ಯಾದ್ರಿಯೆ,
ಹುಣ್ಣಿಮೆ, ಶಶಿಕಾಂತಿ,
ನಿಮ್ಮೆಲ್ಲರ ಸಾನ್ನಿಧ್ಯವೆ
ಪರಮಾತ್ಮನ ಶಾಂತಿ!

(ಹುಣ್ಣಿಮೆ ರಾತ್ರಿ)

ಕುವೆಂಪುರವರಿಗೆ ಈ ಒಂದು ಚಂದ್ರೋದಯ, ನಿಶ್ಚಲವಾದ ಸುಂದರ ಇರುಳು, ಸಹ್ಯಾದ್ರಿಯ ಸಾಲು, ಹುಣ್ಣಿಮೆ, ಶಶಿಕಾಂತಿ ಈ ಎಲ್ಲವೂಗಳಿಂದ ಕವಿ ಅಲೌಕಿಕವಾದ ಭಗವಂತನ ಸಾನಿಧ್ಯದ ಜೊತೆಗೆ ಶಾಂತಿಯನ್ನು ಪಡೆದುಕೊಳ್ಳುತ್ತಾರೆ.

ಈ ಅಪೂರ್ವವಾದ ಸನ್ನಿವೇಶದ ಹಿಂದೆ ಕುವೆಂಪುರವರಿಗಾದ ಅನುಭವದ ಕಡೆಗೆ ಹೊರಳಿದರೆ ಅವರ ಮಲೆನಾಡಿನ ಚಿತ್ರಗಳು ಬಾಯಿ ತೆರೆಯುತ್ತದೆ. "ಪರ್ವತ ಶಿಖರ ಶಿರೋರೇಖೆಯಲ್ಲಿ ಬೆಳೆದಿದ್ದ ಭೀಮಭೂರುಹರಾಜಿ ಜ್ಯೋತ್ಸ್ನಾ ಪ್ರದೀಪ್ತವಾದ

ನೀಲಾಕಾಶಪಟದಲ್ಲಿ ಚಿತ್ರಿತವಾದಂತೆ ತೋರಿತು. ಉತ್ಕಂಠಿತ ಭಾವದಿಂದ ಅತ್ತಕಡೆ ಉನ್ಮೀಲಿತನಯನನವಾಗಿ ದೃಷ್ಟಿಸಲಾರಂಭಿಸಿದೆ. ದೃಶ್ಯ ಅತ್ಯಂತ ರಮಣೀಯವಾಗಿತ್ತು. ಬೇಟೆಗಾರ ಕಬ್ಬಿಗನಾಗಿ ನೋಡಿದನು. ಮೆಲ್ಲಮೆಲ್ಲನೆ ಕತ್ತಲು ಹಿಂಜರಿಯತೊಡಗಿತು. ನೋಡುತ್ತಿದ್ದ ಹಾಗೆಯೆ ಪೂರ್ವಾಕಾಶ ಇನ್ನೂ ಪ್ರಕಾಶಮಾನವಾಯಿತು. ಶೀತಲಚಂದ್ರ ಕಿರಣಸ್ನಾತ ಶ್ವೇತೋರ್ಣಸದೃಶ ಖಂಡನೀರದಗಳು ನಭೋಮಧ್ಯದಲ್ಲಿ ಮೆರೆದುವು. ಸ್ವಲ್ಪ ಹೊತ್ತಿನಲ್ಲಿಯೆ ಆಕಾಶಪಟಸ್ಥ ಸ್ವಲ್ಪ ವಿರಳ ವೃಕ್ಷ ಮಾಲೆಗಳ ಹಿಂಗಡೆಯಲ್ಲಿ ಸುಂದರ ಶಶಾಂಕನು ಗೋಚರವಾದನು. ಜೊನ್ನದ ಬಣ್ಣದಿ ತುಂಬಿದ ಬಿಂಬದ ಹೊನ್ನಿನ ಸೊನ್ನೆಯು ಮೂಡಿದುದು. ಹೊಂಗದಿರುಗಳು ಒಯ್ಯೋಯ್ಯನೆ ಅರಣ್ಯ ಪ್ರದೇಶ ಮಾಡಿದುವು. ಕತ್ತಲು ನಿಬಿಡವೃಕ್ಷವಾಟಿಕೆಗಳಲ್ಲಿ ಅವಿತುಕೊಂಡಿತು. ಆದರೆ ಮೌನ ಎಂದಿನಂತೆ ಗಭೀರವಾಗಿತ್ತು. ಚಂದ್ರ ಆಕಾಶಮಾರ್ಗದಲ್ಲಿಡುವ ಹೆಜ್ಜೆಗಳ ಸದ್ದು ಕೂಡ ಕೇಳಿಸುವಂತಿತ್ತು. ಘೋರ ವಿಷಣ್ಣಳಾಗಿದ್ದ ನಿಶಾವನಿತೆ ಮಧುರ ಪ್ರಸನ್ನೆಯಾದಳು. ರುದ್ರವಾಗಿದ್ದುದೆಲ್ಲ ರಮಣೀಯವಾಯ್ತು. ಚಂದ್ರ ಮೇಲೇರಿದನು. ಗಿರಿಶಿಖರವನ್ನು ದಾಟಿ ಬಂದನು. ಗಗನದಿಂದ್ಯೆತರುವ ಜ್ಯೋತ್ಸ್ನಾತುಷಾರವೃಷ್ಟಿ ಹೆಣೆದುಕೊಂಡಿದ್ದ ಶ್ಯಾಮಲ ಪರ್ಣಾರ್ಣವವನ್ನು ಸ್ವರ್ಣವರ್ಣಮಯವನ್ನಾಗಿ ಮಾಡಿ ಸಂದುಗೊಂದುಗಳಲ್ಲಿ ತೂರಿಕೊಂಡು ಬಂದು ಬನದ ಸಣ್ಣ ಪುಟ್ಟ ಗಿಡ ಬಳ್ಳಿ ಹೊದರುಗಳ ಮೇಲೆ ಮಲಗಿತು. ಬೆಳ್ದಿಂಗಳ ಸೋನೆ ಎಡೆಬಿಡದೆ ಸುರಿಯಿತು. ಮರದ ನೆರಳುಗಳು ಮಾತ್ರ ಕತ್ತಲೆಗೆ ಆಶ್ರಯಸ್ಥಾನಗಳಾದುವು. ಅಲ್ಲಿಯೂ ಕೂಡ ಅವಿತುಕೊಂಡಿದ್ದ ಕತ್ತಲೆಯನ್ನು ಕಂಡು ಹಿಡಿಯಬಹುದಾಗಿತ್ತು. ಜಗತ್ತೆಲ್ಲ ಚಿತ್ರೀಭೂತವಾದ ಮಧುರ ಕವನದಂತಿತ್ತು.[6] ಅಂತಹ ಒಂದು ಕವನವನ್ನು ಗಮನಿಸಿದರೆ ಕೊಳಲು ಸಂಕಲನದ 'ಹುಣ್ಣಿಮೆ' ಕವನವನ್ನು ಗುರುತಿಸಬಹುದಾಗಿದೆ.

ನಭದೊಳು ಮೆಲ್ಲನೆ ಮಿಣುಕುತಲಿಣುಕುತ ಚುಕ್ಕಿಗಳೊಮ್ಮೆಯೆ ಮೂಡಿದುವು;
ಕನಸುಗಳಂದದಿ ಮೋಡಗಳೊಯ್ಯನೆ ತಣ್ಣೆಲರೊಳು ತೇಲಾಡಿದುವು!
ಮೂಡಣ ದೆಸೆಯೊಳು ನಸುಗೆಂಪೆಸೆಯಲು ಕತ್ತಲೆ ಹಿಮ್ಮೆಟ್ಟೋಡಿದುದು;
ಜೊನ್ನಿನ ಬಣ್ಣದಿ ತುಂಬಿದ ಬಿಂಬದ ಹೊನ್ನಿನ ಸೊನ್ನೆಯು ಮೂಡಿದುದು!

(ಹುಣ್ಣಿಮೆ, ಕೊಳಲು)

ಇದೇ ರೀತಿಯ ಮತ್ತೊಂದು ಉದಾತ್ತವಾದ ಅನುಭವವೊಂದನ್ನು ನಿವೇದಿಸುವ 'ಬರಲಿ ಜಡದ ಬಡತನಕ್ಕೆ ಜೀವದ್ಯೆ ಸಿರಿ' ಎಂಬ ಕವನ ನಿಲ್ಲುತ್ತದೆ. ಅದು

ಆಃ! ಮತ್ತದೊಮ್ಮೆ ಉಲಿ!
ಹಕ್ಕಿ, ಮತ್ತದೊಮ್ಮೆ ನಲಿ!
ಬತ್ತಿದೆದೆಗೆ ಬರಲಿ ನಿನ್ನ
ಗಾನದೊಳ್ಸರಿ!
ಬರಲಿ ಜಡದ ಬಡತನಕ್ಕೆ
ಜೀವದ್ಯೆಸಿರಿ!
ರಸದ ಹನಿ
ನಿನ್ನ ದನಿ!

(ಬರಲಿ ಜಡದ ಬಡತನಕ್ಕೆ ಜೀವದ್ಯೆಸಿರಿ)

ಈ ಕವನದಲ್ಲಿನ ಪಕ್ಷಿ ಕೇವಲ ಹೊರಗಿನ ಪ್ರಪಂಚದಲ್ಲಿ ರೆಕ್ಕೆ ಬಿಚ್ಚಿ ಹಾರಾಡುವ ಪಕ್ಷಿ ಮಾತ್ರವಲ್ಲ. ಇದೊಂದು ಪ್ರತಿಮೆ. ಕಾಲ ದೇಶಗಳನ್ನು ಮೀರಿ ಬತ್ತಿದ ಚೈತನ್ಯಕ್ಕೆ ಜೀವ ಚೈತನ್ಯವನ್ನು ತುಂಬುವ ಹಕ್ಕಿ. ಆದ್ದರಿಂದ ಕುವೆಂಪುರವರ ಹೃದಯಕ್ಕೆ ಸಾಮಾನ್ಯ ಕೀಟವು ಸಹ ಚೈತನ್ಯದ ಸೆಲೆಯಾಗಿ ಕಾಣುತ್ತದೆ.

ಇದೇ ರೀತಿಯಲ್ಲಿ ಮನುಷ್ಯ, ಪಕ್ಷಿ, ಪ್ರಾಣಿ, ನದಿ, ಪರ್ವತ, ಸಾಗರ ಮುಂತಾಗಿ ಜಗತ್ತಿನ ಚರಾಚರ ವಸ್ತುಗಳ ಅಂತರಾಳದಲ್ಲಿ ಪ್ರವಹಿಸುವ ಚೇತನ ಒಂದೇ ಎಂದು ಹೇಳುವ ಕವಿ ಕುವೆಂಪುರವರು ಪರಿಸರದಲ್ಲಿ ಹುಟ್ಟಿ ಬೆಳೆದ ಪ್ರತಿಯೊಬ್ಬ ವ್ಯಕ್ತಿಯು ಸಾಧನೆಯ ಜಗತ್ತಿನಲ್ಲಿ ಒಂದಿಷ್ಟಾದರೂ ಪಯಣಿಸುವವರಿಗೆ ಆ ಪ್ರಕೃತಿಯ ಸೌಂದರ್ಯಾತ್ಮಕ ಚೈತನ್ಯ ಬೇಕೇ ಬೇಕು ಎಂದು ತಿಳಿಸುತ್ತಾರೆ.

ಮೇಲೇಳು, ಸೋದರನೆ.
ಗೆಲುವಿನಿಂದಿದಿರುಗೊಳ್ ಉದಯಿಸುವ ಸೂರ್ಯನಂ,
ಗಿರಿಯ ನೆತ್ತಿಯ ಮೇಲೆ: ನಿನ್ನಮಲ ಹೃದಯದಲಿ
ನಾಳನಾಳಗಳಲ್ಲಿ ನೆತ್ತರಾಡಲಿ ಚಿಮ್ಮಿ
ಬಿಸಿಯಾಗಿ; ಎದೆಯುಬ್ಬೆ ಶ್ವಾಸಕೋಶವ ತುಂಬಿ
ಹೊರಬಾರಲಿ ತಂಪಾದ ನಿರ್ಮಲ ಸಮೀರಣಂ;
ಕಿವಿಹೊಗಲಿ ಹಕ್ಕಿಯುಲಿ; ಹೂಗಂಪು ಮೂಗಿನಲಿ
ಸಂಭೃತ ಸುವಾಸನೆಯ ನಾಕಮಂ ನಿರ್ಮಿಸಲಿ;

ಕಣ್ಣಿಗಾಗಲಿ ದಿವ್ಯಸೌಂದರ್ಯ ದರ್ಶನಂ;
ಪ್ರಜ್ಞೆಯಾಧಿಕ್ಯದಿಂ ಪ್ರಜ್ಞೆ ತಪ್ಪುವ ತೆರದಿ
ಭಾವದಾವೇಶದಲಿ ಬಾಳೆಂಬ ದಳ್ಳುರಿಯ
ನಾಲಗೆಯ ನಾಕ ನೀಲವ ನೆಕ್ಕೂವಂತಾಗೆ,
ಜೀವಗಿರಿ ಶೃಂಗದಲಿ ತುಂಗ ಗೋಪುರವಾಗಿ
ಮೆರೆಯಯ್ಯ, ಕಲೆಯ ಮಹಿಮೆಗೆ ಮಹಾ ಸಾಕ್ಷಿಯಾಗಿ!

(ಪ್ರಕೃತಿ ಉಪಾಸನೆ)

ಪ್ರಕೃತಿ ಸೌಂದರ್ಯದ ಚೇತನದಲ್ಲೇ ಮೇಲೇಳು ಸೋದರನೆ ಎಂದು ಹೇಳುತ್ತಾ, ಕವಿ ಮತ್ತೆ ಪರಿಸರ ಮುಖಿಯಾಗುತ್ತಾರೆ. ಮುಂದೆ ಕುವೆಂಪುರವರು ಮಲೆನಾಡಿನ ಮಳೆಯ ಪರಿಸರವನ್ನು ಭಾವಾಭಿವ್ಯಕ್ತಿಗೊಳಿಸಿದ್ದಾರೆ. ಈ ಕವನಗಳಲ್ಲಿ ಮೇಲು ನೋಟಕ್ಕೆ ಮಳೆಯ ರೌದ್ರತೆ ಭಯಂಕರವಾಗಿ ಕಾಣುತ್ತದೆ. ಆದರೆ ಕುವೆಂಪುರವರಿಗೆ ಅದು ಕ್ಷಣಿಕ ಮಾತ್ರದ ಕ್ರಿಯೆ. ಆದ್ದರಿಂದ ಕುವೆಂಪು ಇಲ್ಲಿಯೂ ಸಹ ಸೌಂದರ್ಯ ಮತ್ತು ಚೈತನ್ಯವನ್ನೇ ಕಾಣುತ್ತಾರೆ. ಈ ಅಂಶವನ್ನು ಕವನದ ಹಿನ್ನೆಲೆಯಲ್ಲಿ ಅರ್ಥೈಸುವುದಾದರೆ 'ಮುಂಗಾರು' ಮತ್ತು 'ವರ್ಷಭೈರವ' ಕವನಗಳು ಎದುರಾಗುತ್ತದೆ.

ಪಡುವಲ ಕಡಲಿನ ಮಿಂಚನು ಗುಡುಗನು ನುಂಗಿ ಬಸಿರಿನಲಿ, ಮುಡಿಗೆದರಿ,
ಮುಂಗಾರಸುರಿಯು ರಕ್ಕಸವಜ್ಜೆಗಳಿಕ್ಕುತ ಬಂದಳು ಬಲು ಗದರಿ!
ಗುಟುರನು ಹಾಕಿತು ಮುಂಗಾರ್ ಗೂಳಿ!
ಘೀಳೀಟ್ಟೊರಲಿತು ಘನಘಟೆಯಾಳಿ!
ಬುಸುಗುಟ್ಟಿತು, ಬೀಸಿತು ಬಿರುಗಾಳಿ!
ಸುತ್ತಲು ಮುತ್ತಿತು ಕಾರ್ಮೋಡ!
ಹರಿಯುವ ಹಾವಿನ ತೆರದಲಿ ಕತ್ತಲೆ ಮೆಲ್ಲನೆ ನುಂಗಿತು ಮಲೆನಾಡ!

(ಮುಂಗಾರು)

ಈ ಕವನದ ಭಾಗವನ್ನು ಗಮನಿಸಿದರೆ ಕುವೆಂಪುರವರು ಪ್ರಕೃತಿಯನ್ನು ರೌದ್ರತೆಯ ರೂಪದಲ್ಲಿ ಕಂಡಿರುವುದು ಕಾಣುತ್ತದೆ. ಮಲೆನಾಡಿನ ಮುಂಗಾರು ಇಲ್ಲಿ ಗದರಿ, ಗೂಳಿಯಂತೆ ಗುಟುರು ಹಾಕಿ, ಬೀಸುವ ಗಾಳಿ ಬಿರುಗಾಳಿಯಾಗಿ ಮುತ್ತಿತು ಎಂದು ವರ್ಣಿಸುತ್ತಾರೆ. ಆ ಮುಂಗಾರಿನ ಆರ್ಭಟಕ್ಕೆ ಮಲೆನಾಡಿನ ಸೂರ್ಯ ಕಣ್ಮರೆಗಾಗಿ ಕತ್ತಲು ಆವರಿಸಿತು ಎಂದು ಉದ್ಗರಿಸುತ್ತಾರೆ. ಇಂತಹ ಭೀಕರತೆಯನ್ನು ಸಮರ್ಥವಾಗಿ ಧ್ವನಿಸುವಂತೆ ಮಾಡುವ ಕವಿ ಮುಂದೆ

ಕದ್ದಿಂಗಳು; ಕಗ್ಗತ್ತಲು
ಕಾರ್ಗಾಲದ ರಾತ್ರಿ.
ಸಿಡಿಲ್ಮಿಂಚಿಗೆ ನಡುಗುತ್ತಿದೆ
ಪರ್ವತ ವನಧಾತ್ರಿ.
ತುದಿಯಿಲ್ಲದೆ ಮೊದಲಿಲ್ಲದೆ
ಹಿಡಿದಂಬರವನು ತಬ್ಬಿದೆ
ಕಾದಂಬಿನಿ ರಾಶಿ;
ನಿರ್ದಯ ಕಠಿನಾಘಾತದಿ
ಕುಂಭಿನಿಯನು ಅಪ್ಪಳಿದಿದೆ
ಘೀಳಿಟ್ಟುರೆ ಭೋರೆನ್ನುತೆ
ಬಿರುಗಾಳಿಯು ಬೀಸಿ!

(ವರ್ಷ ಭೈರವ)

ಇಲ್ಲಿ ಇನ್ನೂ ಉಗ್ರತೆಯಿಂದ ಪ್ರವೇಶಿಸಿದ ವರ್ಷ ಭೈರವನನ್ನು ಕವಿ ಕುವೆಂಪು ವರ್ಣಿಸಿದ್ದಾರೆ. ಇಲ್ಲಿನ ಮಿಂಚಿನ ಶಕ್ತಿ ಪ್ರಕೃತಿಯಲ್ಲಿನ ಚೈತನ್ಯದ ದರ್ಶನವೇವಿನ ಪ್ರಕೃತಿಯ ರೌದ್ರತೆಯನ್ನು ಮತ್ತು ಅದರ ಭೀಕರತೆಯನ್ನು ವರ್ಣಿಸುವುದು ಕವಿಗೆ ಮುಖ್ಯವಲ್ಲ. ಈ ಅಂಶವನ್ನು ಮುಂದಿನ ಪದ್ಯದಲ್ಲಿ ಗಮನಿಸಬಹುದು.

ಮುಗಿಲಿನ ಮುತ್ತುಗಳಾಲಿಯ ಕಲ್ಲುಗಳುದುರಲು ಹೂಮಳಿಯಂದದಲಿ
ಹುಡುಗರು ಹುಡುಗಿಯರಾಯ್ದಾಯ್ದವುಗಳ ಕುಣಿದು ತಿಂದರಾನಂದದಲಿ.
ಸಗ್ಗದ ಕಂಬನಿ ತಿರೆಯನು ತೊಯ್ಯೆ,
ಬೆಂದಿಹದುರಿಯನು ಪರ ಬಂದೊಯ್ಯೆ,
ಲೋಕಕೆ ನಾಕವು ಬಿಜಯಂಗೆಯ್ಯೆ
ಕಿಸಲಯ ಸುಮ ಸೋಪಾನದಲಿ,
ಕವಿ ಹೃದಯದಿ ವೋಹನ ಸುರಗಾನದ ಮಳೆಗರೆವುದು ಸುಮ್ಮಾನದಲಿ!

(ಮುಂಗಾರು)

ಹಿಂದಿನ ಪದ್ಯಗಳಲ್ಲಿ ಕವಿ ಹೃದಯವನ್ನು ಹೆದರಿಸುತ್ತಾ ಬಂದ ಮುಂಗಾರು ಕವಿ ಹೃದಯದಲ್ಲಿ ಸುರಗಾನದ ಮಳೆಗರೆಯುತ್ತದೆ. ಹೀಗೆ ಮುಂಗಾರು ರೌದ್ರತೆಯಿಂದ ಪ್ರಾರಂಭವಾಗಿ ಮುಗಿಲಿನಿಂದ ಬೀಳುವ ಮುತ್ತುಗಳಾಗಿ ಪರಿವರ್ತನೆ ಹೊಂದಿ ಮನೋಹರತೆಯನ್ನು ಸೃಷ್ಟಿಸಿದೆ. ಈ ಒಂದು ನಿಲುವಿನಲ್ಲಿಯೂ ಸಹ ಕುವೆಂಪುರವರ ಪ್ರಕೃತಿ ಪ್ರೇಮ ಎಂತಹುದು ಎಂಬುದು ಸ್ಪಷ್ಟವಾಗುತ್ತದೆ. ಜೊತೆಗೆ ಪ್ರಕೃತಿಯ ಅಖಂಡತೆಯನ್ನು ಸಾರುವ ಕುವೆಂಪುರವರು ಮಾಗಿಯ ಆಗಮನವನ್ನು ಸೂಚಿಸುತ್ತಾರೆ.

ನೋಡು, ನೋಡು, ಕುಳಿರ ಬೀಡು ಮಾಗಿ ಬರುತಿದೆ!
ಹಲ್ಲ ಕಡಿದು ಮುಷ್ಟಿ ಹಿಡಿದು ಸೆಡೆತು ಬರುತಿದೆ!

ಸುಗ್ಗಿಗೇನು ಕಡಮೆಯೇನು ನಮ್ಮ ಮಾಗಿಯು?
ಚಳಿಯನೊಂದನುಳಿದಿ ಬಂದರದುವೆ ಸುಗ್ಗಿಯು!
ಸುಗ್ಗಿ ಮಗುವು: ಮಾಗಿ ತಂದೆ!

ಮಾಗಿ ಬಂದರೇನು ಮುಂದೆ?
ಸುಗ್ಗಿ ಬಸಿರನೊಡೆದು ಹಿಂದೆ
ಬಂದೆ ಬರುವುದು!
ಸೊಗವ ಜಗಕೆ ನಗೆಯ ಮೊಗದೆ ತಂದೆ ತರುವುದು!

(ಮಾಗಿ ಬರುತಿದೆ)

ಇದರ ಮೂಲಕವಾಗಿಯೇ ಮಹತ್ ಅನುಭವದಲ್ಲಿ ಮುಳುಗಿರುವ ಕವಿ ಪ್ರಕೃತಿಯ ಮೇಲಿರುವ ಅತೀವ ಪ್ರೀತಿಯನ್ನು ತಿಳಿಸುತ್ತಾ ಇಲ್ಲಿ ಕಾಣುವ ಆನಂದದ ಮುಖ ಮತ್ತು ಮುಂದಿನ ದಿನಕ್ಕೆ ನಮಗಾಗಿ ಕಾದಿರುವ ಚೈತನ್ಯವನ್ನು ತಿಳಿಸಿದ್ದಾರೆ.

ಇನ್ನೂ ಕೆಲವು ಕವನಗಳಲ್ಲಿ ಕುವೆಂಪುರವರು ಕೆಲವೊಮ್ಮೆ ಪೂರ್ಣವಾಗಿ ಅಂತರ್ಮುಖಿಯಾಗುವುದನ್ನು ಕಾಣಬಹುದು.

ಹಸುರತ್ತಲ್! ಹಸುರಿತ್ತಲ್!
ಹಸುರೆತ್ತಲ್ ಕಡಲಿನಲಿ
ಹಸುರ್ಗಟ್ಟಿತೊ ಕವಿಯಾತ್ಮಂ
ಹಸುರ್‌ನೆತ್ತರ್ ಒಡಲಿನಲಿ!

(ಹಸುರು)

ಈ ಪದ್ಯದ ಹಿನ್ನೆಲೆಯಲ್ಲಿ ಪ್ರಕೃತಿಯ ಹಸಿರು ಜನಸಾಮಾನ್ಯರಿಗೆ ಕಾಣುವಂತೆ ಕುವೆಂಪುರವರಿಗೆ ಕೇವಲ ಹಸಿರು ಬಣ್ಣದ ರೀತಿಯಲ್ಲಿ ಕಾಣುವುದಿಲ್ಲ. ಅದಕ್ಕೆ ಬದಲಾಗಿ, ಅದು ಜೀವ ಚೈತನ್ಯದ ಸಂಕೇತವಾಗಿ ಕಾಣುತ್ತದೆ. ಅದು ಮುಂದುವರೆದಂತೆ ಇಲ್ಲಿ "ತನ್ಮಯತೆ ಅಥವಾ ಬೆರೆಯುವಿಕೆಯ ಘಟ್ಟ ವಿಶಿಷ್ಟವಾಗಿದೆ. ನಿಸರ್ಗದೊಡನೆ ಪೂರ್ಣವಾಗಿ ಒಂದಾಗುವುದು ಈ ಅನುಭವದ ಕೊನೆಯ ಘಟ್ಟ. ಇಲ್ಲಿ ಪರಿಸರ–ಪ್ರಜ್ಞೆ–ಅತೀತ ಇವುಗಳ ನಡುವೆ ವ್ಯತ್ಯಾಸ ಮಾಯವಾಗುತ್ತದೆ. ಪರಿಪೂರ್ಣ ತತ್ವದ ಅನುಭವ ಅಲ್ಲಿ ಮೂಡುತ್ತದೆ".[2] ಅಂದರೆ ಉನ್ಮತ್ತತೆಯ ಅನುಭವ ಎಂಬುದು ತನ್ಮಯತೆಯ ಕಡೆಗೆ

ಸಾಗಿದಂತೆ ಪೂರ್ಣಶಾಂತಿಯನ್ನು ಪಡೆಯುತ್ತಾ "ನಿಸರ್ಗಾನುಭವದ ಚಕ್ರ ಪೂರ್ಣ"[5]ವಾಗುವ ಕ್ರಿಯೆ. ಇದೆ ರೀತಿಯ ಇನ್ನೊಂದು ಕವನವನ್ನು ಗಮನಿಸುವುದಾದರೆ

ಹಸುರಾಗಸ; ಹಸುರು ಮುಗಿಲು;
ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ; ಹಸುರು ಕಣಿವೆ;
ಹಸುರು ಸಂಜೆಯಿ ಬಿಸಿಲೂ!

(ಹಸುರು)

ಇದೇ ರೀತಿಯಲ್ಲಿ ಕವನಗಳಲ್ಲಿ ಕುವೆಂಪು ಪ್ರಕೃತಿಯ ವಿಶಾಲ ಸೌಂದರ್ಯವನ್ನು ಕಂಡು ಅದರಲ್ಲೇ ಆತ್ಮೀಯತೆಯನ್ನು ಮತ್ತು ತನ್ಮಯತೆಯನ್ನು ಕಾಣುವ ಕವಿ ಕೆಲವು ಕವನದಲ್ಲಿ ಒಂಟಿ ಪಯಣಿಗನಂತೆ ಕಾಣುತ್ತಾರೆ. "ಕವಿಯ 'ನಾನು' ಕೇಂದ್ರವಾಗಿ ಕವಿತೆ ಮೂಲತಹ ಕವಿಯ ವ್ಯಕ್ತಿನಿಷ್ಟಾನುಭವದ ಅಭಿವ್ಯಕ್ತಿ. ಈ ವ್ಯಕ್ತಿ – ಈ ಕವಿತೆಗಳ ಪರಿಸರವನ್ನು ಗಮನಿಸಿದರೆ–ಏಕಾಂಗಿ, ಜನಸಂಗ ದೂರವಾದ ನಿಸರ್ಗದಲ್ಲಿ ಸಂಚಾರಿ"[6] ಎಂದು ಜಿ.ಎಸ್.ಶಿವರುದ್ರಪ್ಪನವರು ಒಂದು ಲೇಖನದಲ್ಲಿ ಗುರುತಿಸಿದ್ದಾರೆ. ಕೆಲವು ಕವನಗಳನ್ನು ಗಮನಿಸಿದರೆ ಏಕಾಂಗಿಯಾಗಿ, ಜನಸಂಗದಿಂದ ದೂರವಾದ ಅನುಭವವನ್ನು ನೀಡಿದರೂ "ಬಾ" ಎಂಬ ಶಬ್ಧ ಧನ್ಯವಾಗಿಸುತ್ತದೆ.

ತಿರೆಯ ಹೋರಾಟದಲಿ
ಬಗೆ ಕದಡಿ ಕಂಗೆಡಲು,
ನೇಹಿಗನೆ, ಬಾ, ಇಲ್ಲಿ
ಶಾಂತಿಯಿಹುದು!
ತಂಬೆಲರ ತೀಟವಿದೆ
ಬಳಲಿಕೆಯ ಪರಿಹರಿಸೆ;
ಮೋಹಿಸಲು ಕಂಗಳನು
ಪರಮ ಸೌಂದರ್ಯವಿದೆ;
ಜೀವವನು ಸಂತವಿಸೆ

ದೇವ ಸಾನ್ನಿಧ್ಯವಿದೆ!
ಸೋದರನೆ, ಬಾ, ಇಲ್ಲಿ;
ಧನ್ಯನಾಗುವೆ ಇಲ್ಲಿ;
ಪುಣ್ಯನಾಗುವೆ ಇಲ್ಲಿ;
ಪೂರ್ಣನಾಗುವೆ ಇಲ್ಲಿ;
ಬೆಟ್ಟದಲ್ಲಿ.

(ಲಲಿತಾದ್ರಿ)

ಈ ಸ್ಥಿತಿಯಲ್ಲಿ ಕವಿ ತನ್ನನ್ನು ತಾನು ಕಳೆದುಕೊಳ್ಳುತ್ತಾ ಚಿಂತೆಯಿಂದ ದೂರವಾಗುತ್ತಾ ಪ್ರಕೃತಿಯಲ್ಲಿ ತನ್ಮಯತೆಯನ್ನು ಪಡೆದು ಚೈತನ್ಯದ ಬಳಲಿಕೆಯಲ್ಲಿ ನರಳುತ್ತಿರುವ ಜನ ಸಮುದಾಯವನ್ನು ಕರೆಯುತ್ತಿದ್ದಾರೆ. ಇದೇ ರೀತಿಯಲ್ಲಿ ಜನರು ತೀರ ಅಪರೂಪ ಎನ್ನುವ ಅಭಿಪ್ರಾಯದಂತೆ ಡಿ.ಆರ್. ನಾಗರಾಜ್ ಒಂದು ಲೇಖನದಲ್ಲಿ "ಕುವೆಂಪು ಅವರಲ್ಲಿ ಬರುವ ನಿಸರ್ಗ ಜನವಿಹೀನವಾದದ್ದು ಈ ಮುಖ್ಯವಾದ ಅಂಶದ ವಿವರಗಳನ್ನು ಗ್ರಹಿಸಿದರೆ ಅವರ ಪ್ರಕೃತಿ ದರ್ಶನದ ಹಿಂದಿನ ಒತ್ತಡಗಳು ಸಾಕಷ್ಟು ಸಮಗ್ರವಾಗಿ ಅರ್ಥವಾಗುತ್ತದೆ. ಕುವೆಂಪು ಮತ್ತು ವರ್ಡ್ಸ್‌ವರ್ತ್‌ರ ನಡುವೆ ಇರುವ ಮುಖ್ಯ ವ್ಯತ್ಯಾಸ ಇದು. ಕುವೆಂಪು ನಿಸರ್ಗದಲ್ಲಿ ಜನರಿರುವುದು ತೀರಾ ತೀರಾ ಅಪರೂಪ. ಆಗಾಗ್ಗೆ ಅಪರೂಪಕ್ಕೆ ಮಿತ್ರನೊಬ್ಬನನ್ನು ಬಾ ಹೊರಗೆ ಎಂದು ಕರೆವುದುಂಟು"[೧೦]. ಈ ವ್ಯಾಖ್ಯಾನದ ಹಿನ್ನೆಲೆಯಲ್ಲಿ ಚರ್ಚಿಸಿದರೆ

ನಿರತಯಂಬುಧಿಯಲ್ಲಿ
ಮುಳುಗು ಬಾ ತೇಲು ಬಾ,
ಕರಗು ಬಾ; ಬಾ ನೋಡು
ಪರಮಾತ್ಮನಂ!
ಬಾ, ಹೊರಗೆ; ಗೂಡ ಬಿಡು,
ಬಾ, ಬೇಗ ಬಾ!

(ಮೋಹಿಸುವ ಸಂಜೆ, ಕೊಳಲು)

'ಬಾ' ಎಂಬುದರಲ್ಲಿ ಸಾಮಾಜಿಕ ಎಚ್ಚರ ಇರುವುದರ ಹಿಂದೆ ಕವಿ ನಿಸರ್ಗ ಸಾನಿಧ್ಯದಲ್ಲಿ ತನಗಾದ ಅನುಭವವನ್ನು ವರ್ಣಿಸುತ್ತಿರುವ ವ್ಯಕ್ತಿಯಾಗಿರುವುದರಿಂದ ಕವಿತೆಯೊಳಗಿನ ಕವಿ ಪ್ರತ್ಯೇಕವಾಗಿ ಕರೆಯುವ ಅಗತ್ಯವಿದೆಯೇ?* ಇನ್ನೊಂದು ರೀತಿಯಲ್ಲಿ ಪ್ರಕೃತಿ ಪ್ರತಿಕ್ಷಣದಲ್ಲಿಯೂ ಚೈತನ್ಯ ರೂಪಿಯಾಗಿ ಕವಿಗೆ ಕಂಡಿರುವುದರ ಹಿನ್ನೆಲೆಯಲ್ಲಿ ಜನಸಮುದಾಯ ಈ ಅನುಭವದಿಂದ ದೂರವಾಗಿದ್ದ ಸ್ಥಿತಿ ಕವಿಗೆ ಬೇಸರ ಉಂಟುಮಾಡಿದೆ. ಆದ್ದರಿಂದ ಈ ಪ್ರಕೃತಿ ಸೌಂದರ್ಯದ ಉನ್ಮತ್ತತೆಯಲ್ಲಿ ತೇಲುತ್ತಿದ್ದ ಕವಿ ಕೆಲವೊಮ್ಮೆ ಒಂಟಿಯಾಗಿ ಕಂಡಿರಬಹುದು. ಅದನ್ನು ಗಮನಿಸುವುದಾದರೆ

ಎಲ್ಲೆಲ್ಲಿಯು ಯಾರಲ್ಲಿಯು
ಉದ್ವೇಗವೆ ಇಲ್ಲ;
ಸೂಸುತ್ತಿದೆ ಹರಿಯುತ್ತಿದೆ
ತುಂಬುತ್ತಿದೆ ತುಳುಕುತ್ತಿದೆ
ಬಾಳಿನ ಜೇನ್ಬೆಲ್ಲ!

(ಆಕಾಶದ ಹೆಬ್ಬಯಲಿನಲಿ)

ಎಂಬುದಕ್ಕೆ ಕುವೆಂಪು ತಮ್ಮ ಮಲೆನಾಡಿನ ಚಿತ್ರಗಳಲ್ಲಿ "ಪ್ರಕೃತಿ ಉಪಾಸಕನಾಗಿದ್ದ ನಾನು ಸೌಂದರ್ಯೋಪಾಸನೆಗೆ ತೊಡಗಿದೆ ಬೇಟೆಗಾರನಿಗೆ ಬೇಟೆಯಾಗದಿದ್ದರೂ ಕಬ್ಬಿಗನಿಗೆ ಬೇಟೆಯಾಯಿತು ಎಂದುಕೊಂಡೆ. ಕೋವಿಯನ್ನು ತೊಡೆಯ ಮೇಲೆ ಇಟ್ಟುಕೊಂಡು ಬಿಡುಗಣ್ಣನಾಗಿ ನೋಡತೊಡಗಿದೆ. ಅವ್ಯಕ್ತದ ಅಂತಃಕರಣ ಮೂರ್ತಿಯಾಗಿರುವ ರತಿ ತನ್ನ ಅನಂತ ಐಶ್ವರ್ಯವನ್ನು ಮುಕ್ತಹಸ್ತೆಯಾಗಿ ಚೆಲ್ಲಿ ಸೂಸಿದ್ದಳು. ಸೊಬಗು ಸೂರೆಯಾಗಿತ್ತು. ಆದರೆ ಪ್ರೇಕ್ಷಕರಾರು? ಶತಮಾನಗಳಿಂದ ಇದೇ ರೀತಿಯಲ್ಲಿ ಸೊಬಗು ಸೂರೆಯಾಗುತ್ತಿರುವುದು? ಎಷ್ಟು ಜನ ನೋಡಿ ಅನುಭವಿಸಿದ್ದಾರೆ?"[00] ಎಂಬ ಮಾತನ್ನು ವ್ಯಕ್ತಪಡಿಸಿದ್ದಾರೆ.

---

*ಕವಿ ಪ್ರಕೃತಿಯಿಂದ ಪಡೆದ ಚೈತನ್ಯ ರೂಪಿ ಅನುಭವವನ್ನು ಜನ ಸಾಮಾನ್ಯರ ಮುಂದೆ ಕವಿತೆಗಳ ಮೂಲಕ ಹಿಡಿಯುತ್ತಿರುವುದರಿಂದ ಅದು ತಲುಪಬೇಕಾಗಿರುವುದು ಅದೇ ಚೈತನ್ಯ ಪೂರ್ಣ ಪ್ರಕೃತಿಯಿಂದ ಮಾತ್ರ. ಆದ್ದರಿಂದ ಆ ಚೈತನ್ಯ ಪಡೆದಿರುವ ಕವಿ ಕವಿತೆಯಲ್ಲಿ 'ಇಲ್ಲಿ ಬಾ' ಎಂದು ಒಮ್ಮೊಮ್ಮೆ ಕರೆಯುವುದು ಅಥವಾ ಒಂಟಿಪಯಣಿಗನ ರೀತಿಯಲ್ಲ.

ಮುಂದೆ ಬಯಲು ಸೀಮೆಯ ಬರಡು ವಾತಾವರಣದಿಂದ ಬೇಸರಗೊಂಡ ಕುವೆಂಪುರವರು ತಮ್ಮ ಮನದಂಗಳದ ಮಾತಾಗಿ 'ಹೋಗುವೆನು ನಾ' ಕವನ ರಚಿಸಿದ್ದಾರೆ. ಅದು

ಹೋಗುವೆನು ನಾ ಹೋಗುವೆ ನಾ ನನ್ನ ಒಲುಮೆಯ ಗೂಡಿಗೆ;
ಮಲೆಯ ನಾಡಿಗೆ, ಮಳೆಯ ಬೀಡಿಗೆ. ಸಿರಿಯ ಚೆಲುವಿನ ರೂಢಿಗೆ.
ಬೇಸರಾಗಿದೆ ಬಯಲು, ಹೋಗುವೆ ಮಲೆಯ ಕಣಿವೆಯ ಕಾಡಿಗೆ:
ಹಸುರು ಸೊಂಪಿನ ಬಿಸಿಲು ತಂಪಿನ ಗಾನದಿಂಪಿನ ಕಾಡಿಗೆ!
(ಹೋಗುವೆನು ನಾ)

ಈ ಕವನದಲ್ಲಿ ಕುವೆಂಪುರವರು ಹಸಿರ ಬಯಲಿನ ಪ್ರದೇಶಕ್ಕೆ ಎಷ್ಟು ಮಾರು ಹೋಗಿದ್ದಾರೆ ಎಂಬ ವಿಷಯವನ್ನು ಗಮನಿಸಬಹುದು. ಆದ್ದರಿಂದ ಕವಿಗೆ ಮಲೆನಾಡನ್ನು ಎಷ್ಟು ಬಗೆಯಾಗಿ ವರ್ಣಿಸಿದರೂ ಸಾಲದು, ಬಯಕೆ ತೀರದು. ಆದ್ದರಿಂದ ಮಲೆನಾಡಿನ ಐಸಿರಿಯನ್ನು ಸ್ವರ್ಗಕ್ಕೆ ಮತ್ತು ನಂದನಕ್ಕೆ ಹೋಲಿಸಿದ್ದಾರೆ.

ಅಲ್ಲಿ ಇವೆ ಕಾಜಾಣ, ಕೋಗಿಲೆ, ತೇನೆ. ಗಿಳಿ. ಕಾಮಳ್ಳಿಯು;
ಕಂಪೆಸೆವ ಸೀತಾಳಿ, ಕೇದಗೆ, ಬಕುಳ, ಮಲ್ಲಿಗೆ ಬಳ್ಳಿಯು.
ನೀಲಿ ಬಾನಲಿ; ಹಸುರು ನೆಲದಲಿ; ಕಂಗಳೆರಡನೆ ಬಲ್ಲವು:
ಅಲ್ಲಿ ಸಗ್ಗವೆ ಸೂರೆ ಹೋಗಿದೆ; ನಂದನವೆ ನಾಡೆಲ್ಲವು!
(ಹೋಗುವೆನು ನಾ)

ಹೀಗೆ ಮಲೆನಾಡಿನ ಚಲಾಚಲ ಜಗತ್ತನ್ನು ಹೃದಯಂಗಮವಾಗಿ ವರ್ಣಿಸುವ ಕುವೆಂಪು ನಗರ ನಾಗರೀಕತೆಯನ್ನು ಕುರಿತು ಬೇಸರ ವ್ಯಕ್ತಪಡಿಸುತ್ತಾರೆ.

ನಗರ ನಾಗರಿಕತೆಯ ಗಲಿಬಿಲಿ ಅಲ್ಲಿ ಸೋಂಕದು, ಸುಳಿಯದು.
ದೇಶದೇಶದ ವೈರಯುದ್ಧದ ಸುದ್ದಿಯೊಂದೂ ತಿಳಿಯದು.

'ತಿಳಿಯದಿರುವುದೆ ತಿಳಿವು' ಎಂಬುವ ನನ್ನಿ ಆಯೆಡೆ ತಿಳಿವುದು.
'ತಿಳಿಯೆ ನೋವಿರೆ, ತಿಳಿಯದಿರುವುದೆ ಜಾಣ್ಮೆ' ಎಂಬರಿವುಳಿವುದು!
(ಹೋಗುವೆನು ನಾ)

ಈ ಕವನಗಳನ್ನು ಗಮನಿಸಿದರೆ ಉತ್ಕಟವಾದ ಹಂಬಲದೊಂದಿಗೆ ಮಲೆನಾಡನ್ನು ಸೂರೆ ಹಿಡಿದಿಡುವ ಕುವೆಂಪು 'ಹೋಗುವೆನು ನಾ' ಎಂಬ ಕವನದಲ್ಲಿ ಮಲೆನಾಡಿನ ವಿರಾಟ್ ಸ್ವರೂಪವನ್ನೇ ತೆರೆದಿಟ್ಟಿದ್ದಾರೆ. ಇಲ್ಲಿ ಪ್ರಾಣಿ, ಪಕ್ಷಿ, ಪುಷ್ಪ ಮೊದಲೆನ್ನದೇ, ಹುಲಿಯ ಗರ್ಜನೆ, ಹಂದಿಯ ಆರ್ಭಟಗಳನ್ನು ಒಳಗೊಂಡ ಮಲೆನಾಡಿನ ಜೀವಸಂಕುಲದ ಭಾವಕೋಶವನ್ನೇ ತೆರೆದಿಟ್ಟಿದ್ದಾರೆ.

ಹೀಗೆ ಪ್ರಕೃತಿಯೊಂದಿಗೆ ವ್ಯಕ್ತಿತ್ವವನ್ನು ಕಂಡುಕೊಂಡು, ಪ್ರಕೃತಿಗೂ ಒಂದು ವ್ಯಕ್ತಿತ್ವವನ್ನು ನೀಡಿದ ಕುವೆಂಪು ಬಗೆಗೆ ಕುರ್ತುಕೋಟಿಯವರು ಈ ಮಾತನ್ನು ಹೇಳಿದ್ದಾರೆ. "ನಿಸರ್ಗದ ಚೆಲುವನ್ನು ಅವರು ಅನೇಕ ಕಾರಣಗಳಿಗಾಗಿ ಪ್ರೀತಿಸಿದ್ದಾರೆ. ನಿಸರ್ಗದ ಆವರಣದಲ್ಲಿ ಸಾಮಾಜಿಕ ವಿಷಮತೆ ಕಾಣದಿರುವುದೇ ಇವರ ಪ್ರೀತಿಗೆ ಮುಖ್ಯವಾದ ಕಾರಣವಾಗಿದೆ. ಅಲ್ಲದೆ ನಿಸರ್ಗ ಅವರ ಕಣ್ಣಿಗೆ ಕಲಾ ಸುಂದರಿ, ಜೀವನದ ಆಗು-ಹೋಗುಗಳ ಮೇಲೆ ಅವಳದು ಸರ್ವಾಧಿಕಾರ. ಎಲ್ಲಕ್ಕಿಂತ ಹೆಚ್ಚಾಗಿ ಕುವೆಂಪು ಪ್ರಕೃತಿಯ ಸೌಂದರ್ಯಕ್ಕೆ ಮುಗ್ಧರಾಗಿದ್ದಾರೆ. ಈ ಚೆಲುವೇ ಮೊದಲು. ಈ ಚೆಲುವೇ ಕೊನೆ ಎಂಬಂತೆ ಚೆಲುವಿನ ಆರಾಧನೆಯನ್ನು ನಡೆಸಿದ್ದಾರೆ. ಅದಕ್ಕಾಗಿ ಏನೋ ಅವರ ಕಲ್ಪನಾಶಕ್ತಿಯ ಉಳಿದ ಸಂವೇದನೆಗಳೆಲ್ಲ ನಷ್ಟವಾಗಿ ಬಿಡುತ್ತದೆ. ಕೇವಲ ಬಹಿರಂಗದ ವರ್ಣವೈಭವಕ್ಕೆ ಮನಸೋತ ಅವರ ಕಣ್ಣಿಗೆ ಪ್ರಕೃತಿಯ ಅಂತರಂಗ ಅಸ್ಪಷ್ಟವಾಗಿ ಮಾತ್ರ ಗೊತ್ತಿದೆ. ಸೂರ್ಯೋದಯ ಚಂದ್ರೋದಯ ದೇವರ ದಯ ಕಾಣೋ ಎಂದೆಂದಾಗ ಆ ಅಂತರಂಗ ಒಮ್ಮೊಮ್ಮೆ ಕಾಣಿಸಿಕೊಂಡರೂ ಮುಂದೆ ವಿವರಗಳಲ್ಲಿ ಅಡಗಿ ಹೋಗುತ್ತದೆ. ಮಳೆಬಿಲ್ಲಿನ ಚೆಲುವು, ತೇನೆಹಕ್ಕಿಯ ನಿರ್ಲಿಪ್ತಹರ್ಷ, ಮುಂಗಾರಿನ ಅದಮ್ಯಶಕ್ತಿ, ಸುಗ್ಗಿಯ ಮನೋಹರತೆ ಇವುಗಳನ್ನು ದೂರದಿಂದ ಕಂಡು ವರ್ಣಿಸುವಂತಿದೆ. ಪ್ರಕೃತಿಯ ಅನೇಕ ನಿಲುವುಗಳು ಅವರ ಮುಗ್ಧ ಕುತೂಹಲವನ್ನು ಕೆರಳಿಸುತ್ತವೆ. ಆದರೆ ಅವಾವವೂ ಕವಿಯ ಸ್ವಂತ ಅನುಭವಗಳಿಗಾಗಿ ಹೊರಹೊಮ್ಮುವುದಿಲ್ಲ. ಮಳೆಬಿಲ್ಲು, ತೇನೆಹಕ್ಕಿ, ಸುಗ್ಗಿ, ಕಾಜಾಣ, ಹೂವುಗಳೂ, ಮಾಗಿ, ಈ ಕವಿತೆಗಳನ್ನು ಉದಾಹರಣೆಗಳೆಂದು ನೋಡಬಹುದು.

ಇಲ್ಲಿಯ ವಿವರಗಳೆಲ್ಲ ಹೊಚ್ಚ ಹೊಸದಾಗಿದ್ದು ಬಣ್ಣ–ಕಾಂತಿಗಳಿಂದ ತುಂಬಿದೆ. ಅವುಗಳ ಹಿಂದೆ ಚೈತನ್ಯ ಸುಳಿಯುತ್ತಿರುವುದನ್ನು ಕವಿ ಮನಗಂಡಿದ್ದಾನೆ. ಅವುಗಳ ಚೆಲುವು ಛಾಯಾಚಿತ್ರದಂತೆ ಒಡಮೂಡಿ ಕೊನೆಗೆ ಮಾತ್ರ ಕವಿ ನಂಬಿರುವ ಒಂದು ನೀತಿಪಾಠದಿಂದಲೋ ಅಥವಾ ಇನ್ನೊಬ್ಬರ ವಿಚಾರಗಳಿಂದಲೋ ಕವಿತೆ ಮುಗಿತಾಯವನ್ನು ಪಡೆಯುತ್ತದೆ. ಪ್ರಕೃತಿಯ ಚೆಲುವು ಕವಿಯ ಸ್ವಂತ ಅನುಭವವಾಗಿ ಇಳಿಯುವುದಿಲ್ಲ. ಅನುಭವದ ಬೀಜ ಮರವಾಗಿ ಬೆಳೆದು ತನ್ನದೆ ಆದ ವಿಶಿಷ್ಟವಾದ ಆಕಾರವನ್ನು ಪಡೆಯುವುದಿಲ್ಲ. ಇದಕ್ಕೆ ಕಾರಣ ಕುವೆಂಪುರವರಲ್ಲಿ ಕಾವ್ಯಶಕ್ತಿಯ ಕೊರತೆಯೆಂದು ತಿಳಿಯಲಾಗದು. ಇಂಗ್ಲಿಷ್ ಕಾವ್ಯದ ಮರೆಯಲಾಗದ ಸಂಸ್ಕಾರ ಹಾಗೂ ಸೌಂದರ್ಯವನ್ನು ಕಂಡಾಗ ಉಂಟಾಗುವ ಮನಸ್ಸಿನ ಚಂಚಲತೆ ಇದಕ್ಕೆ ಕಾರಣವಾಗಿದೆ. ಒಂದು ಮಾತನ್ನು ಈ ಸಂದರ್ಭದಲ್ಲಿ ಒಪ್ಪಬೇಕು. ಕುವೆಂಪುರವರಗಿಂತ ಮೊದಲು ನಿಸರ್ಗದ ಇಷ್ಟೊಂದು ವಿವರಗಳನ್ನು ಯಾರೂ ನಮ್ಮ ಕಾವ್ಯದಲ್ಲಿ ತಂದಿರಲಿಲ್ಲ”[೧೨]

ಈ ಅಭಿಪ್ರಾಯಕ್ಕೆ ಎಚ್.ಎಸ್.ರಾಘವೇಂದ್ರರಾವ್‌ರವರ ನಿಲುವನ್ನು ಗಮನಿಸಿದರೆ ಈ ಒಂದು ಉಲ್ಲೇಖದ ಹಿನ್ನೆಲೆಯಲ್ಲಿ ಕಾಣುವ ಮಾನದಂಡ ತಿಳಿಯುತ್ತದೆ. “ಇಲ್ಲಿನ ಅಭಿಪ್ರಾಯಗಳು ಹೆಚ್ಚು ಕಡಿಮೆ ನವ್ಯ ಚಳುವಳಿಯು ಕುವೆಂಪು ಅವರ ಕಾವ್ಯದ ಬಗ್ಗೆ ತಳೆದ ಧೋರಣೆಯನ್ನು ಪ್ರತಿನಿಧಿಸುತ್ತದೆ. ಕುವೆಂಪು ಅವರ ಕವಿತೆಯನ್ನು ಒಪ್ಪದಿರುವುದು ಮತ್ತು ಹಾಗೆ ಹೇಳಲು ಹಿಂಜರಿಕೆ ಈ ಮಾತುಗಳ ಹಿಂದೆ ಕೆಲಸ ಮಾಡಿರುವ ಶಕ್ತಿಗಳು. ಕುರ್ತುಕೋಟಿಯವರ ವಿಮರ್ಶೆಯಲ್ಲಿ ಸಾಮಾನ್ಯವಾಗಿ ಆಗುವ ಹಾಗೆ ಅವರು ಬೇಂದ್ರೆ ಕಾವ್ಯದ ಮಾನದಂಡಗಳೊಂದಿಗೆ ಕುವೆಂಪು ಕವಿತೆಯನ್ನು ಪ್ರವೇಶಿಸುತ್ತಾರೆ”[೧೩]

ಕೀರ್ತಿನಾಥ ಕುರ್ತುಕೋಟಿಯವರ ಅಭಿಪ್ರಾಯಕ್ಕೆ ಮರಳುವುದಾದರೆ ಕುವೆಂಪು ಕಾವ್ಯ ರಚನೆಯ ಸಂದರ್ಭದಲ್ಲಿ ಕೇವಲ ಪ್ರಕೃತಿಯ ವರ್ಣನೆಯಲ್ಲೇ ಮೈಮರೆಯದೇ ಅಲ್ಲಿ ಅಂತರ್ಮುಖಿಯಾಗುತ್ತಾ ಜಡತೆಯಲ್ಲಿಯೂ ಚೈತನ್ಯವನ್ನು ಕಂಡಿದ್ದಾರೆ. ಅದು “ಕವಿಶೈಲಕ್ಕೆ ಹರಟೆ ಹೊಡೆಯುವ ಸಲುವಾಗಿ ಹೋದರೆ ಅಲ್ಲಿ ಯಾವ ಸವಿಯೂ ಸಿಗದು. ಮಿತ್ರರಿರ ಮಾತಿಲ್ಲಿ ಮೈಲಿಗೆ, ಸುಮ್ಮನಿರಿ; ಮೌನವೇ ಮಹತ್ತಿಲ್ಲಿ. ಈ ಬೆಳಗುಹೊತ್ತಿನಲ್ಲಿ, ಕವಿಶೈಲದಲಿ ಎಂದು ಕವಿ ಎಚ್ಚರಿಸುವ ಮೂಲಕ ಅಲ್ಲಿ ಅತ್ಮೋಲ್ಲಾಸವಾಗಬೇಕಾದರೆ ಮೌನ, ಧ್ಯಾನ, ಚಿಂತನೆ ಅಗತ್ಯ; ಕವಿಶೈಲಕ್ಕೆ ಹೋಗುವವರು ರಸಾನುಭೂತಿಗಾಗಿ ಮಾತ್ರ

ಹೋಗಬೇಕು. ಅಲ್ಲಿಂದ ಕಾಣುವ ದೃಶ್ಯ ಯಾರನ್ನಾದರೂ ಭಾವಪರವಶವನ್ನಾಗಿ ಮಾಡುತ್ತದೆ. ಅತೀಂದ್ರ ಅನುಭವಕ್ಕೆ ಮನಸ್ಸನ್ನು ಏರಿಸುತ್ತದೆ. ಆ ಮಹತ್ತಿನ ಸಾನಿಧ್ಯದಿಂದ ಸಾಮಾನ್ಯನೂ ಮಹಾತ್ಮನಾಗಬಹುದು ಎಂದು ಸ್ಪಷ್ಟಪಡಿಸಿದ್ದಾರೆ"[೧೪] ಇದೇ ಕುವೆಂಪು ಅವರಿಗೆ ನೀಡಿದ ಮಹತ್ ಅನುಭವ.

****

ಈ ಅಧ್ಯಾಯದ ಹಿನ್ನೆಲೆಯಲ್ಲಿ ಕೆಲವು ಅಂಶಗಳನ್ನು ಗುರುತಿಸುವುದಾದರೆ:

೧. ಕುವೆಂಪುರವರು ಪ್ರಕೃತಿಯಲ್ಲಿ ಒಂದಾಗುವ ಮೂಲಕ ತನ್ಮಯತೆಯನ್ನು ಪಡೆದು ಪ್ರಕೃತಿಯನ್ನು ಆರಾಧಿಸುತ್ತಾರೆ.

೨. ಕುವೆಂಪುರವರು ತಮ್ಮ ಕವನಗಳ ಮೂಲಕ ಪ್ರಕೃತಿಯಲ್ಲಿ ಒಂಟಿ ಪಯಣಿಗನಂತೆ ಕಂಡರೂ ಸಹ ಪ್ರಕೃತಿಯಲ್ಲಿ ತನಗಾದ ಅನುಭವವನ್ನು ಕವನಗಳ ಮೂಲಕ ಅಭಿವ್ಯಕ್ತಿಸುವುದರಲ್ಲಿ ಒಂಟಿ ಪಯಣಿಗನಲ್ಲ.

೩. ಕುವೆಂಪು ಪ್ರಕೃತಿಯನ್ನು ಆರಾಧಿಸುತ್ತಾ ತನ್ಮಯತೆಯನ್ನು ಪಡೆಯುವ ಮೂಲಕ ಕೆಲವು ಕವನದಲ್ಲಿ ಅಂತರ್ಮುಖಿಯಾಗುತ್ತಾರೆ.

೪. ಒಟ್ಟಾರೆಯಾಗಿ ಕನ್ನಡ ಸಾಹಿತ್ಯದಲ್ಲಿ ಪ್ರಕೃತಿಯನ್ನು ಎಲ್ಲಾ ಮುಗ್ಗುಲಿನಿಂದ ಸೆರೆಹಿಡಿದ ನಿಸರ್ಗ ಸಂಸ್ಕೃತಿಯ ರೂಪಕಕಾರರು ಕುವೆಂಪು.

ಅಡಿಟಿಪ್ಪಣಿ

೧. ಕುವೆಂಪು ಪುನರಾಲೋಕನ: ಲೇ. ಜಿ.ಎಸ್.ಶಿವರುದ್ರಪ್ಪ
ಪುಟ ೧೪, ಪ್ರ ೨೦೦೫, ಅಂಕಿತ ಪುಸ್ತಕ, ಬೆಂಗಳೂರು

೨. ಸಹ್ಯಾದ್ರಿಯ ಸೂರ್ಯ: ಸಂ. ಚಕ್ಕೆರೆ ಶಿವಶಂಕರ್
ಪುಟ ೬೧, ಪ್ರ ೨೦೦೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೩. ಮಲೆನಾಡಿನ ಚಿತ್ರಗಳು: ಲೇ. ಕುವೆಂಪು
ಪುಟ ೩೦, ಪ್ರ ೨೦೦೭, ಉದಯ ರವಿ ಪ್ರಕಾಶನ, ಮೈಸೂರು

೪. ಸಹ್ಯಾದ್ರಿಯ ಸೂರ್ಯ: ಸಂ. ಚಕ್ಕೆರೆ ಶಿವಶಂಕರ್
ಪುಟ ೬೧, ಪ್ರ ೨೦೦೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೫. ಮಲೆನಾಡಿನ ಚಿತ್ರಗಳು: ಲೇ. ಕುವೆಂಪು
ಪುಟ ೦೫, ಪ್ರ ೨೦೦೭, ಉದಯ ರವಿ ಪ್ರಕಾಶನ, ಮೈಸೂರು

೬. ಮಲೆನಾಡಿನ ಚಿತ್ರಗಳು: ಲೇ. ಕುವೆಂಪು
ಪುಟ ೨೫, ಪ್ರ ೨೦೦೭, ಉದಯ ರವಿ ಪ್ರಕಾಶನ, ಮೈಸೂರು

೭. ಶಕ್ತಿ ಶಾರದೆಯ ಮೇಳ: ಲೇ. ಡಿ.ಆರ್ ನಾಗರಾಜ್
ಪುಟ ೯೦, ಪ್ರ ೨೦೦೨, ಅಕ್ಷರ ಪ್ರಕಾಶನ, ಹೆಗ್ಗೋಡು

೮. ಶಕ್ತಿ ಶಾರದೆಯ ಮೇಳ: ಲೇ. ಡಿ.ಆರ್ ನಾಗರಾಜ್
ಪುಟ ೯೦, ಪ್ರ ೨೦೦೨, ಅಕ್ಷರ ಪ್ರಕಾಶನ, ಹೆಗ್ಗೋಡು

೯. ಸಹ್ಯಾದ್ರಿಯ ಸೂರ್ಯ: ಸಂ. ಚಕ್ಕೆರೆ ಶಿವಶಂಕರ್
ಪುಟ ೬೨, ಪ್ರ ೨೦೦೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೦. ಶಕ್ತಿ ಶಾರದೆಯ ಮೇಳ: ಲೇ. ಡಿ.ಆರ್ ನಾಗರಾಜ್
ಪುಟ ೮೫, ಪ್ರ ೨೦೦೨, ಅಕ್ಷರ ಪ್ರಕಾಶನ, ಹೆಗ್ಗೋಡು

೧೧. ಮಲೆನಾಡಿನ ಚಿತ್ರಗಳು: ಲೇ. ಕುವೆಂಪು
ಪುಟ ೨೫, ಪ್ರ ೨೦೦೭, ಉದಯ ರವಿ ಪ್ರಕಾಶನ, ಮೈಸೂರು

೧೨. ಯುಗಧರ್ಮ ಹಾಗೂ ಸಾಹಿತ್ಯ ದರ್ಶನ: ಲೇ. ಕೀರ್ತಿನಾಥ ಕುರ್ತುಕೋಟಿ
ಪುಟ ೬೨, ಪ್ರ ೨೦೦೨, ಮನೋಹರ ಗ್ರಂಥಮಾಲಾ, ಧಾರವಾಡ

೧೩. ಹಾಡೆ ಹಾದಿಯ ತೋರಿತು: ಲೇ. ಎಚ್.ಎಸ್. ರಾಘವೇಂದ್ರರಾವ್
ಪುಟ ೨೨೮, ಪ್ರ ೧೯೯೫, ಕನ್ನಡ ಸಂಘ ಕ್ರೈಸ್ಟ್ ಕಾಲೇಜ್

೧೪. ರಸ ಸಿದ್ಧಿ: ಲೇ ಬೈರಮಂಗಲ ರಾಮೇಗೌಡ
ಪುಟ ೨೯, ಪ್ರ ೨೦೦೩, ಸಮಾನ ಮನಸ್ಕರ ಒಕ್ಕೂಟ

ಅಧ್ಯಾಯ: ಮೂರು

ಕುವೆಂಪುರವರು ಪ್ರಕೃತಿಯನ್ನು ಕುರಿತು ಪರಿಭಾವಿಸುವ ವೈಶಿಷ್ಟ್ಯ

ಹಿಂದಿನ ಅಧ್ಯಾಯದಲ್ಲಿ ಕುವೆಂಪುರವರ ರಚನೆಯಲ್ಲಿ ಅಡಗಿರುವ ಪ್ರಕೃತಿಯ ವಸ್ತು ಮತ್ತು ಸೌಂದರ್ಯದ ಅಂಶವನ್ನು ಗುರುತಿಸಲಾಗಿದೆ. ಅದರ ಜೊತೆಯಲ್ಲೇ ಕೆಲವು ಅಂಶವಾಗಿ ಪ್ರಕೃತಿಯನ್ನು ಕುರಿತು ಕುವೆಂಪುರವರು ಪರಿಭಾವಿಸುವ ಅಂಶಗಳು ಕಂಡುಬಂದಿದ್ದರೂ ಈ ಅಧ್ಯಾಯದಲ್ಲಿ ಅವುಗಳ ಕುರಿತು ಚರ್ಚೆ ಮಾಡಬಹುದಾಗಿದೆ.

ಕುವೆಂಪುರವರ ಕವನಗಳ ಅಧ್ಯಯನದಲ್ಲಿ ಮತ್ತೊಂದು ಪ್ರಶ್ನೆ ಎದುರಾಗುತ್ತದೆ. ಅದು ಕವನಗಳು ಆಧ್ಯಾತ್ಮದಿಂದ ಕೂಡಿರುವುದೇ ಅಥವಾ ಅಪೂರ್ವಶಾಂತಿಯನ್ನು ಆಹ್ವಾನಿಸುತ್ತಾ ಅಂತರ್ಮುಖಿಯಾಗುವ ಪ್ರಜ್ಞೆಯ ಸ್ಥಿತಿಯೇ ಎಂಬ ಪ್ರಶ್ನೆ ಎದುರಾಗುತ್ತದೆ. ಆಧ್ಯಾತ್ಮದಿಂದ ಕೂಡಿದೆ ಎಂದು ಹೇಳಿದರೆ ಧಾರ್ಮಿಕತೆಯ ಅಂಶ ಅಂಟಿಕೊಳ್ಳುತ್ತದೆ ಅಥವಾ ಆಧ್ಯಾತ್ಮವೇ ಅಲ್ಲ ಎಂದರೆ ಬಹುಮಟ್ಟಿಗೆ ಅದು ಋಣಾತ್ಮಕ ಭಾವನೆಯೇ ಆಗಿ ಉಳಿಯುತ್ತದೆ. ಆದರೆ ಕೆಲವು ಕವನಗಳನ್ನು ಗಮನಿಸಿದರೆ ಅದರಲ್ಲಿ ಧಾರ್ಮಿಕತೆಗೆ ಸಂಬಂಧಿಸಿದ ಧನಾತ್ಮಕ ಆಲೋಚನೆಗಳು ಇದ್ದಂತೆ ಕಂಡರೂ ಅದು ಕುವೆಂಪುರವರ ಕವನಗಳಲ್ಲಿ ಅದು ತಾಕೂ ತಾಕದೆ ಚಲಿಸಿರುವುದನ್ನು ಕಾಣಬಹುದು. ಆದ್ದರಿಂದ ಆಧ್ಯಾತ್ಮ ಎಂಬುದನ್ನು ನಿಸರ್ಗದ ಅನುಭೂತಿಯ ಹಿನ್ನೆಲೆಯಲ್ಲಿ ಮೂಡಿಬಂದಿದೆಯೇ ಹೊರತು ಆಧ್ಯಾತ್ಮವೇ ಕಾವ್ಯದ ಗುಣವಲ್ಲ.

ಪ್ರಾರಂಭದ ಹಂತದಲ್ಲಿ ಕುವೆಂಪು ಕವನಗಳನ್ನು ಮನಃಶಾಸ್ತ್ರಿಯ ಪರಿಭಾಷೆಯಲ್ಲಿ ವಿವರಿಸಬೇಕೋ, ಅಥವಾ ಅಧಿಕೃತವಾದ ಆಧ್ಯಾತ್ಮದ ನೆಲೆಯಲ್ಲಿ ವಿವರಿಸಬೇಕೋ ಎನ್ನುವ ಪ್ರಶ್ನೆಯನ್ನು ಮೂಡಿಸುತ್ತದೆ. ಆದರೆ ಕುವೆಂಪುರವರ ಕವನಗಳು ಆಧ್ಯಾತ್ಮದ ರೀತಿಯಲ್ಲಿ ಕಂಡರೂ ಸಹ ಅದನ್ನು ಪ್ರಕೃತಿಯಲ್ಲಿ ಲೀನವಾಗಿಸುವ ತನ್ಮಯತೆಯನ್ನು ಕವಿತೆಗಳಲ್ಲಿ ಮನಗಾಣಬಹುದು. ಆದ್ದರಿಂದ ಕವನಗಳು ಆಧ್ಯಾತ್ಮದ ತಾರ್ಕಿಕ ಚರ್ಚೆಗೆ ಒಳಪಡದೆ ಆನಂದದ ದರ್ಶನದ ನೆಲೆಯಲ್ಲಿ ರೂಪಿತವಾಗುತ್ತದೆ. ಅದನ್ನು ಕ್ರಮೇಣ ತಿಳಿಯಲು

ಪ್ರಾರಂಭಿಸಿದರೆ: 'ಕೊಳಲು' ಸಂಕಲನದ 'ಗುರಿ' ಕವನ ಕುವೆಂಪುರವರ ಮನದ ಮಾತನ್ನು ಹೇಳುತ್ತದೆ.

ಗುರಿಯಾವುದೆಂದೆಲ್ಲ ಕೇಳುವರು ಎನ್ನ!
ಅರಿಯರೇ ಗುರಿಯು ಸರ್ವಕೆ ನೀನೆ ಎಂದು?
ಗುರಿಯು ನೀನೆಂದೆನಲು ನಾಚುವೆನು ಜನನಿ:
ಗುರಿಯು ನೀನೆನಲೆನ್ನ ಮರುಳನೆಂಬುವರು!
ತಿರೆಯ ಸಿರಿಸುತರೆದುರು ತಲೆವಾಗಿ ನಿಂತು
ಮನದಿ ನಿನ್ನನು ನೆನೆವೆ ನಮ್ರಭಾವದೊಳು!

(ಗುರಿ. ಕೊಳಲು)

ಈ ಕವನದ ಹಿಂದೆ ಕುವೆಂಪು ಮಲೆನಾಡಿನ ಕಾಡಿನ ಕವಿ ಎಂದು ಕರೆದುಕೊಳ್ಳುತ್ತಲೇ ಅದನ್ನೇ ಒಂದು ಸಂಕಲ್ಪ ಶಕ್ತಿಯಾಗಿ ಮಾಡಿಕೊಂಡಿದ್ದಾರೆ. ಅಂದರೆ ಪ್ರಕೃತಿಯನ್ನೇ ತನ್ನ ಸೃಜನಶೀಲತೆಯ ಶಕ್ತಿಯನ್ನಾಗಿ ಪರಿಭಾವಿಸುತ್ತಲೇ ಜಡಗೊಂಡ ಮನಸ್ಸುಗಳಲ್ಲಿ ಚೈತನ್ಯವನ್ನು ಪ್ರಕೃತಿಯಿಂದಲೇ ತುಂಬಲು ಪ್ರಯತ್ನಿಸಿದ್ದಾರೆ. ಅದೇ ಸ್ಥಿತಿಯನ್ನು ಕವಿತೆಗಳಲ್ಲಿ ಮೂಡಿಸಿದರು.

ನಿನ್ನ ಪುಣ್ಯಸಂಗ ಲಭಿಸೆ
ಧನ್ಯನಾದೆನು!
ನಿನ್ನ ಕೂಡೆ ಜನರಿಗೆಲ್ಲ
ಗಣ್ಯನಾದೆನು!
ಅಲ್ಲಗಳೆಯುತಿದ್ದ ಜನಕೆ
ಮಾನ್ಯನಾದೆನು;
ನಿನ್ನ ಜೊತೆಯೊಳೆನ್ನ ಕಂಡು
ದೂರದರಿಯದಿರುವ ಮಂದಿ
ಗೆಳೆಯರಾದರು.

(ಕವಿತೆಗೆ. ಕೊಳಲು)

ಈ ಕವನದಲ್ಲಿ ಸೃಜನಶೀಲತೆಯನ್ನು ಜೀವಂತವಾಗಿರಿಸಿಕೊಂಡಿರುವ ಕವಿ ಪ್ರಕೃತಿಯನ್ನು ಆತ್ಮವಿಶ್ವಾಸದಿಂದಲೇ ಮಾನ್ಯಮಾಡುತ್ತಾ ಪ್ರಕೃತಿಯಲ್ಲಿ ಒಂದಾಗುವ ಮತ್ತು ಸುತ್ತಲಿನ ಸಮುದಾಯದಲ್ಲಿ ಗಣ್ಯನಾಗುವ ರೀತಿಯನ್ನು ಗಮನಿಸಬಹುದು. ಕುವೆಂಪುರವರು ಪ್ರಕೃತಿಯಲ್ಲಿ ಬೆರೆತ ಸ್ಥಿತಿಯನ್ನು ಅವರೇ ತಮ್ಮ ಕವನದಲ್ಲಿ "ಭಾವಾವೇಶದಿ ನೋಡುತ ನಿಂತೆ ಹೃದಯದೊಳುರಿಯಿತು ರಸಮಯ ಚಿಂತೆ" ಎಂಬ ಭಾವಪೂರ್ಣವಾದ ಸಾಲುಗಳಲ್ಲಿ ಹೇಳಿದ್ದಾರೆ. ಈ ಮೇಲಿನ ಎರಡು ಕವನದ ಭಾಗಗಳನ್ನು ಗಮನಿಸಿದರೆ ಕುವೆಂಪು ಪ್ರಕೃತಿಯ ಬಗೆಗೆ ತಾಳಿರುವ ಮುಗ್ಧತೆ ಮತ್ತು ಕುತೂಹಲ ಗೋಚರವಾಗುತ್ತದೆ. ಮುಂದೆ ಇದೇ ಮುಗ್ಧತೆ, ಕುತೂಹಲ ಮತ್ತು ತನ್ಮಯತೆ ಅಂತರ್ಮುಖಿಯಾದ ಅನುಭವವಾಗುತ್ತದೆ.

ರವಿವದನವೆ ಶಿವಸದನವೊ:
ಬರಿ ಕಣ್ಣದು ಮಣ್ಣೊ!
ಶಿವನಿಲ್ಲದೆ ಸೌಂದರ್ಯವೆ?
ಶಿವ ಮುಖದಾ ಕಣ್ಣೊ!
ಶಿವ ಕಾಣದೆ ಕವಿ ಕುರುಡನೊ;
ಶಿವ ಕಾವ್ಯದ ಕಣ್ಣೊ!

(ಆನಂದಮಯ ಈ ಜಗಹೃದಯ)

ಇಲ್ಲಿ ಪ್ರಕೃತಿ, ಶಿವ, ಸೌಂದರ್ಯದ ಸಮೀಕರಣವನ್ನು ಕಾಣಬಹುದು. ಪ್ರಕೃತಿ ಮೂಲಕ ಶಿವನನ್ನು ಕಾಣುವ ಕುವೆಂಪು ತಮ್ಮ ಕವನದಲ್ಲಿ ಶಿವನ ಸಾಕ್ಷಾತ್ಕಾರಕ್ಕೆ ಸೌಂದರ್ಯವನ್ನು ಮಾಧ್ಯಮವನ್ನಾಗಿ ಮಾಡಿಕೊಂಡಿದ್ದಾರೆ. ಇದರಿಂದ ಕುವೆಂಪುರವರಲ್ಲಿದ್ದ ಪ್ರಕೃತಿ ಪ್ರೇಮ ಎಂತಹ ಉತ್ಕಟತೆಯನ್ನು ಹೊಂದಿತ್ತು ಎಂದು ತಿಳಿಯುತ್ತದೆ. ಆದರೂ ಕುವೆಂಪು ಎಲ್ಲಿಯೂ ಸಹ ದೇವರನ್ನು ಸಾಕ್ಷಾತ್ಕರಿಸಲಿಲ್ಲ ಹಾಗೂ ಆಸ್ತಿಕ ಅಂಶವನ್ನು ವ್ಯಕ್ತಪಡಿಸಿಲ್ಲ. ಇದೇ ರೀತಿಯಲ್ಲಿ ಡಿ.ಆರ್. ನಾಗರಾಜ್ ತಮ್ಮ ಶಕ್ತಿ ಶಾರದೆಯ ಮೇಳ ಎಂಬ ಕೃತಿಯಲ್ಲಿ "ಕುವೆಂಪು ಅವರ ನಿಸರ್ಗಾನುಭವದಲ್ಲಿ ಒಂದು ವಿಶಿಷ್ಟ ದ್ವಂದ್ವ ಕೂಡ ಪ್ರಕಟವಾಗುತ್ತದೆ. ಅದು ಚೆಲುವಿನ ಆರಾಧನೆಯಲ್ಲಿ ಅಲ್ಲಲ್ಲಿ ಸೂಕ್ಷ್ಮವಾಗಿ ನುಸುಳುವ

ನಾಸ್ತಿಕ ಅಂಶ. ವಾಸ್ತವವಾಗಿ ಕುವೆಂಪು ಅವರು ನಿಸರ್ಗವನ್ನು ವರ್ಣಿಸುವ ಪರಿಭಾಷೆಯಲ್ಲಿ ಎರಡು ರೀತಿಯ ಬಳಕೆಯನ್ನು ಕಾಣುತ್ತೇವೆ. ಒಂದು ಕಡೆಗೆ 'ದೈವ' ನಿಸರ್ಗದಲ್ಲಿ ಅಭಿವ್ಯಕ್ತವಾಗಿದೆ ಎಂಬ ನಿಲುವಿನದು. ಇಲ್ಲೆಲ್ಲಾ 'ಶಿವನ' ಅಭಿವ್ಯಕ್ತಿಯಾಗಿ ನಿಸರ್ಗ ಬಂದಿದೆ. ಅಂದರೆ ನಿಸರ್ಗ ಮತ್ತು ಶಿವ ಎರಡಕ್ಕೂ ಬೇರೆ ಬೇರೆ ಅಸ್ತಿತ್ವಗಳಿವೆ. ಇನ್ನೊಂದು ರೀತಿಯ ಅಭಿವ್ಯಕ್ತಿಯಲ್ಲಿ ಶಿವಕ್ಕೆ ಅಥವಾ ದೈವಕ್ಕೆ ಬೇರೆ ರೀತಿಯ ಅಸ್ತಿತ್ವವೇ ಇಲ್ಲ. ಇಲ್ಲೆಲ್ಲಾ ಚೆಲುವೇ ದೇವರಾಗುತ್ತದೆ. ಸೂಕ್ಷ್ಮವಾಗಿ ಆಸ್ತಿಕ ನಂಬಿಕೆಗಳನ್ನು ದಾಟಿ ನಾಸ್ತಿಕ ಅಂಶಗಳು ನುಸುಳಿ ಬರುತ್ತದೆ".[೧] ಇದೇ ಸಾಲಿಗೆ ಬರುವ ಮತ್ತೊಂದು ಪದ್ಯವನ್ನು ಗಮನಿಸುವುದಾದರೆ

> ಶಿವಮಂದಿರಸಮ ವನಸುಂದರ ಸುಮಶೃಂಗಾರದ ಗಿರಿಶೃಂಗಕೆ ಬಾ:
> ಬಾ ಫಾಲ್ಗುಣ ರವಿ ದರ್ಶನಕೆ!
>
> ವರ್ಣನದಿಂದ್ರಿಯ ನಂದನವನು ದಾಂಟುತೆ ದರ್ಶನ ಮುಕ್ತಿಯ ಸೇರಿ
> ವ್ಯಕ್ತಿಕೆ ಮೈಮರೆವುದು ಸೌಂದರ್ಯ ಸಮಾಧಿಯೊಳಾನಂದವ ಹೀರಿ
> ಸರ್ವೇಂದ್ರಿಯ ಸುಖನಿಧಿ ಅಲ್ಲಿ; ಸರ್ವಾತ್ಮನ ಸನ್ನಿಧಿ ಅಲ್ಲಿ;
> ಸಕಲಾರಾಧನ ಸಾಧನಬೋಧನದನುಭವರಸ ತಾನಹುದಲ್ಲಿ!
> (ಬಾ ಫಾಲ್ಗುಣ ರವಿ ದರ್ಶನಕೆ!)


ಇಲ್ಲಿಯೂ ಸಹ ಕುವೆಂಪುರವರು ಸೂರ್ಯೋದಯದ ವರ್ಣನೆಯನ್ನು ಮಾಡುತ್ತಾ, ಕವಿತೆಯ ಕಲ್ಪನೆಯ ಔನ್ನತ್ಯ ಮತ್ತು ದರ್ಶನದ ಮಹತ್ತಿನಿಂದ ಕವಿ ಪಾಲ್ಗುಣ ರವಿಯನ್ನು ನೋಡುತ್ತಿದ್ದಾರೆ. ಇಲ್ಲಿ ಸೂರ್ಯೋದಯ ಕೇವಲ ನಿತ್ಯ ಮಾಮೂಲಿನ ವ್ಯಾಪಾರವಾಗದೆ ಹೃದಯಕ್ಕೆ ಪ್ರಾಣಾಗ್ನಿಯನ್ನು ಹರಿಯಿಸುವ ದಿವ್ಯ ಶಕ್ತಿಯಾಗಿದೆ. ಇಲ್ಲಿಯೂ ಸಹ ಕವಿಮನ ಮಿಡಿದಿರುವುದು ಹೃದಯ ಗೋಚರವಾಗುವ ದರ್ಶನ ದೀಪ್ತಿಯಾದ ಚೈತನ್ಯದ ಲಕ್ಷಣವೇ ಹೊರತು ದೇವರನ್ನು ಕಾಣುವ ಹಂಬಲವಲ್ಲ. ಆದ್ದರಿಂದಲೇ ಅದು ಸರ್ವೇಂದ್ರಿಯಗಳ ಸುಖನಿಧಿಯಾಗಿ, ಸರ್ವಾತ್ಮನ ಸನ್ನಿಧಿಯಾಗಿ ಕಂಡಿದೆ. ಇದೇ ರೀತಿಯಲ್ಲಿ ದೇವಾಲಯ ಮತ್ತು ಪೂಜೆ ಎಂಬುದು ದೇವರನ್ನು ದರ್ಶಿಸಲು ಮೀಸಲಾಗಿದ್ದರೆ ಅದು ಕಲಾ ಉಪಾಸಕನಾದ ಕವಿಗೆ ಬೇಡವಾಗಿದೆ. ಆದ್ದರಿಂದ ಕವಿ "ಯಾವ ಗುಡಿಯಲ್ಲಿ ಕಡಲಿನಂತಹ

ಪಂಚಪಾತ್ರೆ ಇದೆ? ಆಕಾಶದಂತಹ ಗೋಪುರವಿದೆ? ಸೂರ್ಯ ಚಂದ್ರ ತಾರಕೆಗಳಂತಹ ದೀಪಗಳಿವೆ, ಮಾನವರಂಥಾ ಸಜೀವರಾದ, ಪ್ರೇಮಮಯರಾದ, ಸಮಯಕ್ಕೊದಗುವ ವಿಗ್ರಹಗಳಿವೆ? ಜಗತ್ತಿನ ಕಲ್ಯಾಣಕ್ಕಾಗಿ ಪರಮಾತ್ಮನು ತೋರಿರುವ ಕೃಪೆಯಲ್ಲಿ ಆತನ ಕರುಣೆಯನ್ನು ತಿಳಿಯುವಷ್ಟು ಸುಲಭವಾಗಿ ಇನ್ನಾವ ಗುಡಿಯಲ್ಲಿ ಆತನ ಕೃಪೆಯನ್ನು ಅನುಭವಿಸಬಲ್ಲೆವು? ವಿಹಂಗಮ ಗಾನಕ್ಕೆ ಸರಿಸಾಟಿಯಾದ ಸ್ವರಮೇಳವು ಯಾವ ದೇವರ ನಿಲಯದಲ್ಲಿದೆ? ವನಮಾಲೆಗಿಂತಲೂ ದಿವ್ಯವಾದ ಹೂಮಾಲೆ ಯಾವುದಿರುವುದು? ಹೃದಯದಲ್ಲಿ ಬರೆದ ಧರ್ಮಶಾಸ್ತ್ರಕ್ಕಿಂತಲೂ ಉತ್ಕೃಷ್ಟವಾದ ಧರ್ಮಶಾಸ್ತ್ರವಿದೆಯೇ? ದಂಪತಿಗಳ ಅನ್ಯೋನ್ಯವಾದ ಆತ್ಮಯಜ್ಞಕ್ಕಿಂತಲೂ ಹೆಚ್ಚಿನ ಯಜ್ಞವುಂಟೇ? ಪರಮಾತ್ಮನ ಸ್ವಂತ ಯಜ್ಞಭೂಮಿಯಾದ ಮಾನವನ ಹೃದಯಕ್ಕಿಂತಲೂ ಶ್ರೇಷ್ಟವಾದ ಕ್ರತುಪೀಠವಿದೆಯೇ? ಹೊಳೆ ತೊರೆ ಕೆರೆಗಳ ನಿರ್ಮಲವಾದ ಅಗ್ರೋದಕಕ್ಕಿಂತಲೂ ದಿವ್ಯವಾದ ತೀರ್ಥ ಬೇರೊಂದಿದೆಯೇ?[9] ಎಂದು ಪ್ರಶ್ನಿಸುತ್ತಲೇ ಕವನಗಳಲ್ಲಿ ಪ್ರಕೃತಿ ಸೌಂದರ್ಯ ಪೂಜಿತವಾಗಿದೆ ಹಾಗೂ ಯಾವ ಗುಡಿ ಮಿಗಿಲು ಈ ಭುವನ ದೇವಾಲಯಕೆ? ಎಂಬ ಭಾವವನ್ನು ವ್ಯಕ್ತಪಡಿಸುತ್ತಾರೆ. ಅದು

ಯಾವ ಗುಡಿ
ಮಿಗಿಲು ಈ ಭುವನ ದೇವಾಲಯಕೆ? ಮೇಣಾವ
ವಿಗ್ರಹಂ ಮಿರಿರುವುದೀ ಚೈತ್ರ ಪಂಚಮಿಯ
ಪುಣ್ಯ ಪ್ರಭಾತದಲಿ, ದೂರದ ದಿಗಂತದಿಂ
ಪ್ರತ್ಯಕ್ಷವಾಗಿರುವ ಭವ್ಯಸುಂದರ ದಿವ್ಯ
ಸೂರ್ಯದೇವನಿಗೆ? ಮೇಣಾವುದಾರಾಧನೆಯು
ಉಪಮಾನವೀ ನಿರುಪಮ ಕಲಾ ಉಪಾಸನೆಗೆ?
ಈ ಅನುಭವದೊಳಿಲ್ಲದಾನಂದಮೂರ್ತಿಯಾ
ಪರಮಾತ್ಮನಿನ್ನಾವ ಪೂಜೆ ಜಪತಪಗಳಲಿ
ದೊರೆಕೊಳ್ಳುವಂ?

(ಪ್ರಕೃತಿ ಉಪಾಸನೆ)

ಮುಂದೆ ಇದೇ ಭಾವದರ್ಶನದ ಅಭಿವ್ಯಕ್ತಿಯಾಗಿ ಮುಂದುವರೆಯುತ್ತದೆ. ಅದು



ಈ ಮೇಲ್ಕಂಡ ಅಂಶಗಳಾದ ಪರಿಸರ, ಪ್ರಜ್ಞೆ, ಸೌಂದರ್ಯ, ದರ್ಶನಗಳು ಕವಿ ಕುವೆಂಪುರವರು ಪರಿಸರದಿಂದ ಪಡೆದ ಅನುಭವ ಕವಿತೆಯ ರೂಪದಲ್ಲಿ ಹೊರಬರುವುದಕ್ಕೆ ಮುಂಚಿತವಾಗಿ ಅದು ಎಚ್ಚರ ಸ್ಥಿತಿಯಲ್ಲೇ ಇದ್ದು ಅದು ಅಭಾವಪೂರ್ಣತೆಯೊಂದಿಗೆ ಪ್ರಕೃತಿಯ ಸೌಂದರ್ಯದಲ್ಲಿ ಅಂತರ್ಮುಖಿಯಾಗುತ್ತದೆ. ಈ ಅಂತರ್ಮುಖಿಯಾದ ಅಭಿವ್ಯಕ್ತಿಯೇ ಮುಂದೆ 'ದರ್ಶನ' ದ ರೂಪಪಡೆಯುತ್ತದೆ. ಈ ದರ್ಶನ ಎಂಬುದಕ್ಕೆ ಕುವೆಂಪುರವರು ನೀಡುವ ಅರ್ಥವನ್ನು ಗಮನಿಸುವುದಾದರೆ "ಪ್ರಕೃತಿ ವಿಷಯವಾದ ಕವಿಯ ದೃಷ್ಟಿ ಪೂರ್ಣದೃಷ್ಟಿಯಾಗಿ ಅದು ದರ್ಶನ ಎಂಬ ಹೆಸರಿಗೆ ಅರ್ಹವಾಗಬೇಕಾದರೆ ಕಾಲವೂ ಬೇಕು. ಸಾಧನೆಯೂ ಬೇಕು. ಅರಿತು ಮಾಡಲಿ ಅರಿಯದೆ ಮಾಡಲಿ ಆ ಸಾಧನೆ ತಪಸ್ಯೆಯ ರೂಪವನ್ನು ತಾಳಿಯೆ ತಾಳುತ್ತದೆ. ಅಂತಹ ಸಹಜ ಯೋಗಸಾಧನೆಯಿಂದ ಕವಿ ದ್ರಷ್ಟಾರನಾದ ರಸ ಋಷಿಯಾಗಿ ಪೂರ್ಣದೃಷ್ಟಿಯ ದರ್ಶನಕ್ಕೇರುತ್ತಾನೆ"[3] ಅಂದರೆ ಇಲ್ಲಿ ಪೂರ್ಣದೃಷ್ಟಿ ಪಡೆದ ಕವಿ ಕಾಲತೀತವಾಗಿ ಪಡೆದ ಅರಿವಿನ ಮೂಲಕ ದರ್ಶನ ಪ್ರಾಪ್ತವಾಗುತ್ತದೆ ಎಂದು ತಿಳಿಯಬಹುದು. ಇದಕ್ಕೆ ಹಿಂದೆ ತಿಳಿಸಿದ ಪರಿಸರ, ಪ್ರಜ್ಞೆ, ಸೌಂದರ್ಯ, ದರ್ಶನದ ಚಲನೆಯೇ ಆಗಿದೆ. ಇದನ್ನು ಗಮನಿಸುವುದಾದರೆ 'ಕದರಡಕೆ' ಕವನ ಸಂಕಲನದ 'ಸೌಂದರ್ಯ' ಎಂಬ ಕವನ ಸಿಗುತ್ತದೆ.

ಸೌಂದರ್ಯವೆನ್ನ ಹರಿ! ಸೌಂದರ್ಯವೆನ್ನ ಹರ
ಸೌಂದರ್ಯವೆನ್ನ ಅವ್ಯಕ್ತ ಬ್ರಹ್ಮ
ಸೌಂದರ್ಯವೇ ಪುಣ್ಯ ಸೌಂದರ್ಯವೇ ಸ್ವರ್ಗ
ಸೌಂದರ್ಯವೇ ನನ್ನ ಚರಮ ಮೋಕ್ಷ
ಸೌಂದರ್ಯವಿಲ್ಲದಿಹ ಲೋಕ ರೌರವ ನರಕ
ಸೌಂದರ್ಯವಿರೆ ನರಕವದುವೆ ನಾಕ
ಸೌಂದರ್ಯಕಿಂತಲಧಿಕತರ ದೇವರುಮಿಲ್ಲ
ಸೌಂದರ್ಯವಿಲ್ಲದಿರೆ ದೇವರಿಲ್ಲ
ನನ್ನಾತ್ಮ ಸೌಂದರ್ಯ ನಿನ್ನಾತ್ಮ ಸೌಂದರ್ಯ
ನಾನಿಲ್ಲ ನೀನಿಲ್ಲ ಸೌಂದರ್ಯವಿಹುದೆಲ್ಲ
ಸೌಂದರ್ಯವಾನಂದ ಸೌಂದರ್ಯವೈಶ್ವರ್ಯ
ವಿಶ್ವಕ್ಕೆ ತಾಯೂರು ಬಲ್ಲೆಯೇಂ? ಸೌಂದರ್ಯ

(ಸೌಂದರ್ಯ. ಕದರಡಕೆ)

ಇಲ್ಲಿ ಸೌಂದರ್ಯ ಎನ್ನುವುದು ಕೇವಲ ಬಾಹ್ಯ ಜಗತ್ತಿನ ಪ್ರಕೃತಿಗೆ ಮಾತ್ರ ಅನ್ವಯಿಸದೆ ಅಂತರಂಗದ ವಿಶ್ವಾತ್ಮನ ಆಕೃತಿಯೂ ಸಹ ಆಗಿದೆ. ಆದ್ದರಿಂದಲೇ ಪ್ರಕೃತಿಯ ಸೌಂದರ್ಯದ ಮೂಲಕವಾಗಿಯೇ ದರ್ಶನವನ್ನು ಪಡೆಯುತ್ತಾರೆ. ಹೀಗೆ 'ಸೌಂದರ್ಯವಿಲ್ಲದಿಹ ಲೋಕ ರೌರವ ನರಕ ಹಾಗೂ ಸೌಂದರ್ಯವಿರೆ ನರಕವದುವೆ ನಾಕ, ಸೌಂದರ್ಯಕಿಂತಲಧಿಕತರ ದೇವರುಮಿಲ್ಲ. ಸೌಂದರ್ಯವಿಲ್ಲದಿರೆ ದೇವರಿಲ್ಲ' ಎಂದು ಕವನದಲ್ಲಿ ಹೇಳಿದ್ದಾರೆ. ಇಲ್ಲಿನ ದೇವರು ಎಂಬುದು ದರ್ಶನದ ಅಭಿವ್ಯಕ್ತಿಯೇ ಹೊರತು ಆಸ್ತಿಕ ಅಂಶದ ಕುರುಹಲ್ಲ. ಇವುಗಳಿಂದ ಕುವೆಂಪು ಪ್ರಕೃತಿಯಲ್ಲಿ ಹುಡುಕುವುದು ನಿಸರ್ಗದಲ್ಲಿನ ಹೊಸ ಹೊಸ ಮಾದರಿಗಳನ್ನಲ್ಲ ಅದಕ್ಕೆ ಬದಲಾಗಿ ಪ್ರಕೃತಿಯಿಂದಲೇ ಕಾಣಬಹುದಾದ ಚೈತನ್ಯ ಪೂರ್ಣ ದರ್ಶನದ ಅಭಿವ್ಯಕ್ತಿಯನ್ನು ಮಾತ್ರ.

ನಂತರದಲ್ಲಿ "ನಿಸರ್ಗದ ಬಗೆಗಿದ್ದ ಅವರ ಅನುರುಕ್ತಿ, ಸದಾ ಅವರ ಸ್ಮೃತಿಯ ಒಂದು ಭಾಗವಾಗಿ ನಿರಂತರ ಕಾಡುವ ಹಸಿರಾಗಿ, ದಾಹವಾಗಿ, ತನ್ನ ವ್ಯಕ್ತಿತ್ವದ ಒಂದು ವಿಸ್ತರಣೆಯಂತೆ ಕಣ್ಣೆದುರು ಚಾಚಿಕೊಂಡ ನಿಸರ್ಗದಲ್ಲಿ"[೪] ಪ್ರಕೃತಿಯ ಆರಾಧನೆಯನ್ನು

ಪರಮನ ಆರಾಧನೆ ಎಂದು ಭಾವಿಸುತ್ತಾರೆ. ಇಂತಹ ನಿಸರ್ಗಾನುಭಾವವನ್ನು ಅನುಭಾವವೇ ಅಲ್ಲ ಎಂಬ ಮಾತನ್ನು ಡಿ.ಆರ್. ನಾಗರಾಜ್‌ರವರು ಗುರುತಿಸುತ್ತಾರೆ. "ಖ್ಯಾತ ವಿದ್ವಾಂಸ ಆರ್.ಸಿ. ಜಾಹ್‌ನೇರ್ ಈ ನಿಸರ್ಗಾನುಭವವನ್ನು ಕುರಿತು ಮಾತನಾಡುತ್ತಾ, ಇದು ಅನುಭಾವವೇ ಅಲ್ಲವೆಂದು ಅಭಿಪ್ರಾಯ ಪಡುತ್ತಾರೆ. ಅದಕ್ಕೆ ಆತ ಕೊಡುವ ಕಾರಣ ವಿಶಿಷ್ಟವಾದದ್ದು. ಅನುಭಾವವೆಂದರೆ ಎಲ್ಲಾ ರೀತಿಯ ವಾಸ್ತವದಿಂದ ಪ್ರತ್ಯೇಕವಾಗುವಿಕೆ. ಈ ನಿಸರ್ಗಾನುಭವದಲ್ಲಿ ಈ ಪ್ರಕ್ರಿಯೆ ವಿರುದ್ದ ರೂಪದಲ್ಲಿ ಜರುಗುತ್ತದಾದ್ದರಿಂದ ಇದು ಅನುಭಾವವೇ ಅಲ್ಲ"[೫] ಎಂಬುದನ್ನು ತಿಳಿಸಿದ್ದಾರೆ. ಇಲ್ಲಿ ವಾಸ್ತವದಿಂದ ಪ್ರತ್ಯೇಕವಾಗುವಿಕೆ ಎಂಬುದನ್ನು ಗಮನಿಸಿದರೆ ಕವಿಗೆ ಅನುಭವ ಹಾಗೂ ಅನುಭಾವದ ನೆಲೆಯಿಲ್ಲದೆ ಕಾವ್ಯ ರಚನೆ ಸಾಧ್ಯವಿಲ್ಲ ಎಂಬುದು ಸರ್ವವಿಧಿತ ಆದ್ದರಿಂದ ವಾಸ್ತವತೆಯಿಂದ ಪ್ರತ್ಯೇಕವಾಗುವಿಕೆಯ ಅಂಶ ನಿಸರ್ಗಾನುಭವದಲ್ಲಿ ಕಾಣಲು ಸಾಧ್ಯವಿಲ್ಲ. ಹೀಗೆ ಕುವೆಂಪುರವರ ಕವನಗಳಲ್ಲಿ ಕಾಣುವ ಅಂಶ ಮನುಷ್ಯರೂಪಿತವಲ್ಲದ ನಿಸರ್ಗ ಸೌಂದರ್ಯದ ಜೊತೆಗೆ ಚೈತನ್ಯ ರೂಪಿ ದರ್ಶನವೂ ಆಗಿದೆ. ಆದ್ದರಿಂದಲೇ ಕವಿಗೆ 'ಆನಂದಮಯ ಈ ಜಗಹೃದಯ ಏತಕೆ ಭಯ? ಮಾಣೊ ಸೂರ್ಯೋದಯ ಚಂದ್ರೋದಯ ದೇವರ ದಯ ಕಾಣೊ' ಎಂಬ ಸಂದೇಶವನ್ನು ನೀಡಿದ್ದಾರೆ.

ಮುಂದೆ ಕುವೆಂಪುರವರ ಕವನಗಳಲ್ಲಿ ನಿಸರ್ಗ, ಪ್ರಜ್ಞೆ, ಅತೀತ ಈ ಮೂರರ ನಡುವಿನ ವ್ಯತ್ಯಾಸ ಕರಗಿ ಬಿಡುತ್ತದೆ. ಇಂತಹ ಕವನಗಳು ಅಂತರ್ಮುಖಿಯಾಗುತ್ತದೆ. ಈ ಅಂತರ್ಮುಖಿ ಭಾವವೇ ಮುಂದೆ ಅಪೂರ್ವಶಾಂತಿಯ ಕಡೆಗೆ ಕರೆದೊಯ್ಯುವುದು ಕುವೆಂಪು ಕವನಗಳಲ್ಲಿ ಕಾಣುವ ಒಂದು ಅಂಶ. ಈ ನಡುವೆ ಶಾಂತಿ ಎಂಬುದು ನಿಸರ್ಗದ ಅವಿಭಾಜ್ಯ ಅಂಗವಾಗಿರುವುದರಿಂದಲೇ ನಿಸರ್ಗವನ್ನು ಒಂದು ಪ್ರಮಾಣದ ನೆಲೆಯಾಗಿ ಸ್ವೀಕರಿಸಿದ ವ್ಯಕ್ತಿಯಾಗಿ ಕುವೆಂಪು ಕಾಣುತ್ತಾರೆ. ಇದು ಒಂದು ಅಪರೂಪದ ಹಿರಿಮೆಯೇ ಸರಿ. ಇದಕ್ಕೆ ಅವರ ಕವನವಾದ 'ಪ್ರಾರ್ಥನೆ' ಸಮರ್ಥನೆ ನೀಡುತ್ತದೆ.

ನಿನ್ನ ಬಾಂದಳದಂತೆ
ನನ್ನ ಮನವಿರಲಿ;
ನಿನ್ನ ಸಾಗರದಂತೆ
ನನ್ನ ಎದೆಯಿರಲಿ.

ನಿನ್ನಾತ್ಮದಾನಂದ
ನನ್ನದಾಗಿರಲಿ;
ನಿನ್ನೊಳಿರುವಾ ಶಾಂತಿ
ನನ್ನೆದೆಗೆ ಬರಲಿ.

(ಪ್ರಾರ್ಥನೆ. ಕೊಳಲು)

ಈ ರೀತಿಯಲ್ಲಿ ಕುವೆಂಪುರವರು ಶಾಂತಿ ಎನ್ನದೆಗೆ ಬರಲಿ ಎಂದು ಹೇಳುತ್ತಾ ಅಪೂರ್ವ ಶಾಂತಿಯ ಕಡೆಗೆ ಚಲಿಸುವುದನ್ನು ಕಾಣಬಹುದು. ಇದೇ ರೀತಿಯಲ್ಲಿ ಪ್ರಕೃತಿಯಲ್ಲಿ ಅಂತರ್ಮುಖಿಯಾದ ಕುವೆಂಪುರವರನ್ನು ಕಾಣಬಹುದಾದರೆ

ಹೊಸ ಹೂವಿನ ಕಂಪು ಹಸುರು,
ಎಲರಿನ ತಂಪೂ ಹಸುರು!
ಹಕ್ಕಿಯ ಕೊರಲಿಂಪು ಹಸುರು;
ಹಸುರು ಹಸುರಿಳೆಯುಸಿರೂ!

(ಹಸುರು)

ಈ ಕವನದಲ್ಲಿ ಕುವೆಂಪುರವರಿಗೆ ಎಲ್ಲಾ ವಸ್ತುಗಳು ಹಸುರು ಮಯವಾಗಿ ಕಾಣಿಸುತ್ತಿರುವುದು ಕವಿಯಾತ್ಮದ ತಲ್ಲೀನತೆಯೇ ಸರಿ. ತಮ್ಮ ಕವನಗಳ ಮೂಲಕ ಬದುಕಿನ ಸರ್ವಸ್ವದಲ್ಲಿಯೂ ಪ್ರಕೃತಿಯ ಚೆಲುವನ್ನೇ ಕಾಣುವ ಕುವೆಂಪು 'ಹಸುರ್ಗಟ್ಟಿತೋ ಕವಿಯಾತ್ಮಂ, ಹಸುರ್‌ನೆತ್ತರ್, ಒಡಲಿನಲಿ' ಎಂದು ನಿಸರ್ಗ ಸೌಂದರ್ಯವನ್ನು ತನ್ನದಾಗಿಸಿಕೊಂಡಿದ್ದಾರೆ. ಕುವೆಂಪು ತಮ್ಮ ಇತರ ಕವನಗಳಲ್ಲಿ ನಿಸರ್ಗವನ್ನು ತನ್ಮಯತೆ ಮತ್ತು ಮೌನವಾಗಿ ಪ್ರವೇಶಿಸುತ್ತಾರೆ. ಅಂತಹ ಸಂದರ್ಭದಲ್ಲಿ ದರ್ಶನ ಎನ್ನುವ ಹಂತ ಹೂವಾಗಿ ಕಾಣುತ್ತದೆ. ಆದರೆ ಮಾನವ ಸಹಜ ರೂಪವಾದ ವ್ಯಾಘ್ರ ರೂಪದಿಂದ ಪ್ರವೇಶಿಸಿದರೆ ಮೃದು ಹೃದಯಕ್ಕೂ ಜಡವೇ ಕಾಣುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ಪ್ರಕೃತಿಯನ್ನು ಒಳಗೊಂಡಂತೆ "ಕುವೆಂಪುರವರ ಪಾಲಿಗೆ ಕೇವಲ ಸಾಹಿತ್ಯ ಸೃಷ್ಟಿಯು ವಿಲಾಸವಲ್ಲ ಭರವಸೆಯ ಉಸಿರು, ಹೊಸ ವ್ಯಕ್ತಿತ್ವ ನೀಡುವ ಒಂದು ಅಸ್ತ್ರ"[15] ಅದನ್ನು ಈ ಒಂದು ಪದ್ಯದ ಮೂಲಕ ಕಂಡುಕೊಳ್ಳಬಹುದು.

ಕಗ್ಗಲ್ಲಿನೆಡೆಯಲ್ಲಿ ನುಗ್ಗಿ ನೋಡಿದೊಡಲ್ಲಿ
ಹೂವಾಗಿ ತೋರುತಿರುವೆ!
ಹೂವುಗಳ ಹೃದಯದಲಿ ಹುಡುಕಿ ನೋಡಿದೊಡಲ್ಲಿ
ಕಲ್ಲಾಗಿ ತೋರುತಿರುವೆ!

(ಅಚಿಂತ್ಯ. ಕೊಳಲು)

ಮನೆಯ ಮೆಯ್ಗೆ ಕಿಟಕಿ ಕಣ್ಣು;
ಕವಿ ಕೊಟಡಿಯ ಜೀವನು.
ಮನೆಯ ಗುಡಿಗೆ ಕಿಟಕಿ ಪಡಿಮೆ;
ಕಲೆಯ ಕಣ್ಣಿಗೇನು ಕಡಿಮೆ?
ಪ್ರತ್ಯಕ್ಷನು ದೇವನು!

(ಕಿಟಕಿ–ಕಣ್ಣು)

ಈ ಮೇಲಿನ ಕವಿತೆಯನ್ನು ಗಮನಿಸಿದರೆ ಕುವೆಂಪು ಅವರ ಕವನದಲ್ಲಿ ದೇವರನ್ನು ಹುಡುಕುವಂತಹ ಆಧ್ಯಾತ್ಮಿಕತೆ ವಿಚಾರ ಅಡಗಿದೆಯೇ ಎಂಬ ವಿಚಾರ ಮೂಡುತ್ತದೆ. ಆದರೆ ಆಧ್ಯಾತ್ಮದ ವಿಚಾರ ಎಂಬುದು ಕುವೆಂಪುರವರ ಕವನದಲ್ಲಿ ಮಿಂಚಿ ಮಾಯವಾಗುವ ಸ್ವರೂಪದ್ದು. ಇದಕ್ಕೆ ಕಾರಣ ಅವರು ನಿಸರ್ಗವನ್ನು ಪ್ರವೇಶಿಸುವ ಮುಗ್ಧತೆ ಮತ್ತು ತನ್ಮಯತೆ ಕಾರಣವಿರಬಹುದು. ಇದನ್ನು ಅಧ್ಯಯನಕ್ಕೆ ಒಳಪಡಿಸಿದರೆ ಅವರ 'ಕೊಳಲು' ಸಂಕಲನ ಹಾದಿತೋರುತ್ತದೆ.

ಹೋಗುವೆ ಕತ್ತಲೆ ಆಗದ ಊರಿಗೆ
ಹೋಗುವೆ ಹೊತ್ತೇ ಹೋಗದ ಊರಿಗೆ
ಹೋಗುವೆ ಹಗಲೇ ಇಲ್ಲದ ಊರಿಗೆ
ಹೋಗುವೆ ಇರುಳೇ ಬಾರದ ಊರಿಗೆ
ಹೋಗುವೆ ಮನಸೇ ಗ್ರಹಿಸದ ಊರಿಗೆ

ಹೋಗುವೆನಿಂದ್ರಿಯ ಕಾಣದ ಊರಿಗೆ
ಹೋಗುವೆ ಪರಬೊಮ್ಮನ ಊರಿಗೆ ನಾ!

(ಹಾದಿಗಾರನೆ. ಕೊಳಲು)

ಈ ಕವನದ ಹಿನ್ನೆಲೆಯಲ್ಲಿ ಆಧ್ಯಾತ್ಮ ಎಂಬ ಸಮಯಕ್ಕೆ ನೆನೆಪಾಗುವ ಕವಿ ಎಂದರೆ 'ಮಧುರಚೆನ್ನ'ರು. ಮಧುರಚೆನ್ನರ ಕಾವ್ಯದಲ್ಲಿ ಕಂಡು ಬರುವುದು ಆಧ್ಯಾತ್ಮದ ಅನುಭಾವವೇ ಆಗಿದೆ. ಅಂದರೆ ಮಧುರಚೆನ್ನರ ಕವನಗಳಲ್ಲಿ ದೈವಿಕತೆಯ ದರ್ಶನದ ನಿಲುವು ಕಂಡುಬರುತ್ತದೆ. ಕವಿ ಕುವೆಂಪುರವರಲ್ಲಿ ಇದು ಮೂಡುವುದು ನಿಸರ್ಗದ ಅನುಭೂತಿಯಲ್ಲಿ ಎಂಬುದು ಮನಗಾಣಬಹುದು. ಕವಿ ಕುವೆಂಪು ಪ್ರಕೃತಿಯಲ್ಲಿ ಒಂದಾಗುತ್ತಾ ದರ್ಶನವನ್ನು ಕಾಣುವ ರೀತಿಯಲ್ಲಿ ಹೆಚ್ಚಿನ ತರ್ಕಕ್ಕೆ ಒಳಪಡದೆ, ಸಂಶಯದ ಎಳೆಗಳಾಗಿಲ್ಲದೆ ಸಾಗುತ್ತದೆ. ಆದ್ದರಿಂದ ಕುವೆಂಪುರವರಿಗೆ ಪ್ರಕೃತಿ ಎನ್ನುವುದು ಕಾವ್ಯ ಚೈತನ್ಯ, ದರ್ಶನ ದೀಪ್ತಿಯ ಅನುಭವದ ನೆಲೆಯಾಗಿ ಕಾಣುತ್ತದೆ. ಇದನ್ನು ಕೆಲವು ಪದ್ಯಗಳ ಮೂಲಕ ವಿವರಿಸುವುದಾದರೆ

ನಿಶ್ಯಬ್ದ ನಿಶ್ಯಬ್ದ ಶಬ್ದದಾಚೆಯ ಶಬ್ದ
ನಿಶ್ಯಬ್ದವಿದ್ದರೂ ಮೌನವಲ್ಲ।
ನಿಸ್ಸೀಮ ನಿಸ್ಸೀಮ ಸೀಮದಲೆ ನಿಸ್ಸಿಮ
ನಿಸ್ಸೀಮವೆಂದರೂ ಶೂನ್ಯವಲ್ಲ
ಬಂತು ಬಂತಲೆ ಬಂತು ಬಂತು ಘನಸಿರಿ ಬಂತು
ಬಂತೆಂದರೂ ಇದ್ದುದಿದ್ದೆಯಿತ್ತು।
ಬಂತು ಬೆಳಗೆಂಬಂತೆ ಬಂತು ಹೊಳೆ ಬಂದಂತೆ
ಇದ್ದದ್ದೆ ತುಂಬಿ ತುಳು ತುಳುಕುತ್ತಿತ್ತು.

(ನನ್ನನಲ್ಲ)

ಈ ಸಾಲುಗಳನ್ನು ಗಮನಿಸಿದರೆ ಪ್ರಾರಂಭದಲ್ಲಿ ಸಂದೇಹವಾಗಿ ಕಂಡರೂ ಅದು ಒಳ ಹೊರಗೆ, ಸುತ್ತ ಮುತ್ತ ಉಸಿರಾಡಲಾರದ ಆನಂದದ ಕೊನೆಯನ್ನು ಕಾಣಬಹುದು. ಇದು ಸರಳವಾಗಿ ಕಂಡರೂ ಶಕ್ತಿಪೂರ್ವವಾದ ಆಧ್ಯಾತ್ಮದ ಅನುಭಾವವನ್ನೇ ಕಾಣಬಹುದು.

ಅದು ಮಧುರಚೆನ್ನರಲ್ಲಿ "ಅಧ್ಯಾತ್ಮದ ಸಾಧನೆಯೇ ಅವರ ಬದುಕಿನ ಉಸಿರಾಗಿದ್ದುದರಿಂದ ಪ್ರತಿಯೊಂದು ವಸ್ತು ವ್ಯವಹಾರಗಳಲ್ಲೂ ಅವರು ಐಂದ್ರಿಯ ತತ್ವವನ್ನು ಒಳನೋಟದ ಮೂಲಕವೇ ಗ್ರಹಿಸಿದ್ದಾರೆ. ತಮ್ಮ ಗ್ರಹಿಕೆಯ ಆಚೆಗಿರುವ ತತ್ವಾನುಭವವನ್ನು ಭಾವಾನಾತ್ಮಕವಾಗಿ ಭಾಷೆಯ ಮೂಲಕ ಅಭಿವ್ಯಕ್ತಿಸಿದ್ದಾರೆ."[೭] ಹೀಗೆ ಆಧ್ಯಾತ್ಮದ ಪ್ರೇಮದಿಂದಲೇ ಭಾಷೆ ನಿಗೂಢವಾಗುತ್ತಾ "ಮಧುರಚೆನ್ನರ ವ್ಯಕ್ತಿತ್ವ ಹಾಗೂ ಕಾವ್ಯಗಳು ಭಾವದೀಪ್ತವೆಂದು ಮೇಲುನೋಟಕ್ಕೆ ತೋರಿದರೂ ಅಂತರಂಗದಲ್ಲಿ ಅವು ತೀವ್ರವಾದ ಬೌದ್ಧಿಕಶೋಧನೆಯ ಹಂಬಲದಿಂದ ಪ್ರೇರಿತವಾಗಿದೆ"[೮] ಆದರೆ ಇದು ಕುವೆಂಪುರವರಲ್ಲಿ

> ಇರುಳ ಕರುಳನು ಹೊಕ್ಕು ನೋಡಿದೊಡೆ ನೀನಲ್ಲಿ
> ಬಿಳಿದಾಗಿ ತೋರುತಿರುವೆ!
> ಹಗಲಿನೆದೆಯನು ಬಗೆಯುತಿಣಿಕಿದೊಡೆ ನೀನಲ್ಲಿ
> ಕರಿದಾಗಿ ತೋರುತಿರುವೆ!
>
> "ಅದು ಅಲ್ಲ! ಇದು ಅಲ್ಲ!" ಎಂದೆಲ್ಲರೊರೆಯೆ
> "ಅದು ನಾನು! ಇದು ನಾನು" ಎಂದು ನೀ ಮೊರೆವೆ!
> (ಅಚಿಂತ್ಯ. ಕೊಳಲು)

ಇಲ್ಲಿ ಕುವೆಂಪುರವರಲ್ಲಿ ಕಾಣುವುದು ಹೃದಯದ ತನ್ಮಯತೆ ಮತ್ತು ಮೌನ. ಕವಿ ಕುವೆಂಪು ಇಲ್ಲಿ ಪ್ರವೇಶ ಮಾಡುವುದೇ ಮೌನದ ನೆಲೆಯಲ್ಲಿಯೇ ಆದ್ದರಿಂದ ದರ್ಶನವೆಂಬುದು ಅಂತರ್ಮುಖಿಯಾಗುತ್ತಾ ಅಪೂರ್ವ ಶಾಂತಿಯ ಮೂಲಕ ಧನ್ಯತೆಯನ್ನು ಪಡೆಯುತ್ತದೆ ಎಂಬುದು ಕುವೆಂಪುರವರಲ್ಲಿ ಕಾಣಸಿಗುತ್ತದೆ.

ಈ ಹಿಂದಿನ ಅಂಶಗಳನ್ನೆಲ್ಲಾ ಗಮನಿಸಿದರೆ ಕುವೆಂಪುರವರ ಕಾವ್ಯಗಳು ಈ ಕೆಳಗಿನ ಅಂಶಗಳನ್ನು ಹೊಂದಿದೆ ಎಂದು ತಿಳಿಯಬಹುದು.

ಪ್ರಕೃತಿ X ದೇವರು

ಪ್ರಕೃತಿ = ಚೈತನ್ಯ (ದೇವರ ಸೃಷ್ಟಿ)

ಪ್ರಕೃತಿ = ಸೌಂದರ್ಯದ ಸಾಕ್ಷಾತ್ಕಾರ

ಪ್ರಕೃತಿ = ಮಾಯೆ ಎಂಬ ಆಧ್ಯಾತ್ಮಿಕ ನಿಲುವನ್ನು ತಳೆಯುವುದಿಲ್ಲ

ನಂತರದಲ್ಲಿ ಕುವೆಂಪುರವರ ಕವನಗಳ ಹಿನ್ನೆಲೆಯಲ್ಲಿನ ಅನುಭವದ ಆಧಾರದಲ್ಲಿ ಎರಡು ಭಾಗವಾಗಿ ವಿಂಗಡಿಸಬಹುದು. ಅವು

೧. ಇಂದ್ರಿಯನಿಷ್ಠ ಅನುಭವ

೨. ವಿಚಾರಲೇಪಿತ ಅನುಭವ

ಮೊದಲಿಗೆ ಇಂದ್ರಿಯನಿಷ್ಠ ಅನುಭವವನ್ನು ತೆಗೆದುಕೊಂಡರೆ ಪ್ರಕೃತಿಯೊಂದಿಗೆ ಕುವೆಂಪುರವರಿಗೆ ಇದ್ದ ಪ್ರೀತಿ ಹೃದಯ ಸಂವಾದದ ಅನುಭವವಾಗುವುದನ್ನು ಕಾಣಬಹುದು. ಅದಕ್ಕೆ ಉದಾಹರಣೆಯಾಗಿ

ಹನಿಯನು ನಾನನುಭವಿಸುವ ಪ್ರೀತಿ
ಆ ಹನಿ ನನ್ನನು ರಮಿಸುವ ರೀತಿ!
ನನ್ನಡಿ ಸೋಂಕಿಹ ಈ ಹುಲ್ಲು
ಇನಿಯನ ತುಟಿಸೋಂಕನೆ ಸನಿಯುತ್ತಿದೆ!
ಪ್ರೀತಿಯ ಮುತ್ತಿಗೆ ಹಾತೊರೆಯುತ್ತಿದೆ

(ಶರತ್ಕಾಲದ ಸೂರ್ಯೋದಯದಲಿ)

ಈ ಕವನದಲ್ಲಿ ಚೈತನ್ಯಾನುಭವ ಎಂಬುದು ಪ್ರೀತಿಯ ನೆಲೆಯಲ್ಲಿ ನೆಲೆಸಿದೆ. ಕುವೆಂಪು ಪ್ರೀತಿಯನ್ನು ಇಂದ್ರಿಯಾನುಭವದ ಮೇಲೆ ಆನಂದಿಸುತ್ತಲೇ ಹುಲ್ಲು ಮತ್ತು ಹನಿಗಳಿಗೆ ವ್ಯಕ್ತಿನಿಷ್ಟತೆಯ ರೂಪವನ್ನು ನಿರೂಪಿಸಿದ್ದಾರೆ. ಪ್ರೇಮಿಗಳು ಪರಸ್ಪರ ಪ್ರೀತಿಯ ಉನ್ಮತ್ತತೆಯಲ್ಲಿ ಚುಂಬನವನ್ನು ಯಾವ ರೀತಿಯಲ್ಲಿ ಅನುಭಾವಿಸುವರೋ ಅದೇ ಪ್ರೀತಿಯ ಅನುಭವ ಕುವೆಂಪು ಪ್ರಕೃತಿಯಲ್ಲಿ ಕಂಡಿದ್ದಾರೆ. ಆದರೆ ಇಲ್ಲಿ ಕಾಣುವ ಪ್ರೀತಿಯೆಂಬ

ಅನುಭವ ಕೇವಲ ಇಂದ್ರಿಯಾನುಭವಕ್ಕೆ ಸೀಮಿತವಾಗದೆ ಅದಮ್ಯ ಚೈತನ್ಯ ಕುರುಹಾಗಿದೆ. ಮುಂದೆ ಕವಿ ಕುವೆಂಪು ಕವಿಶೈಲದ ಸಂಜೆಯ ಸೂರ್ಯನ ದಿವ್ಯ ವೈಭವವನ್ನು ಹೃದಯಂಗಮವಾಗಿಸಿಕೊಂಡು ಸೂರ್ಯನ ದರ್ಶನದಿಂದ ಪ್ರಚಂಡ ಅನುಭವವನ್ನು ಪಡೆಯುತ್ತಾರೆ. ಹೀಗೆ ಸೌಂದರ್ಯದ ರಸಾನಂದದ ಸ್ಥಿತಿ ಎತ್ತರಕ್ಕೇರಿದಂತೆ ಮೌನಕ್ಕೆ ಶರಣಾಗುವ ಕುವೆಂಪು ತನ್ನ ಶರೀರದ ಸೀಮೆಯನ್ನು ದಾಟುತ್ತಾ ಅನಂತ ತೃಪ್ತಿ, ಅನಂತ ಶಾಂತಿಯನ್ನು ಮೈಗೂಡಿಸಿಕೊಳ್ಳುತ್ತಾರೆ. ಈ ಅಂಶವನ್ನು 'ಕವಿಶೈಲದಲ್ಲಿ ಸಂಧ್ಯೆ' ಕವನ ದೃಢಪಡಿಸುತ್ತದೆ.

ಆಲಿಸು! ಕೇಳುತಲಿದೆ ಓಂಕಾರ:
ನಿತ್ಯನಿರಂತರ ಅಳಿ ಝೇಂಕಾರ!
ಮನವೇ, ಧ್ಯಾನದಿ ಮುಳುಗು ನಿಧಾನದಿ:
ನುಂಗಲಿ ನಿನ್ನಂ ತಪಃ ಸುಷುಪ್ತಿ,
ಅನಂತ ತೃಪ್ತಿ!

(ಕವಿ ಶೈಲದಲ್ಲಿ ಸಂಧ್ಯೆ)

ಇದೇ ರೀತಿಯಲ್ಲಿ ಮತ್ತೊಂದು ಕವನ

ಆಃ ಅದೋ! ಆಲಿಸಲ್ಲಿ!
ಹೊದರುದಳಿರ ಮಾವಿನಲ್ಲಿ
ಹೊರಸು ಗುಬ್ಬಳಿಸುತಿದೆ!
ಅದೋ! ಮತ್ತೆ! ಏನು ಸವಿ!
ಇಂದ್ರಿಯಂಗಳೆಲ್ಲ ಕಿವಿ!
ಜೀವ ಬೆಬ್ಬಳಿಸುತಿದೆ!

(ಪಟ್ಟಣದಲ್ಲಿ ಹೊರಸುಹಕ್ಕಿ)

ಇಲ್ಲಿಯೂ ಸಹ ಇಂದ್ರಿಯನಿಷ್ಟ ಅನುಭವ ಎಂಬುದು ಚೈತನ್ಯಾವಸ್ಥೆಯಲ್ಲಿ ಪ್ರಕೃತಿಯ ಎಲ್ಲವನ್ನು ತನ್ನದಾಗಿಸಿಕೊಳ್ಳುತ್ತದೆ. ಅಂದರೆ ಕುವೆಂಪುರವರಿಗೆ ಪ್ರಕೃತಿಯಲ್ಲಿನ

ತೃಣವಾದ ವಸ್ತುವೂ ಸಹ ಚೈತನ್ಯ ಪೂರ್ಣವಾಗಿರುವುದರಿಂದ ಯಾರಿಗೂ ಬೇಡದ ಯಕಶ್ಚಿತ್ ಹಕ್ಕಿಯ ಶಬ್ದವು ಸಹ ಜೀವವನ್ನು ಚೈತನ್ಯವನ್ನಾಗಿ ಮಾಡುತ್ತದೆ ಎಂದು ಕವನದಲ್ಲಿ ವ್ಯಕ್ತಪಡಿಸುತ್ತಾರೆ. ಆದ್ದರಿಂದ 'ಬತ್ತಿದೆದೆಗೆ ಬರಲಿ ನಿನ್ನ ಗಾನದೊಳ್ಸರಿ, ಬರಲಿ ಜಡದ ಬಡತನಕ್ಕೆ ಜೀವದ್ಯೆಸಿರಿ, ರಸದ ಹನಿ ನಿನ್ನದನಿ! ಹಾಡು ಮತ್ತದೊಮ್ಮೆ ಹಕ್ಕಿ' ಎಂದು ಮತ್ತೊಂದು ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

ಕುವೆಂಪು ಪ್ರಕೃತಿಯ ಅನಂತದಲ್ಲಿ ತೇಲಿದಂತೆ ಇಂದ್ರಿಯನಿಷ್ಟ ಅನುಭವ ಎಂಬುದು ಪ್ರತಿಮೆಯ ರೂಪತಾಳುತ್ತದೆ. ಆದರೆ ಕವನ ಎಲ್ಲಿಯೂ ಅನುಭವದ ಪ್ರಾಮಾಣಿಕತೆಗೆ ಧಕ್ಕೆ ತರುವುದಿಲ್ಲ. ಆದ್ದರಿಂದಲೇ ಕವಿ ಕಟ್ಟುವ ಪ್ರತಿಮೆಗಳು ಎಲ್ಲಿಯೂ ರೌದ್ರತೆಯಿಂದ, ಆಶಾಂತಿಯಿಂದ ಕೂಡಿರದೆ ಹಾಲಿನ ಹೊಳೆ, ಬೆಣ್ಣೆಯ ಬೆಟ್ಟ, ಜೇನಿನ ಮಳೆಯಾಗಿ ಕಂಗೊಳಿಸುತ್ತದೆ. ಅಂತಹ ಕವನ

ಓಂ! ಹಾಲು ಹಳ್ಳಹರಿಯಲಿ,
ಬೆಣ್ಣೆ ಬೆಟ್ಟವಾಗಲಿ!
ಜೇನುಮಳೆಯು ಸುರಿಯಲಿ,
ತೊಟ್ಟಿಲೊಲಿದು ತೂಗಲಿ!
ಓಂ ಶಾಂತಿಃ ಶಾಂತಿಃ ಶಾಂತಿಃ!

(ಶ್ರೀ ಪಾರ್ಥಿವ ಪುರುಷನಿಗೆ)

ಹಿಂದಿನ ಇಂದ್ರಿಯನಿಷ್ಟ ಅನುಭವ ಅಂಶದ ವಿಚಾರಗಳ ನಂತರ ವಿಚಾರ ಲೇಪಿತ ಅನುಭವದ ಅಂಶಕ್ಕೆ ಹೊರಳುವುದಾದರೆ: ಅಲ್ಲಿಯೂ ಸಹ ಕಾಣುವುದು ನಿಸರ್ಗ ಅನುಭೂತಿಯ ಮೇಲೆ ನಿಂತಿರುವ ವಿಚಾರಗಳ ಕವನಗಳು. ಅವು

ಆಃ! ನಿಂತು ನೋಡಿಲ್ಲಿ:
ನೂರು ಋಷಿಗಳ ಬೋಧನೆಯ ಸಾರವಿಹುದಿಲ್ಲಿ
ನೂರು ವೈರಾಗಿಗಳ ಸಂಸಾರವಿಹುದಿಲ್ಲಿ;
ಬುದ್ಧಿಯರಿಯದ ಸಿದ್ಧಿ ಭಾವಗೋಚರವಿಲ್ಲಿ!

ವ್ಯಕ್ತಿತ್ವವೇ ಜ್ವಾಲೆಯಾಗುರಿಯುವುದು ಇಲ್ಲಿ!
ಕೋಟಿ ಮೈಲಿಗಳಾಚೆ ಕಾಶಿಯಾತ್ರೆಗಳೇಕೆ?
ಇಲ್ಲಿಗೈತರು, ಯಾತ್ರಿಕನೆ ಇದುವೆ ತರುಕಾಶಿ!
ರಸತೀರ್ಥದಲಿ ಮಿಂದವಗೆ ಭವದ ಭಯವೇಕೆ!
ಪುಣ್ಯದಾಲಯ ಪೃಥ್ವಿ! ಸ್ವರ್ಗವದು ಪರದೇಶಿ!
(ಕೆಂದಳಿರು)

ಈ ಕವನ, ಪ್ರಕೃತಿ ಕವನಗಳ ಸಾಲಿನಲ್ಲಿ ಭಿನ್ನವಾಗಿ ಸಾಗುವ ಕವನವಾದರೂ ಬದುಕನ್ನು ಅಖಂಡವಾಗಿ ಹೀರುವ ಪ್ರಯತ್ನ ಅಡಗಿಸಿಕೊಂಡಿದೆ. ಹಾಗೂ ಜ್ಞಾನಕ್ಕೆ, ಬೌದ್ಧಿಕ ಶೋಧನೆಗೆ ಮುಖ್ಯನೆಲೆಯಾಗಿ ಪ್ರಕೃತಿಯನ್ನು ಮುಂದೆ ನಿಲ್ಲಿಸುವ ಕುವೆಂಪುರವರ ಬಗೆಯನ್ನು ಕಾಣಬಹುದು. ಹೀಗೆ ಭಾರತದ ಸಂಪ್ರದಾಯದಲ್ಲಿರುವ ಧರ್ಮ, ಆಚಾರ ವಿಚಾರಗಳು ಪ್ರಕೃತಿಯ ಮಡಿಲಲ್ಲಿ ಅಡಗಿದೆ ಎಂದು ತಿಳಿಸುತ್ತಲೇ ರೂಢಿಗತ ಸಂಪ್ರದಾಯ ಸಮಾಜವನ್ನು ತಿರಸ್ಕರಿಸುವ ಕವಿ 'ಕೋಟಿ ಮೈಲಿಗಳಾಚೆ ಕಾಶಿಯಾತ್ರೆಗಳೇಕೆ? ಪುಣ್ಯದಾಲಯ ಪೃಥ್ವಿ! ಸ್ವರ್ಗವದು ಪರದೇಶಿ' ಎಂದು ಕವನದಲ್ಲಿ ಮಾತನಾಡುತ್ತಾರೆ.

ದನಕರುಗಳು ಬಯಲಲಿ ಮೇಯುತ 'ಇವೆ';
ಗಿರಿತರುಗಳು ಬದುಕನು ಸವಿಯುತ 'ಇವೆ';
ಅರಿವಾಸೆಯ ಮಾಯೆಗೆ ಬೀಳದೆ 'ಇವೆ';
ಇರುವಿಕೆಯಾನಂದದಿ ನಲಿಯುತ 'ಇವೆ';
'ಇವೆ';
ಇರುವಿಕೆಗಿಂತಲು ಹೆಚ್ಚಿನ ಗೋಜಿಗೆ
ಹೋಗದಿವೆ!

'ಅರಿವಾ' ಸೆಯೆ ಮಾಯಾ ಬಂಧ;
'ಇರು' ವುದೆ ಮುಕ್ತಿಯ ಆನಂದ!
'ಅರಿವಾ' ಸೆಯ ಬಿಡು; 'ಇರು' ವಾಸೆಯ ತೊಡು!
ಇಂತಹ ಸಮಯದಿ 'ಇರುವಿಕೆ' ಗಿಂತಲು

ಹೆಚ್ಚಿನ 'ಅರಿವಿ' ಲ್ಲ!
ಇಂತಹ ದಿವ್ಯಪ್ರಭಾತ ಕಾಲದಿ
ಜೀವಿಸುವುದಕಿಂತಲು ರಸಜೀವಿಗೆ
ಬೇರೆಯ ಗುರಿಯಿಲ್ಲ!

(ಇಂತಹ ಸುಂದರ ಪ್ರಾತಃಕಾಲದಿ)

ಈ ಕವನದಲ್ಲಿ ವಾಸ್ತವತೆಯಿಂದ ಬೇರೆಯಾಗುವ ಕುವೆಂಪು ನಿಸರ್ಗದ ಆರಾಧನೆಯಲ್ಲಿ ಬದುಕನ್ನು ಪ್ರಭಾವಶಾಲಿಯಾಗಿಸಲು ಪ್ರಯತ್ನಿಸಿರುವುದನ್ನು ಮನಗಾಣಬಹುದು. ಆ ಸಾಲುಗಳಲ್ಲಿ ಕಾಣುವ ಜೀವನ ಪ್ರೇಮ ಉತ್ಕಟವಾದದ್ದು. ಇದೇ ನೆಲೆಯಲ್ಲಿ ನಿಸರ್ಗ ಸೌಂದರ್ಯ ಮತ್ತು ಜೀವನ ಪ್ರೇಮ ಸಮರಸಗೊಂಡ ನೆಲೆಯನ್ನು ಸಹ ಕಾಣಬಹುದು. ಈ ಕವನದ ಒಟ್ಟಾರೆ ನೆಲೆಯನ್ನು ಗಮನಿಸಿದರೆ ಸಮಸ್ಯೆಯಿಂದ ದೂರವಾದ ಪೃಥ್ವಿ ಸುಂದರ ಮತ್ತು ಸದಾ ಆನಂದವನ್ನು ಆಶ್ರಯಿಸಲಿ ಎಂದು ಆಶಿಸುತ್ತಾ ಜನಸಮುದಾಯವನ್ನು ಎಚ್ಚರಿಸುತ್ತಿದ್ದಾರೆ.

ಎಲ್ಲವು 'ಇವೆ'! ಸುಮ್ಮನೆ 'ಇವೆ'!
ಅರಿಯುವ ಗೋಜಿಲ್ಲ!
ಮನುಜನು ನಾನ್ ಎನ್ನೆದೆಯಲಿ
ಅರಿವೆಂಬುವ ಬಾವು
ಕೀವಾಗಿರೆ ನೋವಾಗಿರೆ
ಬಾಳ್ಬೆಲ್ಲವೆ ಬೇವು!

(ಆಕಾಶದ ಹೆಬ್ಬಯಲಿನಲಿ)

ಈ ಕವನದಲ್ಲಿ ಕಂಡು ಬರುವ 'ಅರಿವೆಂಬುವ ಬಾವು ಕೀವಾಗಿರೆ, ನೋವಾಗಿರೆ, ಬಾಳ್ಬೆಲ್ಲವೆ ಬೇವು' ಎಂದು ತಿಳಿಸುತ್ತಾರೆ. ಇಲ್ಲಿ ಬಾವು, ಕೀವು, ನೋವು ದೇಹಕ್ಕೆ ಹೇಗೆ ಬೇಡವಾಗಿದೆಯೋ ಅದೇ ರೀತಿಯಲ್ಲಿ 'ನಾನ್' ಎಂಬುವ ಕೆಳಮಟ್ಟದ ಅಹಂನಿಂದ ಕೂಡಿದ ಜ್ಞಾನವು ಬೇಡ ಎಂಬ ಸೂಚಿತ ಭಾವವನ್ನು ಕವನದಲ್ಲಿ ತಿಳಿಯಪಡಿಸಿದ್ದಾರೆ. ಈ ಅಂಶ ಪ್ರಕೃತಿಯ ಹಿನ್ನೆಲೆಯಲ್ಲಿ ಮೂಡಿಬಂದಿರುವುದರಿಂದ ಇಲ್ಲಿ ಸೌಂದರ್ಯದ

ಅದ್ಭುತದಲ್ಲೇ ಮಹೌನ್ನತ ದರ್ಶನವನ್ನು ನೀಡುವ ಪ್ರಕೃತಿಯನ್ನು ಕುವೆಂಪು ಕಂಡಿದ್ದಾರೆ. ಚೆಲುವಿನ ಆರಾಧನೆಯಲ್ಲೇ ಎಲ್ಲವನ್ನು ಗಂಭೀರವಾಗಿ, ಶಾಂತವಾಗಿ ಸ್ವೀಕರಿಸಿದ ಕವಿ ಸಮುದಾಯವನ್ನು ಕುರಿತು ತಮ್ಮ ವಿಚಾರ ಲೇಪಿತ ಅನುಭವದ ಮೂಲಕ ಪ್ರಕೃತಿಯಲ್ಲಿ ಅಡಗಿರುವ ಪ್ರೇಮ, ಜೀವನ ಸಂದೇಶ, ವಿಚಾರಗಳನ್ನು ಸ್ವೀಕರಿಸುವಂತೆ ಕವಿ ಸೂಚಿಸುತ್ತಾರೆ. ಹಾಗೂ ಇದೇ ಕವನದಲ್ಲಿ ಪ್ರಕೃತಿಯನ್ನು ಪ್ರವೇಶಿಸುವ ಮನುಜರಿಗೆ 'ಮನುಜನು ನಾನ್ ಎನ್ನದೆ' ಪ್ರಕೃತಿಯನ್ನು ಪ್ರವೇಶಿಸುವಂತೆ ಎಚ್ಚರಿಕೆಯನ್ನು ನೀಡಿದ್ದಾರೆ.

ಈ ರೀತಿಯಲ್ಲಿ ಪ್ರಕೃತಿಯನ್ನು ಅನುಭವ ಮತ್ತು ದರ್ಶನ ದೀಪ್ತಿಯ ಮೂಲಕ ಕಂಡ ಕುವೆಂಪುರವರು ನಂತರದಲ್ಲಿ ನಿಸರ್ಗಕ್ಕೆ ಸ್ತ್ರೀ ದೃಷ್ಟಿಕೋನವನ್ನು ನೀಡಿದ್ದಾರೆ. ಅದು ನಿಸರ್ಗದ ಮೂಲಕ ತಾಯಿ ರೂಪವನ್ನು ಪರಿಭಾವಿಸಿದ ಬಗೆವಾಗಿದೆ. ಅದನ್ನು ಕವನದಲ್ಲಿ ಕಾಣುವುದಾದರೆ

ಕಾವ್ಯರತಿ, ಸುಂದರಿಯೆ, ಪ್ರತಿಭಾ ತಪಸ್ವಿನಿಯೆ,
ವಿಶ್ವಸಂಮೋಹಿನಿಯೆ, ಶೃಂಗಾರ ಮಂದಿರೆಯೆ,
ನಿನ್ನ ಮಿಂಚಪ್ಪುಗೆಗೆ ಕಗ್ಗಲ್ಲು ರಸದ ಕಿಡಿ:
ಜಡವೆಲ್ಲ ಚೈತನ್ಯದಗ್ನಿ ನದಿ! ತವ ಕೃಪೆಗೆ
ಶರಣು ಕವಿದರ್ಶನಂ: ಹೇ ದೇವಭೋಗಿನಿಯೆ,
ನಿನ್ನ ಚುಂಬನರಸದ ಪಾನದಿ ಕವಿಯೆ ಯೋಗಿ!

(ರಸಾನುಭೂತಿ)

ಈ ಕವನದಲ್ಲಿ ಸುಂದರವಾದ ನಿಸರ್ಗಕ್ಕೆ ತಾಯಿರೂಪವನ್ನು ನೀಡುತ್ತಾರೆ. ಆ ತಾಯಿಯ ಪ್ರೀತಿಯ ಅಪ್ಪುಗೆ ಎಂತಹದೆಂದರೆ ಕಲ್ಲು ಸಹ ಚೈತನ್ಯದ ಕಿಡಿಯಾಗುತ್ತದೆ ಎಂದು ವರ್ಣಿಸುತ್ತಾರೆ. ಇಲ್ಲಿ ಅಪ್ಪುಗೆ ಪ್ರೀತಿಯ ಚೈತನ್ಯದ ಸೆಲೆಯಾಗಿದೆ. ಆದ್ದರಿಂದಲೇ ಆ ಪ್ರೀತಿಗೆ ಕವಿ ಶರಣು.

ಗೋರಾಂಧಕಾರದೊಳು ಕಾರ್ಮುಗಿಲನುಟ್ಟು
ಮಿಂಚೆಂಬ ತೇಜಸದ ಬಳೆಯ ತೊಟ್ಟು
ಭೈರವನ ತಂಬಟೆಯ ಗುಡುಗಿನೊಳಗಿಟ್ಟು
ಬಾ, ಎನ್ನನೆಚ್ಚರಿಸು, ಜನನಿ – ಹೇ ಜವನ ಜನನಿ.

(ಘೋರಾಂಧಕಾರದೊಳು. ಕೊಳಲು)

ಈ ಕವನದ ಹಿನ್ನೆಲೆಯಲ್ಲಿ ಕವಿ ಭಾವುಕ ಪರಿಕಲ್ಪನೆಯನ್ನು ಮುಟ್ಟುತ್ತಾರೆಯೇ ಏನಿಸುತ್ತದೆ. ಆದರೆ ಅಲ್ಲಿ ಕಾಣುವುದು ತನ್ನ ಸುತ್ತಮುತ್ತಲಿನ ನಿರಾಶೆ, ಹಿಂಜರಿಕೆ, ವಿಷಾದಗಳೇ ಆಗಿವೆ. ಆದ್ದರಿಂದ ಕುವೆಂಪು 'ಬಾ ಎಚ್ಚರಿಸು ಜನನಿ' ಎಂದು ಕರೆಯುತ್ತಾರೆ. ಮುಂದೆ ಚೈತನ್ಯವನ್ನು ನೀಡಿದ ಪ್ರಕೃತಿ ಮಾತೆಗೆ ವಂದಿಸಲು ಕರೆಯುತ್ತಾರೆ. ಇಲ್ಲಿಯೂ ಸಹ ಕವಿಯ ಭಾವಪೂರ್ಣ ತನ್ಮಯತೆಯನ್ನು ಕಾಣುವ ಮೂಲಕ ಸಮತೋಲನ ಸ್ಥಿತಿಯನ್ನು ಸಹ ಗುರುತಿಸಬಹುದು.

ಇಂತಹ ಸೌಂದರ್ಯಾನುಭವದ ಕವನಗಳನ್ನು ನೀಡಿದ ಕುವೆಂಪು ಕವನಗಳನ್ನು ಕುರಿತು ಜಿ.ಎಸ್. ಶಿವರುದ್ರಪ್ಪನವರು ಈ ಮಾತನ್ನು ಹೇಳುತ್ತಾರೆ. "ಪಕ್ಷಿಕಾಶಿಯ ಐದಾರು ಕವಿತೆಗಳನ್ನು ಬಿಟ್ಟರೆ ಉಳಿದ ಬಹುತೇಕ ಕವನಗಳು ಹರಳುಗೊಂಡ ಭಾವಗೀತೆಗಳಾಗಿಲ್ಲ. ಅಲ್ಲದೆ ಒಂದು ಸಲ ವಾಸ್ತವವಾಗಿ ಆದ ಅನುಭಗಳನ್ನೇ, ಅಂಥದೆ ಸಂದರ್ಭವನ್ನು ವಸ್ತುವನ್ನಾಗಿ ಉಳ್ಳ ಬೇರೆ ಬೇರೆಯ ಕವಿತೆಗಳಲ್ಲಿಯೂ ಪುನರಾವರ್ತಿಸಲಾಗಿದೆ. ಹೀಗಾಗಿ ಆ ಬೇರೆಯ ಕವಿತೆ ಹಿಂದಿನ ಕವಿತೆಗಿಂತ ಬೇರೆ ಯಾವ ಅನುಭವವನ್ನೂ ಹೇಳುವುದಿಲ್ಲ. ಮತ್ತೊಂದು ಅಂಶವೆಂದರೆ ಇವರ ಕವಿತೆಗಳಲ್ಲಿ ಅನುಭವಗಳನ್ನು ಹರಳುಗೊಳಿಸುವ ಕ್ರಿಯೆಗಿಂತ ವಿವರಿಸಿ ಹೇಳುವ ವಾಚ್ಯದ ಕಡೆಗೆ ಗಮನ ಹೆಚ್ಚಾಗಿದೆ. ಒಮ್ಮೊಮ್ಮೆ ತೀರಾ ವಾಚ್ಯ – ವಿವರಣೆಯಾಗುವ ಕವಿತೆಯ ಒಡಲಲ್ಲಿ ಒಂದೊ, ಎರಡೊ, ಮೂರೋ, ತೀರಾ ಸೊಗಸಾದ ಪಂಕ್ತಿಗಳಿದ್ದು, ಅವುಗಳಿಗಾಗಿ ಇಡೀ ಕವಿತೆಯನ್ನು ಜೋಪಾನವಾಗಿಡಬೇಕಾಗುತ್ತದೆ. ಹತ್ತಿ ಸೀರೆಯಲ್ಲಿರುವ ಜರತಾರಿ ಅಂಚಿನಿಂದಲೋ ಚಿತ್ರದಿಂದಲೋ ಅದನ್ನು ಒಪ್ಪಿಕೊಳ್ಳುವಂತೆ ಕುವೆಂಪು ಅವರ ಶೈಲಿ ಮೂಲತಃ ಕಥನ ಕಾವ್ಯಕ್ಕೆ ಹೇಳಿ ಮಾಡಿಸಿದ್ದೆ ಹೊರತು ಭಾವಗೀತೆಗಳಿಗಲ್ಲ. ಅವರ ಭಾವಗೀತೆಗಳು ಹರಳುಗೊಂಡವುಗಳಾಗದೆ, ವಿವರಣಾತ್ಮಕವೂ ಕಥನಾತ್ಮಕವೂ ಆಗಿರುವುದು ಇದರಿಂದಲೇ

ತಮ್ಮ ಕಥನ ಕಲೆಯನ್ನು ಪಳಗಿಸಿಕೊಳ್ಳುವ ಮಾಧ್ಯಮಗಳಾಗಿ ಅವರಿಗೆ ಭಾವಗೀತೆಗಳು ಒದಗಿ ಬಂದಿರುವುದರಿಂದ ಕುವೆಂಪು ಅವರನ್ನು 'ಭಾವಗೀತೆಯ ಕವಿ' ಎನ್ನುವುದಕ್ಕಿಂತ 'ಕಥನ ಕವಿ' ಎಂದು ಕರೆಯುವುದು ಉಚಿತ. ನಮಗೆ ತೋರುವ ಮಟ್ಟಿಗೆ ಅವರ ಭಾವಗೀತೆಗಳೆಲ್ಲ ಅವರ ಮಹಾಕಾವ್ಯ ರಚನೆಗೆ ನಡೆದ ಪೂರ್ವಸಿದ್ಧತೆಗಳಂತೆ ತೋರುತ್ತದೆ. ಆದುದರಿಂದಲೇ ಕುವೆಂಪು ಅವರಲ್ಲಿ ಸಾರ್ಥಕವಾದ ಭಾವಗೀತೆಗಳು ವಿರಳ'[೯]

ಈ ಒಂದು ನಿಲುವಿಗೆ ಎಚ್.ಎಸ್.ರಾಘವೇಂದ್ರರಾವ್‌ರವರ ನಿಲುವನ್ನು ಗಮನಿಸುವುದಾದರೆ ಈ ಒಂದು ಉಲ್ಲೇಖದ ಹಿನ್ನೆಲೆಯಲ್ಲಿ ಕಾಣುವ ಮಾನದಂಡ ತಿಳಿಯುತ್ತದೆ. "ಶಿವರುದ್ರಪ್ಪನವರಿಗೆ ಕುವೆಂಪು ಕವಿತೆಯ ಆಶಯಗಳ ಬಗ್ಗೆ ಆಕರ್ಷಣೆಯಿದ್ದು, ಅದರ ರೂಪಾಂಶದ ಕೆಲವು ಲಕ್ಷಣಗಳ ಬಗ್ಗೆ ಅನುಮಾನ, ಅಸಮಾಧಾನಗಳಿರುವಂತೆ ತೋರುತ್ತದೆ. ಇಲ್ಲಿಯೂ ಅವರಿಗೆ ತಿಳಿಯದಂತೆ ಬೇಂದ್ರೆ ಮಾದರಿಯ ಭಾವಗೀತೆಗಳೇ ಅತ್ಯುತ್ತಮವಾದುವೆಂಬ ನಂಬಿಕೆ ಕೆಲಸ ಮಾಡಿದೆ."[೧೦]

****

ಈ ಅಧ್ಯಾಯದ ಹಿನ್ನೆಲೆಯಲ್ಲಿ ಕೆಲವು ಅಂಶಗಳನ್ನು ಗುರುತಿಸುವುದಾದರೆ

೧. ಕುವೆಂಪು ನಿಸರ್ಗದಲ್ಲಿ ಒಂದಾಗುತ್ತಾ ಆನಂದದ ಜೊತೆಗೆ ಅಂತರ್ಮುಖಿಯಾಗುವುದನ್ನು ಮತ್ತು ಅದರಿಂದ ಅಪೂರ್ವಶಾಂತಿಯ ಕಡೆ ಚಲಿಸುವುದನ್ನು ಕಾಣಬಹುದು.

೨. ಕವನಗಳಲ್ಲಿ ಕುವೆಂಪು ಪ್ರಕೃತಿಯನ್ನು ಚೈತನ್ಯದ ಸೆಲೆಯನ್ನಾಗಿ ಕಂಡಿದ್ದಾರೆ.

೩. ಕವನಗಳಲ್ಲಿ ಪ್ರಕೃತಿಯನ್ನು ದೇವರೆಂದು ಪರಿಭಾವಿಸುವಂತೆ ಕಂಡರೂ ಅದು ಪ್ರಕೃತಿಯ ಮಹೌನ್ನತ ಸೌಂದರ್ಯದ ಅಂತರ್ಮುಖಿಭಾವವೇ ಇಲ್ಲಿ ಕಾಣುವುದು.

೪. ಕುವೆಂಪುರವರು ಕವನಗಳಲ್ಲಿ ಪ್ರಕೃತಿಯನ್ನು ತಾಯಿ ಎಂದು ಪರಿಭಾವಿಸಿರುವ ಬಗೆಯನ್ನು ಕಾಣಬಹುದು.

೫. ನಿರಾಶೆ, ತಾತ್ವಿಕ ಹಿಂಜರಿತ, ಅಶಾಂತಿಗಳಿಂದ ಕುವೆಂಪುರವರ ಕವನಗಳು ದೂರಸರಿದು ಉತ್ಕಟ ನಿಸರ್ಗ ಪ್ರೀತಿ, ಜೀವನ ಪ್ರೀತಿ, ಆತ್ಮೀಯತೆಯನ್ನು ಒಳಗೊಂಡಿರುವುದನ್ನು ಕಾಣಬಹುದು.

ಅಡಿಟಿಪ್ಪಣಿ

೧. ಶಕ್ತಿ ಶಾರದೆಯ ಮೇಳ: ಲೇ. ಡಿ.ಆರ್ ನಾಗರಾಜ್
ಪುಟ ೯೨, ಪ್ರ ೨೦೦೨, ಅಕ್ಷರ ಪ್ರಕಾಶನ, ಹೆಗ್ಗೋಡು

೨. ಕುವೆಂಪು ಸಮಗ್ರ ಗದ್ಯ: ಸಂಪುಟ ೦೧ ಸಂ. ಕೆ.ಸಿ.ಶಿವಾರೆಡ್ಡಿ
ಪುಟ. ೫೮೩, ಪ್ರ. ೨೦೦೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಕುವೆಂಪು ಸಮಗ್ರ ಗದ್ಯ: ಸಂಪುಟ ೦೧ ಸಂ. ಕೆ.ಸಿ.ಶಿವಾರೆಡ್ಡಿ
ಪುಟ. ೨೮೬, ಪ್ರ. ೨೦೦೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಕುವೆಂಪು ಪುನರಾಲೋಕನ: ಲೇ. ಜಿ.ಎಸ್.ಶಿವರುದ್ರಪ್ಪ
ಪುಟ ೧೫, ಪ್ರ ೨೦೦೫, ಅಂಕಿತ ಪುಸ್ತಕ, ಬೆಂಗಳೂರು

೫. ಶಕ್ತಿ ಶಾರದೆಯ ಮೇಳ: ಲೇ. ಡಿ.ಆರ್ ನಾಗರಾಜ್
ಪುಟ ೯೨, ಪ್ರ ೨೦೦೨, ಅಕ್ಷರ ಪ್ರಕಾಶನ, ಹೆಗ್ಗೋಡು

೬. ಕುವೆಂಪು ಕಾವ್ಯ: ಲೇ. ನರಹಳ್ಳಿ ಬಾಲಸುಬ್ರಹ್ಮಣ್ಯ
ಪುಟ ೫೩, ಪ್ರ ೨೦೦೪, ಅಂಕಿತ ಪುಸ್ತಕ, ಬೆಂಗಳೂರು

೭. ರಸ ಸಿದ್ಧಿ: ಲೇ ಬೈರಮಂಗಲ ರಾಮೇಗೌಡ
ಪುಟ ೫೬, ಪ್ರ ೨೦೦೩, ಸಮಾನ ಮನಸ್ಕರ ಒಕ್ಕೂಟ

೮. ನಮಸ್ಕಾರ: ಲೇ ಎಚ್.ಎಸ್.ರಾಘವೇಂದ್ರರಾವ್
ಪುಟ ೬೨, ಪ್ರ ೨೦೦೬, ಅಭಿನವ, ಬೆಂಗಳೂರು

೯. ಸಹ್ಯಾದ್ರಿಯ ಸೂರ್ಯ: ಸಂ. ಚಕ್ಕೆರೆ ಶಿವಶಂಕರ್
ಪುಟ ೬೫, ಪ್ರ ೨೦೦೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೦. ಹಾಡೆ ಹಾದಿಯ ತೋರಿತು: ಲೇ. ಎಚ್.ಎಸ್. ರಾಘವೇಂದ್ರರಾವ್
ಪುಟ ೨೩೨, ಪ್ರ ೧೯೯೫, ಕನ್ನಡ ಸಂಘ ಕ್ರೈಸ್ಟ್ ಕಾಲೇಜ್

ಅಧ್ಯಾಯ: ನಾಲ್ಕು

ಕುವೆಂಪುರವರ ಪ್ರಕೃತಿ ಕವನಗಳಲ್ಲಿ ಅಂತರ್ಗತವಾಗಿರುವ ವೈಚಾರಿಕತೆ

ಯಾವುದೇ ಒಂದು ಹಂತದಲ್ಲಿ ಕವಿಯಿಂದ ರಚಿತವಾದ ಸಾಹಿತ್ಯವು ಅಂದಿನ ಸಮಾಜದ ಸಂದರ್ಭದಲ್ಲಿಯಿದ್ದಿರ ಬಹುದಾದ ಸಾಮಾಜದ ಪರಿಸ್ಥಿತಿಯನ್ನು ದಾಖಲಿಸದೇ ಇರದು. ಈ ಬೆಳವಣಿಗೆ ಸಾಹಿತ್ಯದಲ್ಲಿ ದಾಖಲಾದಂತೆ ಅದು ತನ್ನ ಮೂಲಕವಾಗಿಯೇ ಎಚ್ಚರಿಸುವ ಕೆಲಸವನ್ನು ಸಹ ಮಾಡುತ್ತದೆ. ಅದು ಕವಿಯ ಮೂಲಕ ಸಾಧುವಾಗುವುದರಿಂದ ಇಲ್ಲಿ ಕವಿಯ ಪಾತ್ರ ಪ್ರಮುಖವಾಗುತ್ತದೆ. ಅಂತಹ ಎಚ್ಚರಿಕೆಯ ಸೂಕ್ಷ್ಮ ದೃಷ್ಟಿಯುಳ್ಳ ಕವಿಗಳಲ್ಲಿ ಕುವೆಂಪುರವರು ಸಹ ನಿಲ್ಲುತ್ತಾರೆ.

ಕುವೆಂಪುರವರು ತಮ್ಮ ಕಾವ್ಯಗಳ ಮೂಲಕ ಪ್ರಕೃತಿ ಸೌಂದರ್ಯದ ಕವನಗಳ ಜೊತೆಯಲ್ಲಿ ವೈಚಾರಿಕ ಕವನಗಳನ್ನು ಸಹ ರಚನೆ ಮಾಡಿದ್ದಾರೆ. ಆದ್ದರಿಂದಲೇ ತಮ್ಮ ಸಾಹಿತ್ಯದಲ್ಲಿ ಅನುಭವದ ಕಲಾತ್ಮಕತೆಯನ್ನು ರೂಪಿಸುತ್ತಲೇ ಸಮಗ್ರ ಬದುಕನ್ನು ವಿಶಿಷ್ಟ ಪ್ರಜ್ಞೆಯ ಮೂಲಕ ಕಟ್ಟಿಕೊಡುವ ಮೌಲ್ಯಗಳನ್ನು ಸಹ ಅಭಿವ್ಯಕ್ತಿಸಿದ್ದಾರೆ. ಅದು ಕುವೆಂಪುರವರಲ್ಲಿ ಪ್ರಕೃತಿ ಕವನಗಳೊಂದಿಗೆ ಮೇಳೈಸಿ ಹೊರಹೊಮ್ಮುವುದು ವಿಶಿಷ್ಟವಾಗಿ ಕಂಡುಬರುತ್ತದೆ. ಈ ಮೂಲಕವಾಗಿಯೇ ಕವನಗಳು ಚಾರಿತ್ರಿಕ ವಿದ್ಯಮಾನವಾಗಿ, ಸಂಸ್ಕೃತಿಯ ಅಸಮತೋಲನದ ವ್ಯತ್ಯಾಸವನ್ನು ಗುರುತಿಸುವ ಕೆಲಸವನ್ನು ಮಾಡುತ್ತವೆ. ಈ ನಿಟ್ಟಿನಲ್ಲಿ "ವೈಚಾರಿಕತೆ ಎಂದರೆ ಹಿಂದಿನ ಕಾವ್ಯ ಸಂದರ್ಭದಲ್ಲಿನಂತೆ ನಿರ್ದಿಷ್ಟವಾದ ಸಿದ್ಧಾಂತ, ತತ್ವ, ನೀತಿ, ಉಪದೇಶ ಇತ್ಯಾದಿಗಳನ್ನು ಹೇಳುವ ಪ್ರವೃತ್ತಿ ಅಲ್ಲ. ಅದು ಬದುಕನ್ನು ಕುರಿತ ಗಾಢವಾದ ಪ್ರೀತಿ ಹಾಗೂ ಚಿಂತನೆಗಳಿಂದ ನಿಷ್ಪನ್ನವಾಗುವ ಒಂದು ದೃಷ್ಟಿಕೋನ. ಒಬ್ಬ ಬರಹಗಾರ ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಮಾನವೀಯ ಕಾಳಜಿಗಳ ಮೂಲಕ ರೂಪಿಸಿಕೊಳ್ಳುವ ಒಂದು ವ್ಯಕ್ತಿ ವಿಶಿಷ್ಟವಾದ ಚಿಂತನಪರ ಬುದ್ಧಿಸ್ಥಿತಿಯನ್ನು ಆತನ ವೈಚಾರಿಕತೆ ಎನ್ನಬಹುದು. ಅದು ಕೇವಲ ಪುಸ್ತಕ ಪಾಂಡಿತ್ಯದಿಂದ ಬಂದುದಲ್ಲ. ಅದು ಎಲ್ಲವನ್ನೂ ಪರೀಕ್ಷಿಸುತ್ತಾ, ಪ್ರಶ್ನಿಸುತ್ತಾ ಸತ್ಯಾನ್ವೇಷಣೆಗೆ ತೊಡಗುವ ವೈಜ್ಞಾನಿಕ ದೃಷ್ಟಿಯನ್ನು ತನ್ನ ಚಿಂತನೆಯ ನೆಲೆಗಟ್ಟನ್ನಾಗಿ ಮಾಡಿಕೊಂಡ ಒಂದು ಮನೋಧರ್ಮ"[1] ಎಂದು ಹೇಳಬಹುದು.

ಈ ನಿಟ್ಟಿನಲ್ಲಿ ಸಮಾಜದ ಅಂದಂದಿನ ಸಂಗತಿಯನ್ನು ಸಂವೇದನೆಗೆ ಒಳಗು ಮಾಡುವ ಕುವೆಂಪುರವರು ಕಲ್ಪನಾವಿಹಾರಿಯಾದರೂ ಸಮಾಜದ ಬದಲಾವಣೆಗೆ ತೀವ್ರವಾಗಿ ಪ್ರತಿಕ್ರಿಯಿಸಿದವರು. ಆದ್ದರಿಂದಲೇ ಸ್ವಾತಂತ್ರ್ಯ ಪೂರ್ವದ ಅಂದಿನ ಸಮಾಜವನ್ನು ಕವನಗಳಲ್ಲಿ ಮೂಡಿಸುವ ಕುವೆಂಪುರವರು ಅಲ್ಲಿ ಸ್ವತಂತ್ರ ಇಲ್ಲದಿರುವುದು, ಬೂಸಲು ಧರ್ಮ, ಸ್ವಾರ್ಥಶೀಲ ಆಚಾರಗಳ ವಿರುದ್ಧ ಪ್ರತಿಭಟಿಸಿದ್ದಾರೆ. ಆದರೆ ಈ ಪ್ರತಿಭಟನೆ ಎಲ್ಲಿಯೂ ಶಾಂತಿಯನ್ನು ಕದಡುವ ಕ್ರಾಂತಿಕಾರಿ ಬೆಳವಣಿಗೆಯಾಗಿಲ್ಲ ಎಂಬುದು ವಿಶೇಷವಾಗಿ ಕಂಡುಬರುತ್ತದೆ. ಅದು

ನಿಮ್ಮಂತೆಯೆ ನಾ ಹಾಡಲು ಬರದಿರೆ
ಪಾಮರ ಗೋಪನ ಮನ್ನಿಸಿರೆ!
ನಿಮ್ಮೆಲ್ಲರ ಶಿಷ್ಯನು ನಾ, ನಮಿಸುವೆ;
ಆಶೀರ್ವಾದವ ಬೇಡುವೆನು
ನಿಮ್ಮಗಳೆಲ್ಲರ ಹರಕೆಯ ಬಲವಿರೆ
ಚೆನ್ನಾಗಿಯೆ ನಾ ಹಾಡುವೆನು!
(ಗೊಲ್ಲನ ಬಿನ್ನಹ. ಕೊಳಲು)

ಕಾಡಿನ ಕೊಳಲಿದು, ಕಾಡ ಕವಿಯು ನಾ,
ನಾಡಿನ ಜನರೊಲಿದಾಲಿಪುದು.
ಬೃಂದೆಯ ನಂದನ ಕಂದನೆ ಬಂದು
ಗೊಲ್ಲನ ಕೊಳಲಲಿ ನಿಂದಿಹನೆಂದು
ಭಾವಿಸಿ ಮನ್ನಿಸಿ ಲಾಲಿಪುದು.

(ಗೊಲ್ಲನ ಬಿನ್ನಹ)

ಇಲ್ಲಿ ಕಾಣುವ ಸಾಲುಗಳಾದ ನಿಮ್ಮಂತೆಯೆ ನಾ ಹಾಡಲು ಬರದಿರೆ, ಪಾಮರ ಗೋಪನ ಮನ್ನಿಸಿರಿ! ಎಂಬುವುದು ಕುವೆಂಪುರವರ ಮನದ ಆಳದಲ್ಲಿ ಅಡಗಿರುವ ಅಸಹಾಯಕತೆಯ ಹೊರಗಿನ ಸಮಾಜದ ಚಿತ್ರಣವನ್ನು ನೀಡುತ್ತದೆ. ಅಂದರೆ ಈ ಕವನಗಳ

ಮೂಲಕ ಕಾಣುವ ಕವಿಯ ಹತಾಶಭಾವ ಸಮಾಜದಲ್ಲಿ ನೆಲೆಸಿದ್ದ ವರ್ಗಪರ ನಿಲುವನ್ನು ಧ್ವನಿಸುತ್ತದೆ. ಅದು ಮಲೆನಾಡಿನ ಕಾಡಿನ ಅಪ್ರತಿಷ್ಠಿತ ಸಾಮಾಜಿಕ ಸ್ತರಕ್ಕೆ ಸೇರಿದವರಾದರೂ ಅಂದಿನ ಸಮಯಕ್ಕೆ ಅಕ್ಷರ ಕಲಿಯುವುದು ಒಂದು ದೊಡ್ಡ ಸವಾಲಾಗಿದ್ದರೂ ಸಹ ಕುವೆಂಪು ಅದನ್ನು ಮೀರಿ ಸೃಜನಶೀಲತೆಯ ಉತ್ಕಟತೆಯನ್ನು ಪಡೆದವರು. ಆದ್ದರಿಂದ ಕುವೆಂಪು ಸಾಮಾಜಿಕ ಸಮಸ್ಯೆಯಾದ ಮತ, ಧರ್ಮಗಳ ಶೋಷಣೆಯನ್ನು ತಿರಸ್ಕರಿಸುತ್ತಾರೆ. ಆ ಮೂಲಕವಾಗಿಯೇ ಸಂಸ್ಕೃತಿಯಲ್ಲಿ ಬೆರೆತು ಕವನಗಳ ಮೂಲಕ ಸಮಸ್ಯೆಯ ಸ್ಥಿತಿಯನ್ನು ತೆರೆದಿಡುತ್ತಾ ಅದನ್ನು ನಿವಾರಿಸುವ ಪ್ರಯತ್ನ ಮಾಡಿದ್ದಾರೆ. ಇವುಗಳ ಹಿಂದೆ ಪ್ರೇರಣೆ ನೀಡಿದ ಅಂಶಗಳೆಂದರೆ ಅವರ "ಬಾಲ್ಯ ಮತ್ತು ಹದಿವಯಸ್ಸು ಮುಖ್ಯವಾಗಿ ಕಳೆದದ್ದು ಮಲೆನಾಡಿನಲ್ಲಿ; ಈ ಪರಿಸರದಿಂದ ಪ್ರಾಪ್ತವಾದ ವಿಶಿಷ್ಟ ಅನುಭವಗಳೊಂದಿಗೆ , ಮುಂದೆ ಬೌದ್ಧಿಕವಾಗಿ ಅವರ ಮೇಲೆ ಆದ ಪ್ರಭಾವಗಳೆಂದರೆ ವೈದಿಕ ಧರ್ಮದ ಶ್ರೇಷ್ಠಕೃತಿಗಳಾದ ಉಪನಿಷತ್ತುಗಳು; ರಾಮಕೃಷ್ಣ ಪರಮಹಂಸರ ಅನುಭಾವ, ಅರವಿಂದರ ಅತಿಮಾನಸಯೋಗ; ಜೊತೆಗೆ ಪಾಶ್ಚಾತ್ಯ ತತ್ವಶಾಸ್ತ್ರ ಮತ್ತು ವೈಜ್ಞಾನಿಕ ದೃಷ್ಟಿ".[೨] ಎಂದು ಕಾಣುತ್ತದೆ.

ಆದರೂ ಸಹ ಕುವೆಂಪುರವರಲ್ಲಿ ಕಾಣುವುದು ಸಮಾನತೆಯನ್ನು ಕಟ್ಟುವ ಮನೋಧರ್ಮವೇ ಆಗಿದೆ. ಅದನ್ನು ಕುವೆಂಪುರವರು "ನಾನು ಯಾವ ಜಾತಿಯ ವಿರುದ್ಧವಾಗಿ ಅಥವಾ ದ್ವೇಷದಿಂದ ಯಾವ ಮಾತನ್ನು ಆಡಲಾರೆ. ಏಕೆಂದರೆ ನನಗೆ ಯಾವ ಜಾತಿಯೂ ಇಲ್ಲ. ಆದ್ದರಿಂದ ಜಾತಿದ್ವೇಷವೂ ಇಲ್ಲ. ಆದರೆ ಇಲ್ಲಿ ಒಂದು ಆಗುತ್ತದೆ. ಪುರೋಹಿತಶಾಹಿಯ ವಿಚಾರವಾಗಿ ಮಾತನಾಡುವಾಗ ನಾನು ಯಾವುದಾದರೂ ಒಂದು ಜಾತಿಯನ್ನು ನಿರ್ದೇಶಿಸುತ್ತಿದ್ದೇನೆ ಎಂದು ಭಾವಿಸಬಾರದು. ಅದು ಅನೇಕ ಮತಗಳಲ್ಲಿರುವ ಆ ವರ್ಗದ ಜನಕ್ಕೆ ಅನ್ವಯವಾಗುತ್ತದೆ. ಹಾಗೆಯೇ ನನ್ನ ಜೀವನ ದೃಷ್ಟಿ ಒಂದು ರೀತಿಯಲ್ಲಿ ಸಮಾನತಾವಾದಿಯ ದೃಷ್ಟಿ. ನೀವು ಸಮಾಜವಾದಿ, ಸಮತಾವಾದಿ ಎಂದೆಲ್ಲಾ ವ್ಯಾಖ್ಯಾನ ಮಾಡಬಹುದು. ಆದರೆ ನಾನು ಸಮಾನತಾವಾದಿ ಆದ್ದರಿಂದ ನಾನು ಮಾಡುವ ಟೀಕೆ, ಖಂಡನೆ, ಶ್ಲಾಘನೆ, ಪ್ರಶಂಸೆ ಏನಿದ್ದರೂ ಅವು ಈ ಸಮಾನತಾವಾದಿಯ ದೃಷ್ಟಿಯಿಂದ ಹೊಮ್ಮುತ್ತವೆಯೇ ಹೊರತು ಯಾವ ಜಾತಿದ್ವೇಷದಿಂದಾಗಲಿ ಹೊಮ್ಮುವುದಿಲ್ಲ"[೩] ಎಂದು ಹೇಳಿದ್ದಾರೆ.

ಈ ಒಂದು ದೃಷ್ಟಿಕೋನದಿಂದ ಕುವೆಂಪು ತಮ್ಮ ಕವನಗಳ ಮೂಲಕ ಸಮಾಜದಲ್ಲಿ ದೇವರು, ದೇವಾಲಯ, ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಮೌಢ್ಯತೆ, ನಂಬಿಕೆಯನ್ನು ತಿರಸ್ಕರಿಸುವುದನ್ನು ಕಾಣಬಹುದು. ಆದ್ದರಿಂದ ಕುವೆಂಪುರವರು ಪ್ರಕೃತಿಯ ಸೌಂದರ್ಯದಲ್ಲಿ ದೇವರನ್ನು ಪರಿಭಾವಿಸುತ್ತಾರೆ.

ಯಾವ ಗುಡಿ
ಮಿಗಿಲು ಈ ಭುವನ ದೇವಾಲಯಕೆ? ಮೇಣಾವ
ವಿಗ್ರಹಂ ಮೀರಿರುವುದೀ ಚೈತ್ರ ಪಂಚಮಿಯ
ಪುಣ್ಯ ಪ್ರಭಾತದಲಿ, ದೂರದ ದಿಗಂತದಿಂ
ಪ್ರತ್ಯಕ್ಷವಾಗಿರುವ ಭವ್ಯಸುಂದರ ದಿವ್ಯ
ಸೂರ್ಯದೇವನಿಗೆ? ಮೇಣಾವುದಾರಾಧನೆಯ
ಉಪಮಾನವೀ ನಿರುಪಮ ಕಲಾ ಉಪಾಸನೆಗೆ?
ಈ ಅನುಭವದೊಳಿಲ್ಲದಾನಂದಮೂರ್ತಿಯಾ
ಪರಮಾತ್ಮನಿನ್ನಾವ ಪೂಜೆ ಜಪತಪಗಳಲಿ
ದೊರೆಕೊಳ್ಳುವಂ?

(ಪ್ರಕೃತಿ ಉಪಾಸನೆ)

ಎಂದು ಹೇಳುತ್ತಾ ಲೌಕಿಕವಾಗಿ ಮಾನವ ನಿರ್ಮಿತ ದೇವಾಲಯವನ್ನು ನಿರಾಕರಿಸುವ ಕುವೆಂಪು ಅದಕ್ಕೆ ಬದಲಾಗಿ ನಿಸರ್ಗ ಪ್ರೀತಿ ಮತ್ತು ನಿಸರ್ಗದ ಆರಾಧನೆಯನ್ನು ಸೂಚಿಸಿದ್ದಾರೆ. ಆದರೂ ಸಹ ನಂಬಿಕೆ, ಆಚಾರ, ವಿಚಾರಗಳ ಮೂಲಕ ಸಮಾಜದ ಮೇಲೆ ದಾಳಿ ಹಿಡುವ ಧರ್ಮವನ್ನು ಕುವೆಂಪು ಸದ್ದಿಲ್ಲದೆ ತಿರಸ್ಕರಿಸುತ್ತಾ ಸೃಷ್ಟಿ ಕರ್ತನನ್ನು ಸೃಷ್ಟಿಯಲ್ಲೇ ಕಾಣುವಂತೆ ತಮ್ಮ ಕವನದಲ್ಲಿ ತಿಳಿಸಿದ್ದಾರೆ.

ಇಂತಹ ಸುಂದರ ಪ್ರಾತಃಕಾಲದಿ
ಜೀವಿಸುವುದಕಿಂತಲು ಬೇರೆಯ ಗುರಿ
ಜೀವಕೆ ಬೇಕಿಲ್ಲ:
ಚಿರಸೌಂದರ್ಯದ ಸಂಪದವಿದ್ದರೆ

ಧರ್ಮಕೆ ಚ್ಯುತಿಯಿಲ್ಲ.
ಮತಿಯಿಲ್ಲ;
ರಸಾನುಭೂತಿಯ ರಸಪಥವಲ್ಲದೆ
ಸತ್ಯಕೆ ಗತಿಯಿಲ್ಲ!

(ಇಂತಹ ಸುಂದರ ಪ್ರಾತಃಕಾಲದಿ)

ಮುಂದೆ ತಮ್ಮ ಕವನಗಳ ಮೂಲಕ ಗಂಟೆ, ಜಾಗಟೆ, ಕರ್ಪೂರದಾರತಿಗಳನ್ನು ತಿರಸ್ಕರಿಸುತ್ತಾರೆ. ಅದಕ್ಕೆ ಕಾರಣ ಈ ಎಲ್ಲಾ ಅಂಶಗಳು ಧರ್ಮದ ಸಂಕೇತವಾಗಿ ಕಾಣುವ ಸಂಗತಿ ಇರಬಹುದು. ಆದ್ದರಿಂದ ಕುವೆಂಪು ಕಲೆಯೆಂಬ ಬಲೆಯನ್ನು ಪ್ರವೇಶ ಮಾಡುವಂತೆ ಮತ್ತು ಅಲ್ಲಿನ ಸೌಂದರ್ಯದ ಮೂಲಕ ಆನಂದವನ್ನು ಪಡೆಯುವಂತೆ ಸೂಚಿಸುತ್ತಾರೆ. ಅದು ಕಲೆ ಭಾವೋಪಯೋಗಿ ಮಾತ್ರವಲ್ಲ ಲೋಕೋಪಯೋಗಿ ಕೂಡ ಎನ್ನುವಂತೆ

ಬಾಗಿಲೊಳು ಕೈಮುಗಿದು ಒಳಗೆ ಬಾ, ಯಾತ್ರಿಕನೆ,
ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು!
ಕಂಬನಿಯ ಮಾಲೆಯನು ಎದೆಯ ಬಟ್ಟಲೊಳಿಟ್ಟು
ಧನ್ಯತೆಯ ಕುಸುಮಗಳನರ್ಪಿಸಿಲ್ಲಿ.
ಗಂಟೆಗಳ ದನಿಯಿಲ್ಲ, ಜಾಗಟೆಗಳಿಲ್ಲಿಲ್ಲ:
ಕರ್ಪೂರದಾರತಿಯ ಜ್ಯೋತಿಯಿಲ್ಲ.
ಭಗವಂತನಾನಂದ ರೂಪುಗೊಂಡಿಹುದಿಲ್ಲಿ:
ರಸಿಕತೆಯ ಕಡಲುಕ್ಕಿ ಹರಿವುದಿಲ್ಲಿ!

(ಸೋಮನಾಥಪುರದ ದೇವಾಲಯ, ಕೊಳಲು)

ಕೇವಲ ಧರ್ಮ, ದೇವಾಲಯಗಳನ್ನೇ ವೈಚಾರಿಕತೆಯ ದೃಷ್ಟಿಯಿಂದ ಕೊನೆ ಮಾಡದೆ ಸಮಕಾಲೀನ ಸಮಾಜಕ್ಕೆ ಅಗತ್ಯವಾದ ಸಾಮಾಜಿಕ ಜಾಗೃತಿಯನ್ನು ಸಹ ಕವನಗಳಲ್ಲಿ ಮೂಡಿಸಿದ್ದಾರೆ. ಯಾವುದೇ ಒಂದು ಸಮಾಜವು ಯಾವ ವಿಧವಾದ ತೊಂದರೆಗಳಿಲ್ಲದ ಅಭಿವೃದ್ಧಿ ಮಂತ್ರವನ್ನು ಜಪಿಸಬೇಕಾದರೆ ಅಲ್ಲಿನ ಯುವ ಸಮುದಾಯ

ಅತ್ಯವಶ್ಯಕವಾಗಿರುತ್ತದೆ. ಅಂತಹ ಯುವ ಶಕ್ತಿಯನ್ನು ಗುರುತಿಸಿರುವ ಕುವೆಂಪು ಒಂದು ಹಂತದಲ್ಲಿ ವಿವೇಕಾನಂದರ ಪ್ರಭಾವಕ್ಕೆ ಒಳಗಾಗಿದ್ದರೂ ಎಂದು ತಿಳಿಯುತ್ತದೆ. ಆದ್ದರಿಂದ ಕುವೆಂಪು ತಮ್ಮ ವಿಚಾರ ಚರ್ಚೆಯಲ್ಲಿ ಯುವಕರು ನಿರಂಕುಶಮತಿಗಳಾಗಬೇಕು ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಈ ಅಂಶದ ಹಿಂದೆ ಇರುವ ಭಾವನೆ ಎಂದರೆ ಕುವೆಂಪು ಒಂದು ಕಡೆ ಈ ರೀತಿಯಲ್ಲಿ ಪ್ರಾರಂಭಿಸುತ್ತಾರೆ. "ನಿಮ್ಮ ನಿಮ್ಮ ಹೃದಯಗಳನ್ನೇ ಶೋಧಿಸಿಕೊಳ್ಳಬೇಕು. ಶತಮಾನಗಳ ಬೋಧನೆ ಮತ್ತು ನಂಬಿಕೆಗಳ ಫಲವಾಗಿ ನಿಮ್ಮ ವಿಚಾರ ಶಕ್ತಿಯೇ ಕುಂಠಿತವಾಗಿ ಹೋಗಿದೆ. ವಿಜ್ಞಾನ ಸಂಪನ್ನವಾದ ಪಾಶ್ಚಾತ್ಯ ನಾಗರೀಕತೆ ನಮ್ಮನ್ನು ಇನ್ನೂರು ವರ್ಷ ಆಳಿದರೂ ಅದರ ವಿಜ್ಞಾನ ಸೃಷ್ಟಿಸಿದ ಯಂತ್ರನಾಗರಿಕತೆಯನ್ನು ಅನುಕರಿಸಿದ್ದೇವೆ ಹೊರತು ಅದರ ವೈಜ್ಞಾನಿಕ ದೃಷ್ಟಿ ನಮ್ಮದಾಗಲಿಲ್ಲ; ಮತ್ತು ಆ ವೈಜ್ಞಾನಿಕ ದೃಷ್ಟಿಗೂ ತಾಯಿಬೇರಾದ ವೈಚಾರಿಕತೆಯನ್ನೂ ನಾವು ಮೈಗೂಡಿಸಿಕೊಳ್ಳಲಿಲ್ಲ. ಇನ್ನೂ ಮುಂದಾದರೂ ನಾವು ವೈಜ್ಞಾನಿಕದ ದೃಷ್ಟಿಯ ಮತ್ತು ವೈಚಾರಿಕ ಬುದ್ಧಿಯ ನೆರವಿನಿಂದ ನಮ್ಮ ನಾಡಿನ ರಾಜಕೀಯ ಸಾಮಾಜಿಕ ಮತ್ತು ಮತಧಾರ್ಮಿಕ ರಂಗಗಳನ್ನು ಪರಿಶೋಧಿಸದಿದ್ದರೆ ನಮಗೆ ಕೇಡು ತಪ್ಪದು"[4] ಆದ್ದರಿಂದ ತಮ್ಮ ಕವನಗಳಲ್ಲಿ ಯುವ ಜನಾಂಗವನ್ನು ಎಚ್ಚರಿಸುವ ಕೆಲಸವನ್ನು ಮಾಡುತ್ತಾರೆ. ಆದರೆ ಪ್ರಾರಂಭದಲ್ಲಿ ಸಮಾಜದ ಯುವ ಪೀಳಿಗೆಯು ಚೇತನಹೀನರಾಗಿರುವ ಅಂಶವನ್ನು ಗುರುತಿಸುತ್ತಾರೆ.

ಎಲ್ಲೆಲ್ಲಿಯು ಯಾರಲ್ಲಿಯು
ಉದ್ವೇಗವೆ ಇಲ್ಲ;
ಸೂಸುತ್ತಿದೆ ಹರಿಯುತ್ತಿದೆ
ತುಂಬುತ್ತಿದೆ ತುಳುಕುತ್ತಿದೆ
ಬಾಳಿನ ಜೇನ್ಬೆಲ್ಲ!

(ಆಕಾಶದ ಹೆಬ್ಬಯಲಿನಲಿ)

ಮುಂದೆ ಆ ಚೈತನ್ಯವನ್ನು ಪಡೆಯಲು ಪ್ರಕೃತಿಯ ಸೂರ್ಯೋದಯದ ಚೈತನ್ಯವನ್ನು ಗಮನಿಸು ಎನ್ನುವ ರೀತಿಯಲ್ಲೇ ಚೈತನ್ಯವನ್ನು ಪಡೆಯುವಂತೆ ಸೂಚಿಸುತ್ತಾ ಜಡತೆಯನ್ನು ತ್ಯಜಿಸುವಂತೆ ಕವನದ ಮೂಲಕ ಎಚ್ಚರಿಸುತ್ತಾರೆ.

ಮೇಲೇಳು, ಸೋದರನೆ.
ಗೆಲುವಿನಿಂದಿದಿರುಗೊಳ್ ಉದಯಿಸುವ ಸೂರ್ಯನಂ,
ಗಿರಿಯ ನೆತ್ತಿಯ ಮೇಲೆ: ನಿನ್ನಮಲ ಹೃದಯದಲಿ
ನಾಳನಾಳಗಳಲ್ಲಿ ನೆತ್ತರಾಡಲಿ ಚಿಮ್ಮಿ
ಬಿಸಿಯಾಗಿ; ಎದೆಯುಬ್ಬೆ ಶ್ವಾಸಕೋಶವ ತುಂಬಿ
ಹೊರಬರಲು ತಂಪಾದ ನಿರ್ಮಲ ಸಮೀರಣಂ;
ಕಿವಿಹೊಗಲಿ ಹಕ್ಕಿಯುಲಿ; ಹೂಗಂಪು ಮೂಗಿನಲಿ
ಸಂಭೃತ ಸುವಾಸನೆಯ ನಾಕಮಂ ನಿರ್ಮಿಸಲಿ;
(ಪ್ರಕೃತಿ ಉಪಾಸನೆ)

ಈ ಪದ್ಯದ ಭಾಗದಲ್ಲಿ ಬರುವ 'ಮೇಲೇಳು ಸೋದರನೆ, ಗೆಲುವಿನಿಂದಿದಿರುಗೊಳ್ ಉದಯಿಸುವ ಸೂರ್ಯನಂ, ನಾಳನಾಳಗಳಲ್ಲಿ ನೆತ್ತರಾಡಲಿ ಚಿಮ್ಮಿ' ಎಂದು ಎಚ್ಚರಿಸುವ ರೀತಿ ಎಂತವರ ಮನಸ್ಸಿನಲ್ಲಿಯೂ ಚೈತನ್ಯವನ್ನು ಉಂಟುಮಾಡುವ ಶಕ್ತಿಯನ್ನು ಹೊಂದಿದೆ. ಅಂದರೆ ಸಮಾಜದಲ್ಲಿ ಜನ ಸಮುದಾಯ ಎಂಬುದು ಏನನ್ನಾದರೂ ಸಾಧಿಸುವ ಸರ್ವೋತ್ಕೃಷ್ಟವಾದ ಆಯುಧ ಎಂದು ತಿಳಿದಿರುವುದು ಮನಮುಟ್ಟುತ್ತದೆ. ನಂತರ ಪ್ರಕೃತಿ ಸೌಂದರ್ಯದ ಅನುಭವ ಮತ್ತು ರಸಾನಂದ ತನಗೆ ಮಾತ್ರ ಸೀಮಿತವಾಗಬಾರದು. ಅದು ಇತರರೂ ಕಂಡು ಆನಂದವನ್ನು ಪಡೆಯಲಿ ಎಂದು ತಿಳಿಸುತ್ತಲೇ ಈ ಒಂದು ದೃಷ್ಟಿಕೋನ ಸಂಪೂರ್ಣವಾಗಿ ಜನಪರವಾಗುತ್ತದೆ. ಇಲ್ಲಿಯೂ ಕೂಡ ಕುವೆಂಪುರವರ ಪರಿಸರ ಪ್ರೇಮ, ಪ್ರಕೃತಿಯ ಬಗೆಗಿನ ಕಾಳಜಿ ಗಮನಾರ್ಹವಾದರೂ ಸಹ ವೈಚಾರಿಕತೆಗೆ ಮತ್ತು ಮನಸ್ಸನ್ನು ಸ್ಫೂರ್ತಿ, ಉತ್ಸಾಹಗಳು ಹೊಮ್ಮಿಸುವ ರೀತಿಗೆ ಎಲ್ಲಯೂ ಕೊರತೆಯಾಗಿಲ್ಲ. ಅಂತಹ ಪದ್ಯವನ್ನು ಗಮನಿಸುವುದಾದರೆ:

ಆಃ! ನಿಂತು ನೋಡಿಲ್ಲಿ:
ನೂರು ಋಷಿಗಳ ಬೋಧನೆಯ ಸಾರವಿಹುದಿಲ್ಲಿ
ನೂರು ವೈರಾಗಿಗಳ ಸಂಸಾರವಿಹುದಿಲ್ಲಿ;
ಬುದ್ಧಿಯರಿಯದ ಸಿದ್ಧಿ ಭಾವಗೋಚರವಿಲ್ಲಿ!

ವ್ಯಕ್ತಿತ್ವವೇ ಜ್ವಾಲೆಯಾಗುರಿಯುವುದು ಇಲ್ಲಿ!
ಕೋಟಿ ಮೈಲಿಗಳಾಚೆ ಕಾಶಿಯಾತ್ರೆಗಳೇಕೆ?
ಇಲ್ಲಿಗೈತರು, ಯಾತ್ರಿಕನೆ ಇದುವೆ ತರುಕಾಶಿ!
ರಸತೀರ್ಥದಲಿ ಮಿಂದವಗೆ ಭವದ ಭಯವೇಕೆ!
ಪುಣ್ಯದಾಲಯ ಪೃಥ್ವಿ! ಸ್ವರ್ಗವದು ಪರದೇಶಿ!

(ಕೆಂದಳಿರು)

ಇಲ್ಲಿ ಪರ್ಯಾಯ ಸೌಂದರ್ಯ ಧರ್ಮದ ಜೊತೆಗೆ ಸಾಂಸ್ಥಿಕ ಧರ್ಮಗಳು ಒಡ್ಡುತ್ತಿದ್ದ ಪರಲೋಕ – ಸ್ವರ್ಗಲೋಕ ಮತ್ತು ತೀರ್ಥಯಾತ್ರೆಗಳ ಕಲ್ಪನೆಯನ್ನು ನಿರಾಕರಿಸುತ್ತಾ ಸ್ವರ್ಗ ಮತ್ತು ವೈಭವ, ಕಾಶಿ ಮತ್ತು ತೀರ್ಥಕ್ಷೇತ್ರಗಳು ನಮ್ಮ ಸುತ್ತಲಿನ ಪ್ರಕೃತಿಯಲ್ಲೇ ಪ್ರತ್ಯಕ್ಷವಾಗುತ್ತದೆ ಎಂದು ವರ್ಣಿಸುತ್ತಾರೆ. ಇದೇ ರೀತಿಯ ಮಹತ್ ಅನುಭವದಲ್ಲಿಯೇ ಕವನಗಳು ಮನುಜಮತದಿಂದ ವಿಶ್ವಮಾನವಮಟ್ಟಕ್ಕೆ ಏರುವ ಗುರಿಯ ಕಡೆಗೆ ಕರೆದೊಯ್ಯುತ್ತದೆ. ಇದು ಶ್ರೀಸಾಮಾನ್ಯನ ಮೇಲಿನ ಕುವೆಂಪುರವರ ಅನನ್ಯ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಅದು ಹೃದಯ ದ್ವಾರವನಕೆ ತೆರೆ ತೆರೆ! ನವ ಜೀವನ ರಸ ಬಾಳಿಗೆ ಬರಲಿ ಎಂಬುದು ವಿಶ್ವಮಾನವ ಸಂದೇಶದ ಪರಿಕಲ್ಪನೆಯನ್ನು ವ್ಯಕ್ತಪಡಿಸುತ್ತದೆ. ಒಟ್ಟಾರೆಯಾಗಿ ಕವಿ ಸಮಾನತೆಯನ್ನು ಮತ್ತು ಜೀವನದ ಸರ್ವೋದಯವನ್ನು ನಿರೀಕ್ಷಿಸುತ್ತಿದ್ದಾರೆ. ಈ ಕುರಿತ ಕವನ

ಗೀತೆಯ ಘೋಷದಿ ನವ ಅತಿಥಿಯ ಕರೆ;
ಹೃದಯ ದ್ವಾರವನಗಲಕೆ ತೆರೆ, ತೆರೆ!
ನವ ಜೀವನ ರಸ ಬಾಳಿಗೆ ಬರಲಿ,
ನೂತನ ಸಾಹವೈತರಲಿ!

(ಯುಗಾದಿ)

ಕುವೆಂಪು ಸಾಹಿತ್ಯ ಮೂಲದ್ರವ್ಯವೇ ನಿಸರ್ಗಾನುಭವದಿಂದ ತುಂಬಿದ್ದು. ಆದ್ದರಿಂದ ಅಲ್ಲಿ ಕಾಣುವ ಪ್ರತಿಯೊಂದು ಅಂಶವೂ ಸಹ ಅರಣ್ಯ ಸಂಸ್ಕೃತಿಯಿಂದ ಪ್ರತಿನಿಧಿತವಾದದ್ದು.

ಆದರೂ ಸಹ ಕುವೆಂಪುರವರ ಕವನಗಳಲ್ಲಿ ನಾಗರೀಕತೆ ಮತ್ತು ಆಧುನಿಕತೆ, ನಿಸರ್ಗ ಮತ್ತು ನಗರ ಸಂಸ್ಕೃತಿಗಳ ನಡುವೆ ಮುಖಾಮುಖಿಯಾಗುವುದನ್ನು ಗಮನಿಸಬಹುದು.

ನಗರ ನಾಗರಿಕತೆಯ ಗಲಿಬಿಲಿ ಅಲ್ಲಿ ಸೋಂಕದು, ಸುಳಿಯದು.
ದೇಶದೇಶದ ವೈರಯುದ್ಧದ ಸುದ್ದಿಯೊಂದೂ ತಿಳಿಯದು.
'ತಿಳಿಯದಿರುವುದೆ ತಿಳಿವು' ಎಂಬುವ ನನ್ನಿ ಆಯೆಡೆ ತಿಳಿವುದು.
'ತಿಳಿಯೆ ನೋವಿರೆ, ತಿಳಿಯದಿರುವುದೆ ಜಾಣ್ಮೆ' ಎಂಬರಿವುಳಿವುದು!
(ಹೋಗುವೆನು ನಾ)

ಈ ಕವನದ ಮೂಲಕ ನಗರ ನಾಗರೀಕತೆಯ ವಿರುದ್ಧ ಮತ್ತು ಜಾಗತೀಕರಣದ ಹಿನ್ನೆಲೆಯಲ್ಲಿ ದೇಶ ದೇಶಗಳ ನಡುವೆ ಉಂಟಾಗುತ್ತಿರುವ ಘರ್ಷಣೆಯ ಚಿತ್ರಣವನ್ನು ನೀಡುತ್ತಾರೆ. ಅದು "ವಿಜ್ಞಾನಶಾಸ್ತ್ರಜ್ಞರು ಮಾಡುತ್ತಿರುವ ಕೆಲಸವು ದುಶ್ಯಾಸನನ ಕೆಲಸದಂತೆಯೆ ಇದೆ. ಪ್ರಕೃತಿ ಎಂಬ ದ್ರೌಪದಿ ವಸ್ತ್ರಾಪಹರಣದಿಂದ ಆಕೆಯ ರಹಸ್ಯವನ್ನರಿಯ ಬೇಕೆಂದಿರುತ್ತಾರೆ. ಆದರೆ ಪರಬ್ರಹ್ಮನಾದ ಶ್ರೀಕೃಷ್ಣನು ದ್ರೌಪದಿಯ ವಸ್ತ್ರವು ಅನಂತವಾಗುವಂತೆ ಮಾಡಿರುತ್ತಾನೆ. ದುಶ್ಯಾನನು ಎಷ್ಟೇ ಪದರಗಳನ್ನು ಎಳೆದರೂ ಇನ್ನೂ ಅಸಂಖ್ಯ ಪದರಗಳಿದ್ದೇ ಇರುತ್ತದೆ. ಪರಮಾತ್ಮನು ಕೃಪಾನಿಧಿ ಎಂದೇ ಹೇಳಬೇಕು. ಎಲ್ಲಿಯಾದರೂ ದ್ರೌಪದಿಯ ಸೀರೆಯು ಅನಂತವಾಗದಿದ್ದರೆ ಮಹಾಕಾಳಿಯ ನಗ್ನ ಭೀಕರಾಕೃತಿಯನ್ನು ನೋಡಿ ನಾಶಹೊಂದುತ್ತಿದ್ದರು. ಪರಮಾತ್ಮನು ಪ್ರಕೃತಿಯ ಮೂಲವಾದ ಮತ್ತು ಗೂಢವಾದ ಆಕಾರವು ಅತ್ಯಂತ ಕಠೋರವಾಗಿಯೂ ಭೀಕಾರವಾಗಿಯೂ ನರರಿಂದ ನೋಡಲಸದಳವಾಗಿಯೂ ಇರುವುದರಿಂದ ಅದನ್ನು ರಹಸ್ಯದಲ್ಲಿಟ್ಟಿದ್ದಾನೆ. ಅದು ನಮ್ಮ ಸುಕೃತಕ್ಕೆಂದೇ ಹೇಳಬೇಕು. ಜಯದಿಂದಾಗುವ ಅನಾಹುತವನ್ನರಿಯದೆ ವಿಜ್ಞಾನಶಾಸ್ತ್ರಜ್ಞರನ್ನು ಹುರಿದುಂಬಿಸುತ್ತಿರುವ ಕೌರವರಂತಹ ಅಜ್ಞಾನಿಗಳನ್ನೇನೆಂದು ಕರೆಯಬೇಕು? ಆ ಶಾಸ್ತ್ರಜ್ಞರಲ್ಲಿಯೇ ಭೀಷ್ಮ, ದ್ರೋಣ ಮೊದಲಾದವರಂತೆ ಹಲವರು ಬುದ್ಧಿವಾದವನ್ನು ಹೇಳುತ್ತಿರುವವರು. ಅವರ ನುಡಿಗಳನ್ನು ಲಕ್ಷ್ಯಕ್ಕೆ ತಾರದೆ ವಸ್ತ್ರಾಪಹರಣ ಕಾರ್ಯವನ್ನು ಮಾಡುತ್ತಲೇ ಇರುವ ಇವರಿಗೆ ಕೌರವರ ಗತಿಯೇ ಪ್ರಾಪ್ತವಾಗದಿರದು. ಹಿಂದಿನ ಘೋರ ಯುದ್ದದಲ್ಲಿ ಭೀಮನ ಗದೆಯ ಮೊದಲನೆಯ ಘಾತವು ಬಿದ್ದೇ ಇರುವುದು. ಇನ್ನಾದರೂ ಎಚ್ಚರಗೊಳ್ಳುವರೋ ಏನೋ

ನೋಡಬೇಕು".[8] ಎಂಬುದನ್ನು ಒಳಗೊಂಡಿದೆ. ಈ ಅಂಶವು ನಿಸರ್ಗದ ಹಿನ್ನೆಲೆಯಲ್ಲಿ ಬಂದಿದ್ದರೂ ಸಹ ಯುದ್ಧ, ಹಿಂಸೆಗೆ ಕವಿಯಲ್ಲಿ ತಿರಸ್ಕಾರಭಾವವಿರುವುದನ್ನು ಗಮನಿಸಬಹುದು. ಆದರೂ ಸಹ ಕುವೆಂಪುರವರು ಎಲ್ಲಿಯೂ, ಯಾವ ರೀತಿಯಲ್ಲಿಯೂ ವೈಜ್ಞಾಕತೆಯ ವೈಚಾರಿಕ ದೃಷ್ಟಿಕೋನವನ್ನು ತಿರಸ್ಕರಿಸಿಲ್ಲ ಎಂಬುದು ಮನಗಾಣುತ್ತದೆ.

ಮುಂದೆ ಕವನದ ಭಾಗಗಳಲ್ಲಿ ಸಮಾಜದ ಸ್ತರಗಳ ಪಂಗಡಗಳ ಮತ್ತು ಜಾತಿ ವ್ಯವಸ್ಥೆಯ ವಿರುದ್ಧ ತಮ್ಮ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಅಂದರೆ ಸಮಾಜದಲ್ಲಿ ಬೆಳೆದ ಜಾತಿಪದ್ಧತಿಯ ಅನಿಷ್ಟಗಳ ಕುರಿತು ಕುವೆಂಪುರವರಿಗೆ ಅದರ ನಿರ್ಮೂಲನೆಯ ಉತ್ಕಟ ಹಂಬಲವಿದೆ. ಆದ್ದರಿಂದ ಅದಕ್ಕೆ ಬದಲಾಗಿ ಪ್ರೀತಿ, ನೀತಿ, ಧರ್ಮವನ್ನು ಗುರುತಿಸುತ್ತಾರೆ. ಒಟ್ಟಾರೆಯಾಗಿ ನಿಸರ್ಗ ಸೌಂದರ್ಯದ ಕವನವಾಗಬಹುದಾಗಿದ್ದ ವಸ್ತುವಿನಲ್ಲಿ ನಮ್ಮ ಶ್ರೇಣೀಕೃತ ಸಮಾಜದ ಸಂಕಟವನ್ನು ಧ್ವನಿಸುತ್ತಾರೆ. ಅದು

ಅಲ್ಲಿ ಇಂತಿರಬೇಕು, ಇಂತಿರಬಾರದೆಂಬುವುದಿಲ್ಲವೈ;
ಅಲ್ಲಿ ಹೊರೆ ಹೊಣೆಯಿಲ್ಲ; ಶಾಸ್ತ್ರದ ವಿಧಿ ನಿಷೇಧಗಳಿಲ್ಲವೈ;
ಜಾತಿಗೀತಿಯ ವೇದಭೇದದ ಕಟ್ಟುಕಟ್ಟಳೆ ನಿಲ್ಲದೈ:
ಅಲ್ಲಿ ಪ್ರೀತಿಯೆ ನೀತಿ; ಧರ್ಮಕೆ ಬೇರೆ ಭೀತಿಯೆ ಸಲ್ಲದೈ!
(ಹೋಗುವೆನು ನಾ)

ಹೀಗೆ ಸಮಾಜವನ್ನು ಅಸ್ಥಿರಗೊಳಿಸುವ ಅಂಶಗಳಾದ ಜಾತಿ, ಶಾಸ್ತ್ರಗಳಿಂದ ಬೇಸರಗೊಂಡ ಕುವೆಂಪುರವರು ನಾಗರೀಕತೆಯ ಬದುಕನ್ನು ಬಿಟ್ಟು ಅರಣ್ಯ ಸಂಸ್ಕೃತಿಯಲ್ಲಿ ಒಂದಾಗುವ ಸ್ಥಿತಿಯನ್ನು ವ್ಯಕ್ತಪಡಿಸುತ್ತಾರೆ. ಅಂತಹ ಅಂಶವನ್ನು 'ಹೋಗುವೆನು ನಾ' ಕವನ ದೃಢಪಡಿಸುತ್ತದೆ.

ಹೋಗುವೆನು ನಾ ಹೋಗುವೆ ನಾ ನನ್ನ ಒಲುಮೆಯ ಗೂಡಿಗೆ;
ಮಲೆಯ ನಾಡಿಗೆ, ಮಳೆಯ ಬೀಡಿಗೆ. ಸಿರಿಯ ಚೆಲುವಿನ ರೂಢಿಗೆ.
ಬೇಸರಾಗಿದೆ ಬಯಲು, ಹೋಗುವೆ ಮಲೆಯ ಕಣಿವೆಯ ಕಾಡಿಗೆ:
ಹಸುರು ಸೊಂಪಿನ ಬಿಸಿಲು ತಂಪಿನ ಗಾನದಿಂಪಿನ ಕಾಡಿಗೆ!
(ಹೋಗುವೆನು ನಾ)

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕುವೆಂಪುರವರು ವೈಚಾರಿಕತೆಯನ್ನು ತಮ್ಮ ಕವನಗಳಲ್ಲಿ ವ್ಯಕ್ತಪಡಿಸುತ್ತಾರಾದರೂ ಅದು ಕೇವಲ ಸಮಾನತೆ, ಜಾಗೃತಿಗೆ ಸೀಮಿತವಾಗಿಲ್ಲ. ಇದರ ಜೊತೆಗೆ ಜೀವನೋತ್ಕರ್ಷಕ್ಕಾಗಿ, ಸರ್ವೋದಯಕ್ಕಾಗಿ ಚಿಂತಿಸುವ ಅಂಶವನ್ನು ಸಹ ಒಳಗೊಂಡಿದೆ. ಏಕೆಂದರೆ ಅರಣ್ಯ ಸಂಸ್ಕೃತಿಯಿಂದ ವ್ಯಕ್ತಿತ್ವವನ್ನು ಪಡೆದ ಕುವೆಂಪು ಆ ಸೌಂದರ್ಯದ ಆರಾಧನೆಯಲ್ಲೇ ಜೀವನವನ್ನು ಕಟ್ಟಿಕೊಳ್ಳುತ್ತಾರೆ. ಇದೇ ಅಂಶವನ್ನು ತಮ್ಮ ಕವನಗಳಲ್ಲಿಯೂ ವ್ಯಕ್ತಪಡಿಸುತ್ತಾರೆ.

ದನಕರುಗಳು ಬಯಲಲಿ ಮೇಯುತ 'ಇವೆ';
ಗಿರಿತರುಗಳು ಬದುಕನು ಸವಿಯುತ 'ಇವೆ';
ಅರಿವಾಸೆಯ ಮಾಯೆಗೆ ಬೀಳದೆ 'ಇವೆ';
ಇರುವಿಕೆಯಾನಂದದಿ ನಲಿಯುತ 'ಇವೆ';
'ಇವೆ';
ಇರುವಿಕೆಗಿಂತಲು ಹೆಚ್ಚಿನ ಗೋಜಿಗೆ
ಹೋಗದಿವೆ!
'ಅರಿವಾ' ಸೆಯೆ ಮಾಯಾ ಬಂಧ;
'ಇರು' ವುದೆ ಮುಕ್ತಿಯ ಆನಂದ!
'ಅರಿವಾ' ಸೆಯು ಬಿಡು; 'ಇರು' ವಾಸೆಯ ತೊಡು!
ಇಂತಹ ಸಮಯದಿ 'ಇರುವಿಕೆ' ಗಿಂತಲು
ಹೆಚ್ಚಿನ 'ಅರಿವಿ' ಲ್ಲ!
ಇಂತಹ ದಿವ್ಯಪ್ರಭಾತ ಕಾಲದಿ
ಜೀವಿಸುವುದಕಿಂತಲು ರಸಜೀವಿಗೆ
ಬೇರೆಯ ಗುರಿಯಿಲ್ಲ!

(ಇಂತಹ ಸುಂದರ ಪ್ರಾತಃಕಾಲದಿ)

ಈ ಪದ್ಯದ ಸಾಲುಗಳಲ್ಲಿ ಕಂಡು ಬರುವ ದನಕರುಗಳು ಬಯಲಲಿ ಮೇಯುತ, ಗಿರಿತರುಗಳು ಬದುಕನು ಸವಿಯುತ, ಅರಿವಾಸೆಯ ಮಾಯೆಗೆ ಬೀಳದೆ,

ಇರುವಿಕೆಯಾನಂದದಿ ನಲಿಯುತ 'ಇವೆ' 'ಇವೆ' ಎಂಬುದು ಇರುವುದರಲ್ಲೇ ಜೀವನ ಪ್ರೀತಿಯ, ಸಹಬಾಳ್ವೆಯ ಸವಿಯನ್ನು ಸವಿಯುವಂತೆ ಕವಿ ಎಚ್ಚರಿಸುತ್ತಾರೆ. ಒಟ್ಟಾರೆಯಾಗಿ "ಕುವೆಂಪು ಅವರು ನಿಸರ್ಗದಲ್ಲಿ ಮೈಮರೆತ ಕವಿತೆಗಳನ್ನೇ ಕೊಟ್ಟಿಲ್ಲ. ತನ್ಮಯತೆ ಮತ್ತು ಜಾಗೃತಾವಸ್ಥೆಯಗಳನ್ನು ಒಂದಾಗಿಸಿಕೊಂಡು ಹುಟ್ಟಿದ ಕವಿತೆಗಳು ಕುವೆಂಪು ಕಾವ್ಯದ ವೈಶಿಷ್ಟ್ಯ."[೬]

****

ಈ ಅಧ್ಯಾಯದ ಹಿನ್ನೆಲೆಯಲ್ಲಿ ಕೆಲವು ಅಂಶಗಳನ್ನು ಗುರುತಿಸುವುದಾದರೆ

೧. ಕುವೆಂಪುರವರು ತಮ್ಮ ಕಾವ್ಯಗಳ ಮೂಲಕ ಕೇವಲ ಪ್ರಕೃತಿಯ ಸೌಂದರ್ಯವನ್ನೇ ವರ್ಣಿಸದೆ ಅವುಗಳ ಜೊತೆಯಲ್ಲೆ ವೈಚಾರಿಕತೆಯನ್ನು ಒಳಗು ಮಾಡಿದ್ದಾರೆ.

೨. ಹಳೆಯಶಾಸ್ತ್ರ, ಬೂಸಲು ಧರ್ಮ, ಕೇಡಿ ಜಗದ್ಗುರು, ಸ್ವಾರ್ಥಶೀಲ ಆಚಾರ್ಯ, ಜಾತಿಪದ್ದತಿ ಇವುಗಳನ್ನೆಲ್ಲ ತಿರಸ್ಕರಿಸುವ ಕುವೆಂಪು ಎಲ್ಲಿಯೂ ಶಾಂತಿ ಕದಡುವ ಬೆಂಕಿಯನ್ನು ಹೊತ್ತಿಸಿಲ್ಲ.

೩. ದೇವರು, ದೇವಾಲಯಗಳನ್ನು ತಿರಸ್ಕರಿಸುವ ಕವಿ ಪ್ರಕೃತಿಯಲ್ಲಿ ಅವುಗಳನ್ನು ಕಾಣುವಂತೆ ನಿರ್ದೇಶಿಸುತ್ತಾರೆ.

೪. ಕೇವಲ ಜಾತಿಪದ್ಧತಿ, ಬೂಸಲು ಧರ್ಮಗಳನ್ನೇ ತಿರಸ್ಕರಿಸುತ್ತಾ ಕೊನೆಮಾಡದೇ ತಮ್ಮ ಕವನಗಳಲ್ಲಿ ಸಾಮಾಜಿಕ ಜಾಗೃತಿಯನ್ನು ಸಹ ಮೂಡಿಸಿದ್ದಾರೆ.

೫. ಸಮಾಜದಲ್ಲಿ ಬದಲಾವಣೆಯನ್ನು ತರಬೇಕಾದರೆ ಯುವ ಜನಾಂಗ ಎಚ್ಚರವಾಗಬೇಕು ಎಂಬ ಸೂಚನೆಯನ್ನು ನೀಡುತ್ತದೆ.

೬. ನಗರ ನಾಗರೀಕತೆಯಿಂದ ಬೇಸರಗೊಂಡ ಕುವೆಂಪು ನಿಸರ್ಗದ ಕಡೆಗೆ ಚಲಿಸುವ ಭಾವನೆಯನ್ನು ಕಾಣಬಹುದು.

ಅಡಿಟಿಪ್ಪಣಿ

೧. ಕುವೆಂಪು ಪುನರಾಲೋಕನ: ಲೇ. ಜಿ.ಎಸ್.ಶಿವರುದ್ರಪ್ಪ
ಪುಟ ೧೧೮, ಪ್ರ ೨೦೦೫, ಅಂಕಿತ ಪುಸ್ತಕ, ಬೆಂಗಳೂರು

೨. ಶ್ರೀ ಕುವೆಂಪು: ಸಂ ಜಿ.ಎಸ್. ಶಿವರುದ್ರಪ್ಪ
ಪುಟ ೧೮೩, ಪ್ರ ೨೦೦೩, ಬೆಂಗಳೂರು ವಿಶ್ವವಿದ್ಯಾಲಯ

೩. ಕುವೆಂಪು ಸಮಗ್ರ ಗದ್ಯ: ಸಂಪುಟ ೦೨ ಸಂ. ಕೆ.ಸಿ.ಶಿವಾರೆಡ್ಡಿ
ಪುಟ. ೪೭೯, ಪ್ರ. ೨೦೦೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಕುವೆಂಪು ಸಮಗ್ರ ಗದ್ಯ: ಸಂಪುಟ ೦೨ ಸಂ. ಕೆ.ಸಿ.ಶಿವಾರೆಡ್ಡಿ
ಪುಟ. ೪೪೪, ಪ್ರ. ೨೦೦೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ಕುವೆಂಪು ಸಮಗ್ರ ಗದ್ಯ: ಸಂಪುಟ ೦೧ ಸಂ. ಕೆ.ಸಿ.ಶಿವಾರೆಡ್ಡಿ
ಪುಟ. ೫೮೨, ಪ್ರ. ೨೦೦೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ಸಹ್ಯಾದ್ರಿಯ ಸೂರ್ಯ: ಸಂ. ಚಕ್ಕೆರೆ ಶಿವಶಂಕರ್
ಪುಟ ೬೭, ಪ್ರ ೨೦೦೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಅಧ್ಯಾಯ: ಐದು

ಪಕ್ಷಿಕಾಶಿ ಕವನ ಸಂಕಲನದ ಹಿನ್ನೆಲೆಯಲ್ಲಿ ಕುವೆಂಪುರವರ ತಾತ್ವಿಕ ನಿಲುವು

ಕುವೆಂಪುರವರ ತಾತ್ವಿತೆಯ ಅಂಶಗಳನ್ನು ಪಕ್ಷಿಕಾಶಿ ಕವನ ಸಂಕಲನದ ಹಿನ್ನೆಲೆಯಲ್ಲಿ ಗುರುತಿಸುವುದು ಅಸಾಧ್ಯವಾದರೂ ಅಧ್ಯಯನದ ಪರಿಧಿಯಲ್ಲಿ ಕೆಲವು ಅಂಶಗಳು ಸ್ಪಷ್ಟವಾಗುತ್ತದೆ.

ಕುವೆಂಪುರವರು ಚಿಕ್ಕ ವಯಸ್ಸಿನಲ್ಲೇ ಪ್ರಕೃತಿಯ ವೈಚಿತ್ರ, ವೈಭವಗಳನ್ನು ಕಣ್‌ತುಂಬಿಸಿಕೊಂಡವರು. ನಂತರದಲ್ಲಿ ತಮ್ಮ ಕವಿ ಪ್ರತಿಭೆಯ ಮೂಲಕ ನಿಸರ್ಗವನ್ನು ಅದ್ಭುತವಾಗಿ ಸೆರೆಹಿಡಿದರು. ಆ ಸಮಯದವರೆಗೂ ಬಚ್ಚಿಟ್ಟಿಕೊಂಡಿದ್ದ ಪ್ರಕೃತಿ ಸೌಂದರ್ಯ ಕುವೆಂಪುರವರ ಕಾವ್ಯದಲ್ಲಿ ಅದ್ಭುತವಾಗಿ ಸ್ವರ್ಗವನ್ನೇ ಮೂಡಿಸತೊಡಗಿತು. ಈ ಅಂಶದ ಕವನವನ್ನು ಗಮನಿಸುವುದಾದರೆ

ಶರತ್ಕಾಲದ ಸೂರ್ಯೋದಯದಲಿ
ಸ್ವರ್ಗವು ಹೊಮ್ಮಿರೆ ಮರ್ತ್ಯಹೃದಯದಲಿ,
ಹೊರ ಹೊರಟೆನು ನಾ ಸಂಚರಿಸೆ.
ಹೊಂಗದಿರ್ಗಳ ಮಳೆ ಸುರಿಸುರಿದಿತ್ತು:
ಬಂಗಾರದ ಹೊಳೆ ಹರಿದಾಡಿತ್ತು,
ತಿರೆ ಸಗ್ಗವದಾಯಿತೊ ಎನಿಸೆ!

(ಶರತ್ಕಾಲದ ಸೂರ್ಯೋದಯದಲಿ)

ಈ ಕವನದಲ್ಲಿ ಪ್ರಕೃತಿಯನ್ನು ಮತ್ತು ಅದರ ಸೌಂದರ್ಯವನ್ನು ಕವಿ ಸ್ವರ್ಗಕ್ಕೆ ಹೋಲಿಸುತ್ತಾ ಸ್ವರ್ಗದ ಕಲ್ಪನೆಯನ್ನು ಪ್ರಶ್ನಿಸುತ್ತಾರೆ. ಆದ್ದರಿಂದ ಕುವೆಂಪುರವರಿಗೆ ಆ ಸ್ವರ್ಗದ ಕಲ್ಪನೆಯ ಅನುಭವವನ್ನು ಪ್ರಕೃತಿ ತುಂಬಿಸಿದೆ. ಆದ್ದರಿಂದ ಕುವೆಂಪುರವರು ಪ್ರಕೃತಿಯನ್ನು ತಮ್ಮ ಕವನಗಳ ಸರ್ವಸ್ವವಾಗಿ ಸ್ವೀಕರಿಸಿದ ಅಂಶವು ಸಹ ಕಾಣುತ್ತದೆ. ಹಾಗೂ ಅದೇ ರೀತಿಯ ಅಂಶಗಳು ಕವನದ ಉದ್ದಕ್ಕೂ ಗೋಚರವಾಗುತ್ತದೆ. ಆದ್ದರಿಂದ ಕುವೆಂಪುರವರು ಪ್ರಕೃತಿಯ ಕವಿಯೇ ಸರಿ.

ತಮ್ಮ ಕವನಗಳಲ್ಲಿ ನಿಸರ್ಗದ ಅನನ್ಯತೆಯನ್ನು ಮೂಡಿಸಿದ ಕುವೆಂಪುರವರು ಪ್ರಕೃತಿಯಲ್ಲೇ ಒಂದಾಗುವ ಮೂಲಕ ಅಂತರ್ಮುಖಿಯಾಗುವುದನ್ನು ಮನಗಾಣಬಹುದು. ಈ ದಿಶೆಯಲ್ಲಿ ಪ್ರಕೃತಿಯ ಪ್ರೇಮ ಮತ್ತು ಪ್ರಕೃತಿಯ ಬಗೆಗಿನ ಕಾಳಜಿ ಗಮನಾರ್ಹವಾದಂತೆ ತನ್ಮಯತೆಯಿಂದ ಮೈಮರೆತ ಕುವೆಂಪು ದರ್ಶನದ ಅಭಿವ್ಯಕ್ತಿಯನ್ನು ಕಾಣುತ್ತಾರೆ. ಈ ದರ್ಶನದ ಅಭಿವ್ಯಕ್ತಿ ಎಂತಹುದು ಎಂಬುದನ್ನು ಕುವೆಂಪುರವರು "ಪ್ರಕೃತಿ ವಿಷಯವಾದ ಕವಿಯ ದೃಷ್ಟಿ ಪೂರ್ಣದೃಷ್ಟಿಯಾಗಿ, ಅದು 'ದರ್ಶನ' ಎಂಬ ಹೆಸರಿಗೆ ಅರ್ಹವಾಗಬೇಕಾದರೆ ಕಾಲವೂ ಬೇಕು, ಸಾಧನೆಯೂ ಬೇಕು. ಅರಿತು ಮಾಡಲಿ, ಅರಿಯದೆ ಮಾಡಲಿ ಆ ಸಾಧನೆ ತಪಸ್ಯೆಯ ರೂಪವನ್ನು ತಾಳಿಯೆ ತಾಳುತ್ತದೆ. ಅಂತಹ ಸಹಜ ಯೋಗಸಾಧನೆಯಿಂದ ಕವಿ ದ್ರಷ್ಟಾರನಾದ ರಸಋಷಿಯಾಗಿ ಪೂರ್ಣದೃಷ್ಟಿಯ ದರ್ಶನಕ್ಕೇರುತ್ತಾನೆ"[7]. ಎಂಬ ವಿವರವನ್ನು ನೀಡುತ್ತಾರೆ.

ಈ ದರ್ಶನದ ಅಭಿವ್ಯಕ್ತಿಯಲ್ಲಿ ಕುವೆಂಪುರವರು ಒಂಟಿ ಪಯಣಿಗನಂತೆ ಕಂಡರೂ ಸಹ ಶ್ರೀಸಾಮಾನ್ಯನನ್ನು ಕರೆಯುವ ಅಂಶವನ್ನು ಕಾಣಬಹುದು. ಅದು ಒಂದು ಹಂತದವರೆಗೂ ಮೌನ ಮತ್ತು ಸೌಂದರ್ಯದ ಆರಾಧನೆಯಲ್ಲಿ ಮೈಮರೆತ ಕವಿ ಒಂಟಿ ಪಯಣಿಗನಂತೆ ಕಾಣುತ್ತಾರೆ. ಆದರೆ ಅಲ್ಲಿ ಒಳಹೊಕ್ಕು ನೋಡಿದರೆ ಕುವೆಂಪುರವರು ಜನಸಾಮಾನ್ಯರ ನಡುವೆ ನಿಂತಿರುವುದನ್ನು ಗಮನಿಸಬಹುದಾಗಿದೆ.

ಮುಂದೆ ಕುವೆಂಪುರವರು ನಿಸರ್ಗದಲ್ಲಿ ಒಂದಾಗುತ್ತಾ, ಅಂತರ್ಮುಖಿಯಾದಂತೆ ದರ್ಶನವನ್ನು ಪಡೆಯುತ್ತಾರೆ. ಈ ದರ್ಶನದ ಅಭಿವ್ಯಕ್ತಿ ಎನ್ನುವುದು ಮೇಲುನೋಟಕ್ಕೆ ಆಧ್ಯಾತ್ಮದ ವಿಚಾರವಾಗಿ ಕಂಡರೂ ಸಹ ಕುವೆಂಪುರವರ ಕವನಗಳಲ್ಲಿ ಅದು ಉಳಿಯದೆ ತಾಕೂ ತಾಕದೇ ಚಲಿಸುತ್ತದೆ. ಇಂತಹ ಸ್ಥಿತಿಯನ್ನು ತಲುಪುವ ಕವಿ ತಮ್ಮ ಲೇಖನದಲ್ಲಿ ಕೆಲವು ಹಂತಗಳನ್ನು ಸೂಚಿಸುತ್ತಾ ಈ ಒಂದು ಪ್ರಕೃತಿ ಸೌಂದರ್ಯದ ಉನ್ನತ ನೆಲೆ ಎಂತಹುದು ಎಂಬುದಕ್ಕೆ ವಿವರಣೆಯನ್ನು ನೀಡುತ್ತಾರೆ. ಅದು "ಪ್ರಕೃತಿಮಾತೆಯ ಮೇಲೆ ನಮಗಿರುವ ಪ್ರೇಮವು ಆಯಾ ಅವಸ್ಥೆಗಳಲ್ಲಿ ವ್ಯತ್ಯಾಸ ಹೊಂದುವುದು. ಅಂದರೆ ಪ್ರೀತಿಯೇನೋ ಇದ್ದೇ ಇರುವುದು. ಆದರೆ ಪ್ರೀತಿಯ ಲಕ್ಷಣವು ಬದಲಾಯಿಸುವುದು. ಅನುಭವವು ಹೆಚ್ಚಿದಂತೆಲ್ಲಾ ನಮ್ಮ ಪ್ರೇಮವು ಭಕ್ತಿರೂಪವನ್ನು ಹೊಂದುತ್ತಾ ಬರುವುದು.

ಅಂದರೆ ಮೊದಮೊದಲು ವಿಮರ್ಶಾ ವಿಹೀನವಾದ ವರ್ಣನಾತೀತವಾದ ಯಾವುದೋ ಒಂದು ಶಕ್ತಿ ನಮ್ಮನ್ನು ಆ ಕಡೆಗೆ ಎಳೆಯುವುದು. ಅನಂತರ ಪ್ರಕೃತಿ ನಮ್ಮ ಒಡನಾಡಿಯಂತೆ ತೋರುವುದು. ಆಗ ಪ್ರಪಂಚವೇ ಲೀಲಾಮಯವಾಗುವುದು. ನಿರ್ಮಲವಾದ ತೊರೆಗಳ ನಾದದಲ್ಲಿ ಒಬ್ಬ ಗೆಳೆಯನ ಬಾಲಕೇಳಿ ನುಡಿಗಳನ್ನು ಆಲಿಸುವೆವು. ಹಸುರಾಗಿಯೂ ಕೋಮಲವಾಗಿಯೂ ಇರುವ ಹುಲ್ಲಿನ ಎಸಳು ಮಂದಮಾರುತದಿಂದ ನಿಕಂಪಿತವಾಗುವುದನ್ನು ನೋಡಿದರೆ, ಬಹುದೂರದಿಂದ ನಮ್ಮನ್ನು ನೋಡಲು ಬಂದ ಯಾವನೋ ಒಬ್ಬನ, ಅಥವಾ ಎಂದೋ ನೋಡಿದ್ದು ಈಚೆಗೆ ಬಹುಕಾಲದಿಂದಲೂ ನೋಡದೆ ಕಾತರನಾಗಿದ್ದ ಪ್ರಿಯ ಸ್ನೇಹಿತನೊಬ್ಬನ ಜ್ಞಾಪಕವಾಗುವುದು. ಆಗ ಆ ಎಸಳನ್ನು ಆನಂದದಿಂದ ಸ್ಪರ್ಶಿಸುವೆವು. ಅದು ಗಾಢವಾದ ಹೃದಯವೇಶದಿಂದ ಉತ್ಪತ್ತಿಯಾಗುವುದು. ರಾಗವೆಂಬ ಪೀತಾಂಬರವನ್ನುಟ್ಟು, ಹಿಮಕಣಗಳೆಂಬ ಅಮಲ ಮೌಕ್ತಿಕಗಳನ್ನು ಧರಿಸಿ, ಗಂಧವನ್ನು ಲೇಪಿಸಿಕೊಂಡು ಉದಯಮಾರುತನಿಂದ ಬೀಸಲ್ಪಟ್ಟು, ಶಿರವನ್ನು ಒಯ್ಯೆಯ್ಯನೆ ಒಲೆದಾಡುವ ರಮಣಿಯಂತಹ ಪುಷ್ಪವನ್ನು ನೋಡಿದೊಡನೆ ವಿಶ್ವಮಾತೆ ನಮ್ಮ ಯೋಗಕ್ಷೇಮವನ್ನು ವಿಚಾರಿಸಿ ತಿಳಿದುಕೊಂಡು ಬರುವಂತೆ ಭೂಮಿಗೆ ಕಳುಹಿಸಿದ ದೇವದೂತಳೋ ಎಂಬಂತೆ ತೋರುವುದು. ಕೊನೆಗೆ ಪ್ರಕೃತಿ ಜೊತೆಗಾರನ ಪಾತ್ರವನ್ನು ಬುಸುಟು ವಿಶ್ವಮಾತೆಯಾಗುತ್ತಾಳೆ. ಆಗ ಎಲ್ಲೆಲ್ಲಿಯೂ ಪರಮಾತ್ಮನೆ ತೋರುವನು. ನೀಲಗಗನ, ಶೋಭಿಸುವ ದಿನೇಶ, ರಮಣೀಯವಾದ ಚಂದ್ರ, ಹಸುರಾದ ಅರಣ್ಯ, ಹೊಲಗದ್ದೆಗಳು ಇವೇ ಮೊದಲಾದವು ಪರಮಾತ್ಮನ ಸಾಕ್ಷಾತ್ಕಾರಗಳಾಗಿ ಪರಿಣಮಿಸುತ್ತದೆ. ಅಂಥವನಿಗೆ ಉಂಟಾಗತಕ್ಕ ಅನುಭವಗಳ ತೀಕ್ಷ್ಣತೆಯನ್ನು ತತ್ಪರತೆಯನ್ನೂ ಆನಂದವನ್ನೂ ಬಣ್ಣಿಸಲಾಗುವುದಿಲ್ಲ. ಸಕ್ಕರೆಯ ಮಾಧುರ್ಯವನ್ನು ವರ್ಣಿಸಿದರೆ ತಿಳಿಯುವುದೇ? ಸವಿದೇ ನೋಡಬೇಕು. ಆ ಸ್ಥಿತಿಯನ್ನು ಅನುಭವಿಸುವ ಕವಿ ಏಕಾಂಗಿಯಾಗಿ ಅರಣ್ಯ ನದೀತಟಗಳಲ್ಲಿ ಸಂಚರಿಸುತ್ತಾ ಇತರರಿಗೆ ಹುಚ್ಚನಂತೆ ತೋರುತ್ತಾನೆ. ಆತನ ಮನಶ್ಚಕ್ಷುಗಳಿಗೆ ಪರಬ್ರಹ್ಮನ ದಿವ್ಯಾತ್ಮವು ಎಲ್ಲೆಲ್ಲಿಯೂ ಗೋಚರವಾಗುವುದು".[2] ಇಲ್ಲಿ ಈ ಅಂಶ ದೀರ್ಘವಾಗಿ ನೀಡಿದ್ದಕ್ಕೆ ಕಾರಣವೆಂದರೆ: ಪ್ರಕೃತಿಯ ಸೌಂದರ್ಯದಲ್ಲಿ ಕುವೆಂಪು ಹೇಗೆ ದೇವರನ್ನು ಪರಿಭಾವಿಸುತ್ತಾರೆ ಎಂಬುದು ತಿಳಿಯುತ್ತದೆ. ಜೊತೆಗೆ ಕವಿಯಾಗಿ ಕುವೆಂಪು ಪ್ರಕೃತಿಯಲ್ಲಿ ದೇವರನ್ನು ಅಥವಾ ಆಧ್ಯಾತ್ಮದ ಅಂಶವನ್ನು ಹುಡುಕುತ್ತಿಲ್ಲ ಎಂಬ ಅಂಶದ ನಿಲುವನ್ನು ಕಾಣಬಹುದು. ಅದು ಪದ್ಯಗಳಲ್ಲಿ

ಶಿವ ಶಿವಾ ಕಣ್ದೆರೆದು
ಪ್ರಕೃತಿ ಸೌಂದರ್ಯಮಂ ಭಾವನೋಜ್ವಲವಾಗಿ
ನೋಡದಿಹ ಬಾಳೊಂದು ಬಾಳಲ್ಲ ಸೋಬಗಿನಲಿ
ಶಿವನಿಹವು ಶಿವನೆ ಸೊಬಗಾಗಿಹನು ಎನಿತೊರೆಯ
ಈ ವಚನ ಪುನರುಕ್ತಿಯಾದೀತು? ಹಳಸೀತು?
ಸತ್ಯಂ ಶಿವಂ ಸುಂದರಂ ಎಂದು ಹಾಡಿದರು

(ಪ್ರಕೃತಿ ಉಪಾಸನೆ)

ದೇವರು ರುಜು ಮಾಡಿದನು;
ರಸವಶನಾಗುತ ಕವಿ ಅದ ನೋಡಿದನು!

(ದೇವರು ರುಜು ಮಾಡಿದನು)

ಈ ಎರಡು ಕವನದ ಪದ್ಯಭಾಗವನ್ನು ಗಮನಿಸಿದರೆ ಮೇಲಿನ ಅಂಶಗಳಿಗೆ ಸ್ಪಷ್ಟತೆ ದೊರೆಯುತ್ತದೆ. ಅಂದರೆ ಸೌಂದರ್ಯವೇ ಇಲ್ಲಿ ಮುಖ್ಯವಾಗುತ್ತ ಪ್ರಕೃತಿ ಸೌಂದರ್ಯದ ಹಿನ್ನೆಲೆಯಲ್ಲೇ ದೇವರನ್ನು ಕವಿ ಕಾಣುತ್ತಾರೆ. ಮುಂದೆ

ಪೃಥ್ವಿಯಲಿ ಕ್ಲೇಶಕಷ್ಟಗಳೆಲ್ಲ ಕೊನೆಮುಟ್ಟಿ
ಸರ್ವರೂ ರಸದ್ರಷ್ಟರಾಗಿ ದರ್ಶನ ಪಡೆದು,
ಕಾವ್ಯದಾಸ್ವಾದನೆಗೆ ಸೌಂದರ್ಯಸಾಧನೆಗೆ,
ಕಲೆಯ ಆರಾಧನೆ ಮನವೀಯುವಾ ಪುಣ್ಯ
ಸ್ವರ್ಗವೆಂದೈತರುವುದೋ ಕಾಣೆ! ಅದು ಬರಿಯ
ಕನಸೆಂದು ತೋರುತಿದೆ. ಆದರೇನೆಲ್ಲರೂ
ಏಳುವನ್ನೆಗಮೆಲ್ಲರೂ ಮಲಗಬೇಕೇನು?
ಸೋದರನೆ, ಮೊದಲು ನೀನೆದ್ದು ಮನಸನು ಮಾಡು!

(ಪ್ರಕೃತಿ ಉಪಾಸನೆ)

ಈ ಕವಿತೆಯ ಸಾಲುಗಳ ಹಿನ್ನೆಲೆಯಲ್ಲಿ ಕುವೆಂಪುರವರು ಕೇವಲ ನಿಸರ್ಗ ಸೌಂದರ್ಯದ ವರ್ಣನೆಗೆ ಮಾತ್ರ ತಮ್ಮ ಕವನಗಳನ್ನು ಸೀಮಿತವಾಗಿಸದೇ ಪ್ರಕೃತಿಯ ಮೂಲಕ ಜೀವನ ಸಂದೇಶ ಮತ್ತು ವೈಚಾರಿಕತೆಯನ್ನು ಸಹ ಒಳಗುಮಾಡಿದ್ದಾರೆ. ದೇವರು, ದೇವಾಲಯ, ಧರ್ಮಗಳ ಪರಂಪರೆಯನ್ನು ತಿರಸ್ಕರಿಸುತ್ತಾ, ನಿಸರ್ಗದಲ್ಲಿ ಒಂದಾಗುವ ಕುವೆಂಪುರವರು ಕವನಗಳಲ್ಲಿ ಪ್ರಗತಿಪರತೆಯನ್ನು ಸಹ ಮೂಡಿಸಿದ್ದಾರೆ. ಆದರೆ ಒಂದು ಕಡೆ ನಿಸರ್ಗದ ಸೌಂದರ್ಯದಲ್ಲಿ ದೇವರನ್ನು ಕಾಣುವ ಕುವೆಂಪುರವರು ಲೌಕಿಕವಾಗಿ ನಿರ್ಮಿತವಾಗಿರುವ ದೇವರು, ದೇವಾಲಯಗಳನ್ನು ತಿರಸ್ಕರಿಸುವುದು ಏಕೆ? ಎಂಬ ಭಾವನೆ ಮೂಡಿಬರುತ್ತದೆ. ಆದರೆ ಇಲ್ಲಿ ಕುವೆಂಪುರವರು ತಿರಸ್ಕರಿಸುವುದು ಮೌಢ್ಯತೆಯಿಂದ ತುಂಬಿದ ನಂಬಿಕೆ, ಆಚಾರಣೆ, ಸಮನ್ವಯ ಮತ್ತು ಸಮಾನತೆಯ ದೃಷ್ಟಿ ಇಲ್ಲದಿರುವ ಧರ್ಮವನ್ನು ಎಂಬುದು ಅವರ ಕವನಗಳ ಮೂಲಕ ತಿಳಿಯುತ್ತದೆ. ಅಂತಹ ಕವನಗಳನ್ನು ಗುರುತಿಸುವುದಾದರೆ

ಯಾವ ಗುಡಿ
ಮಿಗಿಲು ಈ ಭುವನ ದೇವಾಲಯಕೆ? ಮೇಣಾವ
ವಿಗ್ರಹಂ ಮಿರಿರುವುದೀ ಚೈತ್ರ ಪಂಚಮಿಯ
ಪುಣ್ಯ ಪ್ರಭಾತದಲಿ, ದೂರದ ದಿಗಂತದಿಂ
ಪ್ರತ್ಯಕ್ಷವಾಗಿರುವ ಭವ್ಯಸುಂದರ ದಿವ್ಯ
ಸೂರ್ಯದೇವನಿಗೆ? ಮೇಣಾವುದಾರಾಧನೆಯ
ಉಪಮಾನವೀ ನಿರುಪಮ ಕಲಾ ಉಪಾಸನೆಗೆ?
ಈ ಅನುಭವದೊಳಿಲ್ಲದಾನಂದಮೂರ್ತಿಯಾ
ಪರಮಾತ್ಮನಿನ್ನಾವ ಪೂಜೆ ಜಪತಪಗಳಲಿ
ದೊರೆಕೊಳ್ಳುವಂ?

(ಪ್ರಕೃತಿ ಉಪಾಸನೆ)

ಅಲ್ಲಿ ಇಂತಿರಬೇಕು, ಇಂತಿರಬಾರದೆಂಬುವುದಿಲ್ಲವೈ;
ಅಲ್ಲಿ ಹೊರೆ ಹೊಣೆಯಿಲ್ಲ; ಶಾಸ್ತ್ರದ ವಿಧಿ ನಿಷೇಧಗಳಿಲ್ಲವೈ;

ಜಾತಿಗೀತಿಯ ವೇದಭೇದದ ಕಟ್ಟುಕಟ್ಟಳೆ ನಿಲ್ಲದೈ:
ಅಲ್ಲಿ ಪ್ರೀತಿಯೆ ನೀತಿ; ಧರ್ಮಕೆ ಬೇರೆ ಭೀತಿಯೆ ಸಲ್ಲದೈ!
(ಹೋಗುವೆನು ನಾ)

ಈ ರೀತಿಯ ವೈಚಾರಿಕತೆಯನ್ನು ನಿಸರ್ಗದ ನೆಲೆಯಲ್ಲೇ ಸಮೀಕರಿಸಿ ನೀಡುವ ಕವಿ ಕುವೆಂಪುರವರು ತಮ್ಮ ಕೆಲವು ಕವನಗಳಲ್ಲಿ ಸಮಾಜದಲ್ಲಿ ಧರ್ಮದ ಹೆಸರಿನಲ್ಲಿ ಶ್ರೀಸಾಮಾನ್ಯರ ಮೇಲೆ ದೇವರು, ಧರ್ಮಗಳ ನಂಬಿಕೆ, ಪುನರ್ಜನ್ಮಗಳನ್ನು ಹೇರುವ ಹಿನ್ನೆಲೆಯಲ್ಲಿ ಕುವೆಂಪುರವರು ಪರಂಪರೆಯ ಅಂಶವನ್ನು ನಿಷ್ಠುರವಾಗಿ ಕಡೆಗಣಿಸುತ್ತಾರೆ. ಅಂದರೆ ಇವುಗಳ ಹಿಂದೆ ಇರುವ ಮೌಢ್ಯತೆ, ವೈಚಾರಿಕತೆ ಇಲ್ಲದಿರುವ ಅಂಶಗಳ ಕಡೆಗೆ ಅವರ ವಿರೋಧ. ಹೀಗೆ ಕುವೆಂಪು ಅವರಿಗೆ ಬೇಕಾಗಿರುವುದು ಸುಭದ್ರವಾದ ವೈಚಾರಿಕತೆಯ ಸಮಾಜದ ಮೇಲೆ ನಿಂತು ನಾಳಿನ ನೂತನ ಆಗಮಿಕದತ್ತ ಮುಂದುವರೆಯ ಬೇಕೆನ್ನುವುದು. ಆದ್ದರಿಂದ ಕುವೆಂಪುರವರು ನಿರಂಕುಶಮತಿಗಳಾಗುವಂತೆ ಯುವ ಜನಾಂಗವನ್ನು ಎಚ್ಚರಿಸುತ್ತಾರೆ. ಈ ಅಂಶಗಳನ್ನು ಅವರ 'ವಿಚಾರ ಕ್ರಾಂತಿಗೆ ಆಹ್ವಾನ', 'ಜನತಾ ಪ್ರಜ್ಞೆ ಮತ್ತು ವೈಚಾರಿಕತೆ'* ಎಂಬ ಭಾಷಣಗಳಲ್ಲಿ ಕಾಣಬಹುದು. ಒಟ್ಟಾರೆಯಾಗಿ ಕುವೆಂಪುರವರು ಹೇಳುವಂತೆ ಅವರ ಸಾಹಿತ್ಯವೆಂಬುದು "ಬದುಕಿನಿಂದ ಬದುಕಿಗಾಗಿ ಮತ್ತು ಬದುಕಿನಾಚೆಯ ಬದುಕಿಗಾಗಿ" ಎಂಬುದು ಸರ್ವವಿಧಿತವಾಗುತ್ತದೆ".[೩]

****

ಈ ಅಧ್ಯಾಯದ ಹಿನ್ನೆಲೆಯಲ್ಲಿ ಕೆಲವು ಅಂಶಗಳನ್ನು ಗುರುತಿಸುವುದಾದರೆ

೧. ಕುವೆಂಪುರವರು ಪ್ರಕೃತಿಯನ್ನು ಮತ್ತು ಪ್ರಕೃತಿ ಸೌಂದರ್ಯವನ್ನು ತಮ್ಮದಾಗಿಸಿ ಕೊಳ್ಳುತ್ತಾ ನಿಸರ್ಗದ ಚೆಲುವನ್ನು ಸ್ವರ್ಗಕ್ಕೆ ಸಮೀಕರಿಸಿದ್ದಾರೆ.

೨. ಕುವೆಂಪುರವರು ಕವನಗಳ ಮೂಲಕ ಒಂಟಿ ಪಯಣಿಗನಂತೆ ಕಂಡರೂ ಅದು ಸೌಂದರ್ಯದ ಉನ್ನತ ಆರಾಧನೆಯ ಸ್ಥಿತಿ ಮಾತ್ರ. ನಂತರದಲ್ಲಿ ಜನಸಮುದಾಯದ ಮಧ್ಯದಲ್ಲೇ ಇರುತ್ತಾರೆ. ಆದ್ದರಿಂದ ಕುವೆಂಪು ಪ್ರಕೃತಿಯಲ್ಲಿ ಒಂಟಿ ಪಯಣಿಗ ಎಂದು ನಿರ್ಧರಿಸಲು ಸಾಧ್ಯವಿಲ್ಲ.

೩. ಕವನಗಳ ಮೂಲಕ ಕುವೆಂಪುರವರು ಆಧ್ಯಾತ್ಮಕ್ಕೆ ಒಲಿದಂತೆ ಕಂಡರೂ ಸಹ ಅದು ಸೂಕ್ಷ್ಮವಾದ ಕ್ರಿಯೆಯಾಗಿ ಮತ್ತು ಪ್ರಕೃತಿಯ ಆನಂದದ ಪೂರ್ಣತೆಯಲ್ಲಿ ಲೀನವಾಗುತ್ತದೆ.

ಅಡಿಟಿಪ್ಪಣಿ

೧. ಕುವೆಂಪು ಸಮಗ್ರ ಗದ್ಯ ಸಂಪುಟ: ೦೧ ಸಂ. ಕೆ.ಸಿ. ಶಿವಾರೆಡ್ಡಿ
ಪುಟ ೨೮೭, ಪ್ರ ೨೦೦೩, ಪ್ರಸಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಕುವೆಂಪು ಸಮಗ್ರ ಗದ್ಯ ಸಂಪುಟ: ೦೧ ಸಂ. ಕೆ.ಸಿ. ಶಿವಾರೆಡ್ಡಿ
ಪುಟ ೫೭೫, ಪ್ರ ೨೦೦೩, ಪ್ರಸಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಕುವೆಂಪು ಕಾವ್ಯದಲ್ಲಿ ಪ್ರಕೃತಿ ಒಂದು ಅಧ್ಯಯನ: ಲೇ. ಲತಾ ರಾಜಶೇಖರ್
ಪುಟ ೮೦, ಪ್ರ ೨೦೦೩, ಸಹ್ಯಾದ್ರಿ ಪ್ರಕಾಶನ, ಮೈಸೂರು

---

*ಕುವೆಂಪು ಸಮಗ್ರ ಗದ್ಯ ಸಂಪುಟ ೦೨ ಸಂ.ಕೆ.ಸಿ. ಶಿವಾರೆಡ್ಡಿ 'ಭಾಷಣ ಲೇಖನಗಳು' ಪ್ರ. ೨೦೦೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

ಉಪಸಂಹಾರ

ಹಲವಾರು ದಶಕಗಳಿಂದ ಕುವೆಂಪುರವರ ಸಾಹಿತ್ಯವನ್ನು ಹಲವಾರು ರೀತಿಯಲ್ಲಿ ವಿಮರ್ಶಕರು ಅಧ್ಯಯನ ಮಾಡಿದ್ದಾರೆ. ಇಂತಹ ಅಧ್ಯಯನಗಳು ನಡೆದರೂ ಸಹ ಕುವೆಂಪುರವರ ಸಾಹಿತ್ಯವು ಎಲ್ಲಾ ಎಳೆಯನ್ನು ಬಿಟ್ಟುಕೊಟ್ಟಿಲ್ಲ. ಈ ನಿಟ್ಟಿನಲ್ಲಿ ಕುವೆಂಪು ಸಾಹಿತ್ಯ ಎಷ್ಟು ಮಗ್ಗುಲಿನಿಂದ ಅಧ್ಯಯನಕ್ಕೆ ಒಳಪಡಿಸಿದರೂ ಸಹ ಅದು ತನ್ನ ವಿಶಿಷ್ಟತೆಯನ್ನು ಉಳಿಸಿಕೊಳ್ಳುತ್ತದೆ. ಇಂತಹ ವ್ಯಾಪಕತೆಯನ್ನು ಹೊಂದಿರುವ ಕುವೆಂಪು ಸಾಹಿತ್ಯದಲ್ಲಿ ಪಕ್ಷಿಕಾಶಿ ಕವನ ಸಂಕಲನವೂ ಸಹ ಒಂದು. ಅಂತಹ ಪಕ್ಷಿಕಾಶಿ ಕವನ ಸಂಕಲನವನ್ನು ಅಧ್ಯಯನಕ್ಕೆ ಒಳಗುಮಾಡುವುದರ ಮೂಲಕ ಈ ಸಂಕಲನವನ್ನು ಅರ್ಥೈಸುವ ಪ್ರಯತ್ನ ಮಾಡಲಾಗಿದೆ.

ಕುವೆಂಪು ಅವರು ಮಹೋನ್ನತ ಪ್ರತಿಭೆಯ ಕವಿ. ಕನ್ನಡ ಭಾಷೆಯ ಅಭಿವ್ಯಕ್ತಿ ಸಾಧ್ಯತೆಗಳನ್ನು ಸೂರೆಗೊಂಡವರು. ಸತ್ಯ, ಶಿವ, ಸೌಂದರ್ಯದ ಹಿನ್ನೆಲೆಯಲ್ಲಿ ಕುವೆಂಪು ಪ್ರಕೃತಿಯನ್ನು ಪರಿಭಾವಿಸಿ ಅದರ ಮೂಲಕವೇ ದರ್ಶನ ಮಂತ್ರವನ್ನು ಹಾಡಿದರು. ಕುವೆಂಪುರವರ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವವಿದ್ದರೂ ಸಹ ಅದನ್ನು ಮೀರಿ ಬೆಳೆದರು. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ನಿಸರ್ಗ ಕಾವ್ಯಕ್ಕೆ ಹೊಸ ಆಯಾಮವನ್ನು ಸೃಷ್ಟಿಸಿದರು. ಇಂತಹ ಕವನಗಳು ಸರ್ವೋದಯ ಸಮನ್ವಯ ಮತ್ತು ಸಮಗ್ರವೂ, ಸರ್ವತೋಮುಖವೂ ಆದ ಮೂಲಭೂತ ನೆಲೆಯನ್ನು ಒಳಗೊಂಡಿದೆ.

ಪ್ರಕೃತಿಯ ಬಗೆಗಿನ ಕುವೆಂಪುರವರ ಉತ್ಕಟ ಪ್ರೇಮ ಕವನಗಳಲ್ಲಿ ವಿಶಿಷ್ಟವಾಗಿ ಮೂಡಿಬಂದಿದೆ. ಅವು ಸೂರ್ಯೋದಯ ಗೀತೆಗಳಾಗಿ, ಚಂದ್ರೋದಯ ಗೀತೆಗಳಾಗಿ, ಮಲೆನಾಡಿನ ಹಚ್ಚ ಹಸುರಿನ ವರ್ಣನೆಯ ಗೀತೆಗಳಾಗಿ ಕಂಡುಬರುತ್ತದೆ. ವಿಶೇಷವಾಗಿ ಸೂರ್ಯೋದಯ ಗೀತೆಗಳು ಚೈತನ್ಯದ ಸೆಲೆಯಾಗಿ ಕಾಣುವುದು ಈ ಗೀತೆಗಳ ವೈಶಿಷ್ಟವಾಗಿದೆ. ನಂತರ ಕುವೆಂಪುರವರ ಕವನ ಕೇವಲ ಸೌಂದರ್ಯದ ದಾಖಲೆಗಳಾಗಿ ಉಳಿಯದೆ ಸಮಾಜದ ಕಲುಷಿತ ವಾತಾರವಣವನ್ನು ಕವಿ ಪ್ರಕೃತಿಯ ಹಿನ್ನೆಲೆಯಲ್ಲೇ ತಿರಸ್ಕರಿಸುವುದನ್ನು ವಿಶೇಷವಾಗಿ ಗಮನಿಸಬಹುದು. ಈ ಅಂಶವನ್ನೇ ಕೊನೆ ಮಾಡದೆ ನಿಸರ್ಗ ಪ್ರೀತಿ, ಪ್ರಜ್ಞೆಯಲ್ಲಿಯೇ ಚಿಂತನೆಯನ್ನು ಜಾಗೃತಗೊಳಿಸುವ ಕಾರ್ಯವನ್ನು

ಮಾಡುತ್ತಾರೆ. ಅವುಗಳಲ್ಲಿ ಸಮಾಜದ ವೌಢ್ಯತೆ ಮತ್ತು ಯುವ ಜನಾಂಗವನ್ನು ಎಚ್ಚರಿಸುವ ಸ್ಥಿತಿ ಪ್ರಮುಖವಾಗುತ್ತದೆ.

ಉಳಿದಂತೆ ನಿಸರ್ಗದ ವೈವಿಧ್ಯತೆ, ವೈಚಾರಿಕತೆ, ಸಾಮಾಜಿಕ ಪ್ರಜ್ಞೆ ಚಿಂತನೆಯನ್ನು ಹರಳುಗಟ್ಟಿಸುವ ಪ್ರಯತ್ನದಲ್ಲಿ ಕೆಲವು ಕವನಗಳು ಸೋತಿದ್ದರೂ ಸಹ ಉಳಿದ ಕವನಗಳ ಮೂಲಕ ಅವು ಮರೆಯಾಗುತ್ತದೆ. ಒಟ್ಟಾರೆಯಾಗಿ ಕುವೆಂಪು ಮತ್ತು ಕುವೆಂಪುರವರ ಸಾಹಿತ್ಯ "ಹೊಸಗನ್ನಡ ಸಾಹಿತ್ಯದ ಹಿಮಾಚಲ, ಹಿಮಾಚಲ ಅತ್ಯಂತ ಎತ್ತರವೂ ಹೌದು ಅತ್ಯಂತ ಬಿತ್ತರವೂ ಹೌದು. ಹಾಗೆಯೇ ಅದು ದಿವ್ಯವೂ ಹೌದು. ಭವ್ಯವೂ ಹೌದು. ಅದಕ್ಕೆ ನೂರಾರು ಮುಖ, ನೂರಾರು ಮಟ್ಟ. ನೂರಾರು ದಾರಿ. ಅದರ ಒಂದೊಂದು ಮುಖದಲ್ಲಿ ಒಂದೊಂದು ದಾರಿಯಲ್ಲಿ ಒಂದೊಂದು ರೀತಿಯ ವಿಶಿಷ್ಟಾನುಭವ ದರ್ಶನಾರ್ಥಿಗಳ ಹೃದಯವನ್ನು ತುಂಬುತ್ತದೆ.*

****

*ಕುವೆಂಪು ಸಮಗ್ರ ಗದ್ಯ ಸಂಪುಟ ೦೧ ರ ಮುನ್ನುಡಿಯಿಂದ

ಆಕರ ಗ್ರಂಥ ಸೂಚಿ

೧. ಕನ್ನಡದಲ್ಲಿ ಭಾವಗೀತೆ: ಲೇ. ಪ್ರಭುಶಂಕರ
ಪ್ರ. ಡಿ.ವಿ.ಕೆ. ಮೂರ್ತಿ, ೨೦೦೦, ಮೈಸೂರು

೨. ಕುವೆಂಪು ಸಮಗ್ರ ಗದ್ಯ: ಸಂಪುಟ ೦೧ ಸಂ. ಕೆ.ಸಿ. ಶಿವಾರೆಡ್ಡಿ
ಪ್ರ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೦೩, ಹಂಪಿ

೩. ಕುವೆಂಪು ಸಮಗ್ರ ಗದ್ಯ: ಸಂಪುಟ ೦೨ ಸಂ. ಕೆ.ಸಿ. ಶಿವಾರೆಡ್ಡಿ
ಪ್ರ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೦೩, ಹಂಪಿ

೪. ಕುವೆಂಪು ಕಾವ್ಯದಲ್ಲಿ ಪ್ರಕೃತಿ ಒಂದು ಅಧ್ಯಯನ: ಲೇ. ಲತಾರಾಜಶೇಖರ್
ಪ್ರ. ಸಹ್ಯಾದ್ರಿ ಪ್ರಕಾಶನ, ೨೦೦೩, ಮೈಸೂರು

೫. ಕುವೆಂಪು ಕಾವ್ಯ: ಲೇ. ನರಹಳ್ಳಿ ಬಾಲಸುಬ್ರಹ್ಮಣ್ಯ
ಪ್ರ. ಅಂಕಿತ ಪುಸ್ತಕ, ೨೦೦೪, ಬೆಂಗಳೂರು

೬. ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ ಸಾಮಾಜಿಕ ಪ್ರಜ್ಞೆ: ಲೇ. ಕೋ. ಚೆನ್ನಬಸಪ್ಪ
ಪ್ರ. ನವಕರ್ನಾಟಕ, ೨೦೦೪, ಬೆಂಗಳೂರು

೭. ಕೊಳಲು: ಲೇ. ಕುವೆಂಪು
ಪ್ರ. ಉದಯ ರವಿ ಪ್ರಕಾಶನ, ೧೯೯೯, ಮೈಸೂರು

೮. ನನ್ನ ನಲ್ಲ: ಲೇ. ಮಧುರಚೆನ್ನ(ಅನುವಾದ 'ಜೀವಿ' ಕುಲಕರ್ಣಿ)
ಪ್ರ. ಹರ್ಷವರ್ಧನ ಪ್ರಕಾಶನ, ೨೦೦೫, ಮುಂಬಯಿ

೯. ನಮಸ್ಕಾರ: ಲೇ. ಎಚ್.ಎಸ್.ರಾಘವೇಂದ್ರರಾವ್
ಪ್ರ. ಅಭಿನವ, ೨೦೦೬, ಬೆಂಗಳೂರು

೧೦. ಮಲೆನಾಡಿನ ಚಿತ್ರಗಳು; ಲೇ. ಕುವೆಂಪು
ಪ್ರ. ಉದಯರವಿ ಪ್ರಕಾಶನ, ೨೦೦೭, ಮೈಸೂರು

೧೧. ಪಕ್ಷಿಕಾಶಿ: ಲೇ. ಕುವೆಂಪು
ಪ್ರ. ಉದಯರವಿ ಪ್ರಕಾಶನ, ೨೦೦೩, ಮೈಸೂರು

೧೨. ಯುಗಧರ್ಮ ಹಾಗೂ ಸಾಹಿತ್ಯ ದರ್ಶನ: ಲೇ. ಕೀರ್ತಿನಾಥ ಕುರ್ತುಕೋಟಿ
ಪ್ರ. ಮನೋಹರ ಗ್ರಂಥಮಾಲಾ, ೨೦೦೨, ಧಾರವಾಡ

೧೩. ರಸ ಸಿದ್ಧಿ: ಲೇ. ಬೈರಮಂಗಲ ರಾಮೇಗೌಡ
ಪ್ರ. ಸಮಾನ ಮನಸ್ಕರ ಒಕ್ಕೂಟ, ೨೦೦೩, ಬೆಂಗಳೂರು

೧೪. ಶ್ರೀ ಕುವೆಂಪು: ಲೇ. ಜಿ.ಎಸ್. ಶಿವರುದ್ರಪ್ಪ
ಪ್ರ. ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ೨೦೦೪, ಬೆಂಗಳೂರು

೧೫. ಸಹ್ಯಾದ್ರಿಯ ಸೂರ್ಯ: ಸಂ. ಚಕ್ಕೆರೆ ಶಿವಶಂಕರ್
ಪ್ರ. ಕನ್ನಡ ಸಾಹಿತ್ಯ ಪರಿಷತ್ತು, ೨೦೦೪, ಬೆಂಗಳೂರು

೧೬. ಹಾಡೆ ಹಾದಿಯ ತೋರಿತು: ಲೇ. ಎಚ್.ಎಸ್.ರಾಘವೇಂದ್ರರಾವ್
ಪ್ರ. ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ೧೯೯೫, ಬೆಂಗಳೂರು